
# ಅಪರಂಜಿ

ತಿಳಿನಗೆಯ ಕಾರಂಜಿ

ಸೆಪ್ಟೆಂಬರ್ 2025




ಬಿಡಿ ಪ್ರತಿ: ರೂ. 10/–

TEMPLE OF KNOWLEDGE

ಬೀchi ಸಾಹಿತ್ಯ

# ಬೀChi Prakashana

1. ರೇಡಿಯೋ ನಾಟಕಗಳು
2. ಮಾತ್ರೆಗಳು
3. ತಿಂಮನ ತಲೆ
4. ದಾಸಕೂಟ
5. ಹುಚ್ಚು ಹುರುಳು
6. ಹನ್ನೊಂದನೆ ಅವತಾರ
7. ಸತೀಸೂಳೆ
8. ಸರಸ್ವತಿ ಸಂಹಾರ
9. ಖಾದೀಸೀರೆ
10. ಬೆಂಗಳೂರು ಬಸ್ಸು
11. ಹೆಣ್ಣು ಕಾಣದ ಗಂಡು
12. ಸತ್ತವನು ಎದ್ದು ಬಂದಾಗ
13. ಚಿನ್ನದ ಕಸ
14. ಕಾಣದ ಸುಂದರಿ
15. ಕಲ್ಲು ಹೇಳಿತು
16. ತಿಮ್ಮ ರಸಾಯನ
17. ದೇವನ ಹೆಂಡ
18. ಏರದ ಬಳೆ
19. ಮೇಡಮ್ಮನ ಗಂಡ
20. ಆಟೋ !
21. ಎಲ್ಲಿರುವೆ ತಂದೆ ಬಾರೋ
22. ಬಂಗಾರದ ಕತ್ತೆ
23. ಎಲ್ಲರೂ ಸಂಪನ್ನರೇ
24. ಟೆಂಟ್ ಸಿನೇಮಾ
25. ಬ್ರಹ್ಮಚಾರಿಯ ಮಗ
26. ಬೆಳ್ಳಿ ತಿಂಮ ನೂರೆಂಟು ಹೇಳಿದ
27. ಮೂರು ಹೆಣ್ಣು ಐದು ಜಡೆ
28. ಮುರಿದ ಬೊಂಬೆ
29. ಹುಲಿಯ ಬೆನ್ನ ಮೇಲಿಂದ
30. ಸುನಂದೂಗೆ ಏನಂತೆ ?
31. ಕಮಲಮ್ಮನ ಕುಂಕುಮ ಬಲ
32. 6-7 ಸ್ತ್ರೀ ಸೌಖ್ಯ
33. ಆಗಿಷ್ಟು-ಈಗಿಷ್ಟು
34. ಸೀತೂ ಮದುವೆ
35. ಲೇವಡಿ ಟೈಪಿಸ್ಟ್
36. ಆರಿದ ಚಹಾ
37. ಸಕ್ಕರೆ ಮೂಟೆ
38. ಬೆಳ್ಳಿ ಪತ್ರಗಳು
39. ಮಹಾಯುದ್ಧ
40. ಲಕ್ಷ್ಮೀ ಪೂಜೆ
41. ದೇವರು ಕೊಟ್ಟಿದ್ದು
42. ಅಮ್ಮಾವ್ರ ಕಾಲ್ಗುಣ
43. ಸಾಹುಕಾರ ಸುಬ್ಬಮ್ಮ
44. ಸುಬ್ಬಿ !
45. ಕತ್ತಲಲ್ಲಿ ಬಂದವಳು
46. ಹೆಂಡತಿ ನಕ್ಕಾಗ
47. ಚಿತ್ತದ್ದೇ ಬೇವು
48. ಕಾಮಂಣ
49. ಕಾಮಲೋಕ
50. ಮಾತನಾಡುವ ದೇವರುಗಳು
51. ಅಂದನಾ ತಿಂಮ
52. ಸಂಪನ್ನರಿದ್ದಾರೆ ಎಚ್ಚರಿಕೆ
53. ಗರತಿಯ ಗುಟ್ಟು
54. ಕಮಲೆಯ ಓಲೆಗಳು
55. ನಂಬರ್ ಐವತ್ತೈದು
56. ದೇವರಿಲ್ಲದ ಗುಡಿ
57. ಮನೆತನದ ಗೌರವ
58. ಉತ್ತರ ಭೂಪ
59. ಕನ್ನಡ ಎಮ್ಮೆ
60. ಅಮ್ಮನವರ ಇಚ್ಛಾ
61. ನರಪ್ರಾಣಿ
62. ನನ್ನ ಭಯಾಗ್ರಫಿ
63. ದೇವರಿಗೇ ಪ್ರೀತಿ
64. ಬೀchi ಬುಲ್ಲೆಟಿನ್
65. ಬೀchi ತೋಚಿದ್ದು ಗೀಚಿದ್ದು
66. ಬೊಂಬಾಟ್ ಬೀchi
67. ವಾಗ್ಬಾಣಗಳು (ಗಂಗಾವತಿ ಪ್ರಾಣೇಶ್)
68. ನಗಿಸುವವನ ನೋವುಗಳು (ಗಂಗಾವತಿ ಪ್ರಾಣೇಶ್)
69. Best of Best ಬರಹಗಳು ಭಾಗ-1 (ಬಿ.ಎಸ್.ಕೆ)
70. Best of Best ಬರಹಗಳು ಭಾಗ-2 (ಬಿ.ಎಸ್.ಕೆ)
71. ಪೊಲೀಸ್ ಎನ್‌ಕೌಂಟರ್ (ಡಾ. ಡಿ.ವಿ. ಗುರುಪ್ರಸಾದ್)
72. ಪೊಲೀಸ್ ಜೀವನದಲ್ಲಿ ಹಾಸ್ಯ (ಡಾ. ಡಿ.ವಿ. ಗುರುಪ್ರಸಾದ್)
73. ವಿಶ್ವ ಪರ್ಯಟನೆ (ಡಾ. ಡಿ.ವಿ. ಗುರುಪ್ರಸಾದ್)
74. ರಾಜೀವ್ ಗಾಂಧಿ ಛೀಕರ ಹತ್ಯೆ
75. ಮರಣದಂಡನೆಗೀಡಾದ ಕುಖ್ಯಾತ ಕೈದಿಗಳು
76. ತ್ರಿಮುಖಿ
77. ರಕ್ಷ-ಖಾ-NALINI GOWDA
78. ಕವನ ಸಂಕಲನ-ARUNDATHI JOSHI
79. WHAT ON EARTH IS THE COSMETIC TRUTH ?!!! -B K DORESWAMY
80. THE PANDEMIC PROSE -VINOD D GANGOLLI
81. AN ATOM OF KNOWLEDGE A RESOURCE OF CURIOUS MINDS -SUBRAY SHAMBHU AVADHANI

MEENA RAMAN BOOKS

82. ESSAYS & POEMS
83. EASY COOKING OF DELICIOUS RECIPES
84. BOOK OF POEMS
85. BIRDS AND OTHER POEMS
86. EASY COOKING OF DELICIOUS RECIPES PART-II
87. CHANDRAYAAN -3 AND OTHER POEMS
88. ANECDOTES OF MY STUDENT LIFE
89. EXCERPTS FROM SRIMAD BHAGAVAT
90. EASY COOKING OF DELICIOUS RECIPES PART-III
91. RAIN AND OTHER POEMS
92. EASY COOKING OF DELICIOUS RECIPES PART-IV



Ph : 080-29731414, Mob : 9845264304.

Website : www.beechi.in

# ಪುಟ್ಟ ಪ್ರಶ್ನೆಗೆ ದೊಡ್ಡ ಉತ್ತರ



" ನಮಸ್ಕಾರಾ ಸ್ವಾಮಿ, ದಿನಾ ಬೆಳಗ್ಗೆ ನಿಮ್ಮ ಮನೆ ಮುಂದೆ ಹೋಗ್ತೀನಿ. ಯಾವಾಗ್ಲೂ ಬಾಗಿಲು ಹಾಕಿರುತ್ತೆ ನೀವು ಕಾಣ್ಸೋದೇ ಇಲ್ಲ.."

" ಸ್ವಾಮಿ, ಸಾಷ್ಟಾಂಗ ನಮಸ್ಕಾರ. ನೀವು ನಮ್ಮ ಮನೆ ಮುಂದೆ ಹಾದು ಹೋಗೋಕ್ಕೆ ನಾಲ್ಕು ಸೆಕೆಂಡುಗಳು ಸಾಕು. ಇಪ್ಪತ್ತು ನಾಲ್ಕು ಗಂಟೆಗಳ ಕಾಲಾವಧಿಯಲ್ಲಿ ನಮ್ಮ ಮನೆ ಬಾಗಿಲು ನೂರಾರು ಸಲ ತೆಗೆದಿರುತ್ತೆ. ನಾನು ಅನೇಕ ಬಾರಿ ಮನೆ ಮುಂದೆ ಓಡಾಡಲೇ ಬೇಕಾಗಿರುತ್ತೆ. ಆದರೆ ನೀವು ಕೇಳ್ತಾ ಇರೋದು ಅದಲ್ಲ. ನೀವು ನಮ್ಮ ಮನೆ ಮುಂದೆ ಬೆಳಗಿನ ಜಾವ ಮಿಂಚಿ ಮುಂದೆ ಹೋಗೋ ಆ ನಾಲ್ಕು ಸೆಕೆಂಡುಗಳಲ್ಲಿ , ನಾನು ಮನೆ ಬಾಗಿಲು ತೆಗೆದು ಮುಂದೆ ನಿಂತುಕೊಂಡು ನಿಮ್ಮನ್ನ ಮಂದಹಾಸದಿಂದ ಯಾಕೆ ಇದಿರುಗೊಳ್ಳೋಲ್ಲ ಅಂತ ಅಲ್ಲವೇ. ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ನಮ್ಮ ಮನೆ ಮುಂದೆ ಹಾದುಹೋಗೋಕ್ಕೆ ಐದು ನಿಮಿಷ ಮುಂಚೆ ನನಗೆ ಒಂದು ವಾಟ್ಸಪ್ ಮೆಸೇಜ್ ಕಳಿಸ್ಬಿಡಿ. ದಿನಾ ಬೆಳಗ್ಗೆ ಸೆಲ್ಯೂಟ್ ಹೊಡೀತೀನಿ. "

Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457

www.mallige.com

NABH ACCREDITED
Certificate No.: MC-2068



Established in 1978 we are a multi-speciality, tertiary care hospital.

CARING AND HEALING

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/-
ವಾರ್ಷಿಕ ಚಂದಾ : ರೂ. 100/-
ಹತ್ತು ವರ್ಷದ ಚಂದಾ: ರೂ. 1000/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 42**
**ಸಂಚಿಕೆ – 12**
**ಸೆಪ್ಟೆಂಬರ್– 2025**

## ಈ ಸಂಚಿಕೆಯಲ್ಲಿ...

| | | |
|---|---|---|
| ಕಿಡಿ | ಪ್ರಕಾಶ್ | 2 |
| ಮೈಸೂರಿನಲ್ಲಿ ಅದ್ದೂರಿಯಾಗಿ ನಡೆದ ನಾ. ಕಸ್ತೂರಿ ಸಂಸ್ಮರಣೆ | | 3 |
| ಅವಿಸ್ಮರಣೀಯ ನಗೆಗಾರರು–2 | ಶಿವಕುಮಾರ್ | 5 |
| ಸಹಿ ರೀ ಸಹಿ | ನಳಿನಿ ಟಿ. ಭೀಮಪ್ಪ | 10 |
| ಅಕ್ತರ್ ಚಿಕಿತ್ಸೆ... | ಎಚ್.ಗೋಪಾಲಕೃಷ್ಣ | 13 |
| ದಾಮೋದರನ ಆಹಾರ ಪ್ರೀತಿ | ಮಹಾಬಲ. ಕೆ.ಎನ್ | 18 |
| ತುಂತುರು | ದಂನಆ | 21 |
| ಬಸಪ್ಪನವರೆ ಸಿಸ್ಟಮ್ ಅಫ್ ಮೆಡಿಸಿನ್ | ಇ.ಆರ್. ರಾಮಚಂದ್ರನ್ | 22 |
| ರಿಟೈರ್ ಆದ ಮ್ಯಾಲಿನ....... | ಸಿ.ಎ. ವಿಲಾಸ ನಾ ಹುದ್ದಾರ | 26 |
| ಇಂಗ್ಲೀಷು ಮತ್ತು ವಿಟಮಿನ್ 'ಬಿ' | ವಿದ್ಯಾ ಎಸ್ | 29 |
| ಮನ್ವಂತರದ ಹಕೀಕತ್ತು (ಭಾವಪ್ರಬಂಧ) | ಜಯಶ್ರೀ ದೇಶಪಾಂಡೆ | 31 |
| ಕನ್ನಡದ ಕಂಪನ್ನು ಎಲ್ಲೆಡೆ........ | ಸೌಮ್ಯ ಮಿತ್ರ | 34 |
| ಕ್ಯಾ 'ಸೀನ್' ಹೈ | ಕೆ.ಎಸ್.ಸೋಮೇಶ್ವರ | 38 |

**ವ್ಯಂಗ್ಯ ಚಿತ್ರಗಳು : ಹೊರಪುಟ : ಜೆಮಿನಿ ಎಐ**
**ಒಳಪುಟಗಳು : ಜೆಮಿನಿ ಎಐ**

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ



# ಅಪರಂಜಿ ಕಿಡಿ

● ಪ್ರಕಾಶ್

ವ್ಯಾಪಕ ಭ್ರಷ್ಟಾಚಾರಕ್ಕೆ ದುರಾಸೆಯೇ ಕಾರಣ

– ಹೇಳಿಕೆ

ಅಂಗೈ ಹುಣ್ಣಿಗೆ ಕನ್ನಡಿ ಬೇಕೆ ??

* * *

ಪ್ರಧಾನಿ ಅವರನ್ನು ಮುಖ್ಯಮಂತ್ರಿಯವರು ನಗು ನಗುತ್ತಲೇ ಸ್ವಾಗತಿಸಿದರು.

– ಸುದ್ದಿ

ಅಬ್ಬ ! ಸಧ್ಯ !!

* * *

"ಮತ ಕಳವು" ವಿರುದ್ಧ ಅಭಿಯಾನ

– ಪತ್ರಿಕೆ

ಹೋದೆಯಾ ಮಾರಿ ಅಂದರೆ .........!!

* * *

"ರೊಕ್ಕ ಕೊಡದೆ ಆರಿಸಿ ಬಂದವರಾರು ?"

ಯಕ್ಷ ಪ್ರಶ್ನೆ ಎಂದರೆ ಇದೇ !!

* * *

"ಕ.ಸಾ.ಪ ಉಳಿಸಿ"

– ಸಮಿತಿ ಆಗ್ರಹ

ಇದೇನೋ ತಾರಕಕ್ಕೇರಿರುವಂತಿದೆ !!

* * *

ರಾಷ್ಟ್ರ ಪ್ರಶಸ್ತಿ ; ಗುಣಮಟ್ಟ ನಾಸ್ತಿ !!

ಪ್ರಾಸ ಎಂದರೆ ಹೀಗಿರಬೇಕು !!

* * *

'ಗುತ್ತಿಗೆ ರದ್ದು ಮಾಡಿರುವುದು ಒಪ್ಪಂದದ ಉಲ್ಲಂಘನೆ '

– ಪತ್ರಿಕೆ

ಯಾರದೋ ಕುತ್ತಿಗೆ ಅಪಾಯದಲ್ಲಿದೆ !!

* * *

●

# ಮೈಸೂರಿನಲ್ಲಿ ಅದ್ಧೂರಿಯಾಗಿ ನಡೆದ
# ನಾ. ಕಸ್ತೂರಿ ಸಂಸ್ಮರಣೆ ಕಾರ್ಯಕ್ರಮ




ನಾ. ಕಸ್ತೂರಿ ರಸಿಕವೃಂದ ಮತ್ತು ಮೈಸೂರು ಆಕಾಶವಾಣಿ ಆಶ್ರಯದಲ್ಲಿ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್. ಮಹಿಳಾ ಕಾಲೇಜಿನ ಸಭಾಂಗಣದಲ್ಲಿ 14.8.2025ರಂದು ನಾ. ಕಸ್ತೂರಿ ಸಂಸ್ಮರಣೋತ್ಸವ ಮತ್ತು ಆಕಾಶವಾಣಿ ಮೈಸೂರು 90ರ ಸಂಭ್ರಮ ಕಾರ್ಯಕ್ರಮ ಜರುಗಿತು. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದ ನಂತರ ಮಾತಾಡಿ ನಾ. ಕಸ್ತೂರಿಯವರು ನಾಲ್ಕಾರು ಸಾಲುಗಳಲ್ಲಿ ವಾಸ್ತವ ಸಂಗತಿಗಳನ್ನು ಹಾಸ್ಯದಿಂದ ತೆರದಿಡುವ ಪ್ರತಿಭೆಯನ್ನು ಹೊಂದಿದ್ದರು. ಮೈಸೂರಿನ ಬಾನುಲಿ ಕೇಂದ್ರಕ್ಕೆ ಆಕಾಶವಾಣಿ ಎಂದು ಹೆಸರಿಟ್ಟಿದ್ದೇ ನಾ. ಕಸ್ತೂರಿಯವರು. ಮುಂದೆ ಆಕಾಶವಾಣಿ ಎನ್ನುವ ಹೆಸರು ಇಡೀ ಭಾರತದ ಎಲ್ಲ ಕೇಂದ್ರಗಳಿಗೂ ಬಳಕೆಗೆ ಬಂತು. ಕುವೆಂಪು ಸಾಹಿತ್ಯ ಸೃಷ್ಟಿಯಲ್ಲಿ ಕಸ್ತೂರಿ ಅವರ ಪ್ರೋತ್ಸಾಹವಿದೆ. ನನ್ನ ಕವನಗಳ ಯೋಗ್ಯತೆ ಕಂಡು ನನಗೆ ಪ್ರೋತ್ಸಾಹಿಸಿದವರು ನಾ. ಕಸ್ತೂರಿ ಮತ್ತು ಸಿದ್ದೇಶ್ವರಾನಂದರು ಎಂದು ಕುವೆಂಪು ಹೇಳಿದ್ದಾರೆ. ಮಲೆಯಾಳಿ ಮಾತೃಭಾಷೆಯವರಾದ ನಾ ಕಸ್ತೂರಿಯವರು ತಮ್ಮ 25ನೇ ವಯಸ್ಸಿನಲ್ಲಿ ಮೈಸೂರಿಗೆ ಬಂದು ಬನುಮಯ್ಯ ಕಾಲೇಜಿನಲ್ಲಿ ತಮ್ಮ ಅಧ್ಯಾಪನ ವೃತ್ತಿಯನ್ನು ಪ್ರಾರಂಭಿಸಿ ಜೊತೆಜೊತೆಗೇ ಕನ್ನಡ ಕಲಿಯುತ್ತಾ ಜೊತೆಗೆ ಕನ್ನಡದಲ್ಲಿ ಅಂತರ್ಗತವಾಗಿದ್ದ ಸೊಗಡನ್ನು ಬಹಳ ಸೊಗಸಾದ ಕೃತಿಗಳ ಮೂಲಕ ಅನಾವರಣಗೊಳಿಸಿದರು. ಮೈಸೂರಿನಲ್ಲಿ ರಾಮಕೃಷ್ಣ ಆಶ್ರಮ ಸ್ಥಾಪನೆಗೆ ನಾ. ಕಸ್ತೂರಿಯವರ ಕೊಡುಗೆ ಅಪಾರ ಎಂದು ಸುತ್ತೂರು ಶ್ರೀಗಳು ಹೇಳಿದರು. ಕಾರ್ಯಕ್ರಮದಲ್ಲಿ ನಾ. ಕಸ್ತೂರಿಯವರ ಹಾಸ್ಯದ ವಿವಿಧ ಪ್ರಾಕಾರಗಳ ವಿಶೇಷತೆಗಳನ್ನು ಸಾರಿದವರು ಭಾರತೀಯ ವಿದ್ಯಾಭವನದ ಮಾಜಿ ಅದ್ಯಕ್ಷ, ಶ್ರೀ. ಎನ್. ರಾಮಾನುಜ, ಬರಹಗಾರರು ಮತ್ತು ಚಿಂತಕರಾದ ಬೇಲೂರು ರಾಮಮೂರ್ತಿ, ಮೈಸೂರು

ಆಕಾಶವಾಣಿ ಕೇಂದ್ರದ ಉಪನಿರ್ದೇಶಕರಾದ ಶ್ರೀ ಎಸ್. ಎಸ್. ಉಮೇಶ್, ಕವಿ ಮತ್ತು ಬರಹಗಾರರಾದ ಶ್ರೀ ಕೆ.ಸಿ.ಶಿವಪ್ಪ, ಬರಹಗಾರರು ಮತ್ತು ಉಪನ್ಯಾಸಕರಾದ ಪ್ರೊ. ಎಂ. ಕೃಷ್ಣೇಗೌಡ ಮತ್ತು ಬರಹಗಾರರು ಮತ್ತು ವಾಗ್ಮಿ ವೈ.ವಿ. ಗುಂಡೂರಾವ್ ಮುಂತಾದವರು. ಇದೇ ಸಂದರ್ಭದಲ್ಲಿ ಡಾ. ಎಸ್. ಹೇಮಂತಕುಮಾರ್ ಅವರ ಸಂಶೋಧನಾ ಮಹಾಪ್ರಬಂಧ ನಾ. ಕಸ್ತೂರಿ ಬದುಕು ಬರಹ, ಮತ್ತು ಕೊರವಂಜಿ ಕಸ್ತೂರಿ ಸಂಪುಟ 1 ಬಿಡುಗಡೆಯಾಯಿತು. ನಾ. ಕಸ್ತೂರಿಯವರು ಒಬ್ಬ ವ್ಯಕ್ತಿಯಲ್ಲ, ಒಂದು ಅದ್ಭುತ ಶಕ್ತಿ. ಏಕೆಂದರೆ ಒಬ್ಬ ವ್ಯಕ್ತಿಗೆ ಸರಾಸರಿ ಎಷ್ಟು ಕೆಲಸ ಮಾಡುವುದಕ್ಕೆ ಸಾಧ್ಯವೋ ಅದರ ಹತ್ತರಷ್ಟು ಕೆಲಸ ಮಾಡಿದ್ದಾರೆ. ನಾ. ಕಸ್ತೂರಿ ಅವರು ಕನ್ನಡಕ್ಕೆಂತಲೇ ಹುಟ್ಟಿ ಬೆಳೆದ ಒಬ್ಬ ವ್ಯಕ್ತಿ. ಕಸ್ತೂರಿಯವರ ಬರವಣಿಗೆ ಒಂದು ತೂಕವಾದರೆ ಅವರ ಸಮಾಜ ಸೇವೆ, ಅಧ್ಯಾಪನ ಸೇವೆ ಇನ್ನೊಂದು ತೂಕ. ಸುವಾಸನಾ ದ್ರವ್ಯಕ್ಕೆ ನಾವು ಕಸ್ತೂರಿ ಎನ್ನುತ್ತೇವೆ. ಸಾಹಿತ್ಯ ರಂಗದಲ್ಲೂ ಸುವಾಸನಾ ದ್ರವ್ಯವಾಗಿ ಉಳಿದವರು ಅಂದರೆ ಕಸ್ತೂರಿ ಒಬ್ಬರೇ ಎಂದಿರುವವರು ನಾ ಕಸ್ತೂರಿ ಬದುಕು ಬರಹ ಕೃತಿಗೆ ಮುನ್ನುಡಿ ಬರೆದಿರುವ ಪ್ರೊ. ಅ.ರಾ. ಮಿತ್ರ ಅವರು. ಎಲ್ಲರನ್ನೂ ಕಾರ್ಯಕ್ರಮಕ್ಕೆ ಸ್ವಾಗತಿಸಿದವರು ಇಡೀ ಕಾರ್ಯಕ್ರಮದ ಬೆನ್ನೆಲುಬಾಗಿದ್ದ ನಾ. ಕಸ್ತೂರಿಯವರ ಮೊಮ್ಮಗ ಶ್ರೀ ಆರ್ ಎಸ್. ರಾಜಾರಾಂ. ಪ್ರಾರಂಭದಲ್ಲಿ ಶ್ರೀ ನಿತಿನ್ ರಾಜಾರಾಮ್ ಶಾಸ್ತ್ರಿ ಮತ್ತು ಸಂಗಡಿಗರಿಂದ ನಾ ಕಸ್ತೂರಿಯವರ ಅಣುಕು ಹಾಡುಗಳ ಗಾಯನ ಕಾರ್ಯಕ್ರಮ ಸಭಿಕರನ್ನು ರಂಜಿಸಿತು.




അവിസ്മരണീയ നഗേഗാരരു–2

# ಟಿ.ಪಿ.ಕೈಲಾಸಂ ಮತ್ತು ರಾ.ಶಿ.

ಶಿವಕುಮಾರ್





ರಾ.ಶಿ.ಯವರ ಒಲವು ನಗೆ ಸಾಹಿತ್ಯದ ಕಡೆ ತಿರುಗಲು ಎರಡು ಮುಖ್ಯ ಕಾರಣಗಳನ್ನು ಗುರುತಿಸಬಹುದು. ಬಿ.ಎ.ವಿದ್ಯಾರ್ಥಿಯಾಗಿ ರಾ.ಶಿ. ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿದ್ದಾಗ ಉತ್ಕೃಷ್ಟವಾದ ತಿಳಿಹಾಸ್ಯಕ್ಕೆ ಹೆಸರಾದ ಇಂಗ್ಲೀಷಿನ ಪಂಚ್ ವಾರಪತ್ರಿಕೆ ಕಾಲೇಜಿನ ಲೈಬ್ರರಿಯಲ್ಲಿ ಓದಲು ಸಿಗುತ್ತಿತ್ತು.ಆ ಪತ್ರಿಕೆಯನ್ನು ಅವರು ಓದಲು ಪ್ರಾರಂಭಿಸಿದ ಸಂದರ್ಭವನ್ನು  ಅವರ ಮಾತಿನಲ್ಲಿಯೇ ಕೇಳಿ.

"ಸೆಂಟ್ರಲ್ ಕಾಲೇಜಿಗೆ ಸೇರಿದ ಮೇಲೆ, ಮಧ್ಯಾಹ್ನದ ವಿರಾಮದ ವೇಳೆಯನ್ನು ಲೈಬ್ರರಿ ಮತ್ತು ರೀಡಿಂಗ್ ರೂಮುಗಳಲ್ಲಿ ಕಳೆಯುತ್ತಿದ್ದೆ. ಕಾರಣ ಇಷ್ಟೇ. ಉಳಿದ ಸ್ನೇಹಿತರೆಲ್ಲರೂ ತಿಂಡಿ ತಿನ್ನಲು ಹೋಟೆಲಿಗೆ ಹೋಗುತ್ತಿದ್ದರು. ನನಗೆ ಆ ಸೌಕರ್ಯವಿಲ್ಲದ ಕಾರಣ, ಶ್ರೀಮಂತ ಸ್ನೇಹಿತರೊಡನೆ ಅಂತಹ ವೇಳೆಯಲ್ಲಿ ಇರಬಾರದಾದ್ದರಿಂದ, ನಾನು ಹಾಗೆ ಮಾಡಬೇಕಾಗಿತ್ತು. ರೀಡಿಂಗ್ ರೂಮಿಗೆ ಹೋದ ಮೊದಲ ದಿನವೇ 'ಪಂಚ್' ಪತ್ರಿಕೆಯ ಪರಿಚಯವಾಯಿತು. ಅದರಲ್ಲಿದ್ದ ವ್ಯಂಗ್ಯ ಚಿತ್ರಗಳು, ಲೇಖನಗಳು, ಕುಹಕಿಡಿಗಳು ನನ್ನನ್ನು ಸೆರೆ ಹಿಡಿದವು. ಸಮಕಾಲೀನ ಇಂಗ್ಲೆಂಡಿನ ಜೀವನ ವೈಪರೀತ್ಯವನ್ನು ಎಷ್ಟು ಚುರುಕಾಗಿ ಅದು ಎತ್ತಿ ತೋರಿಸುತ್ತಿತ್ತು ಅಂತ. ಅಂದಿನಿಂದ ಪಂಚ್ ಪತ್ರಿಕೆಯನ್ನು ಓದುವುದೇ ಒಂದು ಒಲವಿನ ವಿದ್ಯಾಭ್ಯಾಸವಾಯಿತು."

ಪಂಚ್ ನಿಂದ ದೊರಕಿದ ಈ ಆನಂದದ ಋಣವನ್ನು ಪರಿಹರಿಸಲು ರಾ.ಶಿ. ನಗೆ ಸಾಹಿತ್ಯದ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಮೂವತ್ತರ ದಶಕದಲ್ಲಿ ಅವರ ಮಿತ್ರ ಅಶ್ವತ್ಥ ನಾರಾಯಣರಾಯರು ಹೊರತರುತ್ತಿದ್ದ 'ನವಜೀವನ'  ಎಂಬ ದಿನಪತ್ರಿಕೆಯಲ್ಲಿ "ಸೋಮವಾರದ ಸುಸುದ್ದಿ ಎಂಬ ಅಂಕಣದಲ್ಲಿ ನಗೆ ಚಟಾಕಿ, ಕುಹಕಿಡಿ ಮುಂತಾವುಗಳನ್ನು ರಾ.ಶಿ. ಬರೆಯಲು ಪ್ರಾರಂಭಿಸಿದರು.

ಕೈಲಾಸಂ ಅವರೊಂದಿಗಿನ ಒಡನಾಟ, ರಾ.ಶಿ. ಯವರ ಹಾಸ್ಯ ಮನೋವೃತ್ತಿ ಹೊಳಪು ಪಡೆಯಲು ಇನ್ನೊಂದು ಕಾರಣ. ಈ ಸಂಪರ್ಕ ರಾ.ಶಿ.ಯವರ ಜೀವನ ದೃಷ್ಟಿಯನ್ನೇ ಬದಲಿಸುವಂತಹ ಪರಿಣಾಮ ಬೀರಿತ್ತು. ರಾ.ಶಿ.ಯವರು ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿದ್ದ ತಮ್ಮ  ಮೆಡಿಕಲ್ ಕಾಲೇಜಿನ ತರಗತಿಗಳನ್ನು ಮುಗಿಸಿಕೊಂಡು, ಸಂಜೆ ಕೈಲಾಸಂ ಅವರನ್ನು ನೋಡಲು ಹೋಗುತ್ತಿದ್ದರು. ಕೈಲಾಸಂ ಆ ದಿನಗಳಲ್ಲಿ

ತಮ್ಮ ತಂದೆ ಪರಮಶಿವ ಅಯ್ಯರ್ ವಾಸಿಸುತ್ತಿದ್ದ ವೈಟ್ ಹೌಸ್‌ನ ಹಿಂಭಾಗದ ಕೊಠಡಿಯೊಂದರಲ್ಲಿ ವಾಸಿಸುತ್ತಿದ್ದರು. ರಾ.ಶಿ.ಯವರು ತಂದೆಯ ಕಣ್ಣು ತಪ್ಪಿಸಿ ಮಗನ ಕೊಠಡಿಗೆ ಹೋಗಬೇಕಾಗಿತ್ತು. ಅನಂತರ ಕೈಲಾಸಂ ರವರೊಡನೆ ಕಂಟೋನ್‌ಮೆಂಟ್‌ಗೆ ಸೈಕಲ್ಲಿನಲ್ಲಿ ಸವಾರಿ. ದಾರಿಯುದ್ದಕ್ಕೂ ಮಾತುಕತೆ. ಅನೇಕಬಾರಿ ಕಂಟೋನ್‌ಮೆಂಟಿನ ಪೆರೇಡ್‌ಗ್ರೌಂಡ್ಸ್ ಬಳಿ ಇದ್ದ ಚರ್ಚ್ ನ ಆವರಣದಲ್ಲಿ ಕುಳಿತು ಏಕಲವ್ಯ, ಮಾರ್ಕಾಂಡೇಯ, ಕರ್ಣ ಇವರುಗಳ ಬಗ್ಗೆ ಕೈಲಾಸಂ ಕಥನ ಮಾಡುತ್ತಿದ್ದಾಗ ರಾ.ಶಿ. ತಲ್ಲೀನರಾಗಿ ಕೇಳುತ್ತಿದ್ದರಂತೆ. " ಕೈಲಾಸಂ ಚಿತ್ರಿಸಿದ ಮಾರ್ಕಾಂಡೇಯ ನನ್ನ ವ್ಯಕ್ತಿತ್ವವನ್ನೇ ಬದಲಿಸಿತು. ಅಹಂಕಾರ, ಸ್ವಾರ್ಥ ಸ್ವಲ್ಪ ಕರಗಿ ನಾನು ಮನುಷ್ಯವರ್ಗಕ್ಕೆ ಸೇರುವಂತಾದೆ." ಎನ್ನುತ್ತಾರೆ ರಾ.ಶಿ, ಕೈಲಾಸಂರವರ ಔದಾರ್ಯದ ಬಗ್ಗೆ ರಾ.ಶಿ. ತಮ್ಮ ವಿದ್ಯಾರ್ಥಿದೆಸೆಯ ನೆನಪೊಂದನ್ನು ಹೀಗೆ ದಾಖಲಿಸುತ್ತಾರೆ.

"ನಾನು ವೈದ್ಯಕೀಯ ವಿದ್ಯಾರ್ಥಿಯಾಗಿದ್ದಾಗ  ಒಮ್ಮೆ ನಮ್ಮ ಪ್ರೊಫೆಸರ್ ಮಿಸ್ ಆಲ್ಬುಕರ್ಕ್ ನನ್ನನ್ನ ತಮ್ಮ ಆಫೀಸಿಗೆ ಕರೆಸಿದರು. ನಾನು ಹೆದರುತ್ತಲೇ ಅವರನ್ನು ನೋಡಲು ಹೋದೆ. ಅವರು ನನ್ನನ್ನು ನಗುತ್ತಲೇ ಸ್ವಾಗತಿಸಿದರು." ಶಿವರಾಂ, ನಿನಗೆ ಕೈಲಾಸಂ ಅವರ ಪರಿಚಯ ಇದೆ ಅಂತ ತಿಳಿಯಿತು. ಈಗಿರುವ ವಿಕ್ಟೋರಿಯಾ ಆಸ್ಪತ್ರೆಯ ಹತ್ತಿರದಲ್ಲೇ ಒಂದು ಮಹಿಳೆಯರ ಆಸ್ಪತ್ರೆ ನಿರ್ಮಿಸುವ ಯೋಚನೆ ಇದೆ. ದಿವಾನರ ಬಳಿ ಈ ಕುರಿತು ಮಾತನಾಡಲಿರುವೆ. ಮಾತನಾಡುವ ಮುಂಚೆ ನಮ್ಮ ಬಳಿ ಸ್ವಲ್ಪ ಧನ ಸಂಗ್ರಹಣೆ ಆಗಿದ್ದರೆ ದಿವಾನರ ಮನವೊಲಿಸುವುದು ಸುಲಭವಾದೀತು. ಕೈಲಾಸಂ ಅವರಿಂದ ಒಂದು ಬೆನಿಫಿಟ್ ನಾಟಕ ಆಡಿಸುವುದಕ್ಕಾಗುತ್ತದೆಯೇ?  ಅವರೊಂದಿಗೆ ಮಾತನಾಡುವೆಯಾ ?" ಅಂತ ಆಕೆ ಕೇಳಿದರು.

ನಾನು ಕೈಲಾಸಂರವರೊಡನೆ ಮಾತನಾಡಿದೆ. ಆವರು ಒಡನೆಯೇ ಒಪ್ಪಿದ್ದಲ್ಲದೆ, "ಶಿವು ನಾನು ಎಲ್ಲಾ ವ್ಯವಸ್ಥೆ ಮಾಡ್ತೇನೆ. ಕೆಲವು ಜನ ಮಾತ್ರ ವೃತ್ತಿಪರ ನಟರನ್ನು ಕರೆಯುವೆ. ಮಿಕ್ಕವರೆಲ್ಲರೂ ಹವ್ಯಾಸಿ ನಟರೇ ಇರಲಿ. ಇದರಿಂದ ಖರ್ಚು ಕಡಿಮೆಯಾಗುತ್ತೆ. ಒಟ್ಟು ಸುಮಾರು ಐನೂರು ರೂಪಾಯಿಗಳು ಬೇಕಾಗಬಹುದು ಅಂತ ನಿಮ್ಮ ಪ್ರೊಫೆಸರ್ ಗೆ ಹೇಳು"  ಅಂತ ಹೇಳಿದರು. ಕೈಲಾಸಂ ಆರಿಸಿದ್ದ ನಾಟಕಕ್ಕೆ ಎರಡು ಮಹಿಳಾ ಪಾತ್ರಗಳು ಅಗತ್ಯವಾಗಿದ್ದವು. ಆ ದಿನಗಳಲ್ಲಿ ಹೆಣ್ಣು ಮಕ್ಕಳು ನಾಟಕಗಳಲ್ಲಿ ಪಾತ್ರ ವಹಿಸುವುದು ಬಹಳ ಅಪರೂಪ. ಅದಕ್ಕೇ ಗಂಡಸರೇ ಹೆಣ್ಣು ಪಾತ್ರ ವಹಿಸಿ ನಿಭಾಯಿಸುತ್ತಿದ್ದರು.ಕೈಲಾಸಂಗೆ ಷೋ ಚೆನ್ನಾಗಿ ಆಗಬೇಕು ಅಂತ ಸಂಕಲ್ಪ. ಹಾಗಾಗಿ ಬಸವನಗುಡಿಯಲ್ಲಿದ್ದ ತಮ್ಮ ಮಿತ್ರ ಪುಟ್ಟಯ್ಯನ ಮನೆಗೆ ನನ್ನನ್ನೂ ಕರೆದುಕೊಂಡು ಹೋದರು. ಪುಟ್ಟಯ್ಯನವರ ತಂಗಿಯ ಮಕ್ಕಳು ಶಿವಕಾಮು ಮತ್ತು ಸಾವಿತ್ರಿ ಕೈಲಾಸಂ ಅವರ ಹೋಂರೂಲು ನಾಟಕದಲ್ಲಿ ಪಾತ್ರ ವಹಿಸಲು ಒಪ್ಪಿಗೆ ನೀಡಿದರು.

ಎಲ್ಲ ವ್ಯವಸ್ಥೆಗಳೂ ಮುಗಿದ ನಂತರ ರತ್ನಾವಳಿ ಥಿಯೇಟರಿನಲ್ಲಿ ಬೆನಿಫಿಟ್ ಷೋ ನಡೆಯಿತು. ಸಭಾಂಗಣ ಕಿಕ್ಕಿರಿದಿತ್ತು. ನಾಟಕ ತುಂಬಾ ಚೆನ್ನಾಗಿ ಮೂಡಿ ಬಂತು. ನನಗಂತೂ ಸಧ್ಯ, ಎಲ್ಲಾ ಸುಸೂತ್ರವಾಗಿ ನಡೆಯಿತಲ್ಲ ಎನ್ನಿಸಿ ಮನಸ್ಸು ನಿರಾಳವಾಯಿತು. ನಾಟಕ ಮುಗಿದ ಮಾರನೆಯ ದಿನ ನಮ್ಮ ಪ್ರೊಫೆಸರ್ ನಮ್ಮನ್ನೆಲ್ಲಾ ಟೀಗೆ ಕರೆದು ಸತ್ಕರಿಸಿದರು. ಹಿಂತಿರುಗುವ ಮುನ್ನ ಮಿಸ್ ಆಲ್ಬುಕರ್ಕ್ ನನನ್ನನ್ನು ಕುರಿತು. "ಶಿವರಾಂ, ತುಂಬಾ ಧನ್ಯವಾದಗಳು ಒಟ್ಟು ಮೂವತ್ತೈದು ಸಾವಿರ ಹಣ ಸಂಗ್ರಹಣೆ ಆಗಿದೆ. ದಿವಾನರ ಒಪ್ಪಿಗೆ ಬಹುಪಾಲು ಖಚಿತ. ಕೈಲಾಸಂಗೆ ನನ್ನ ಕೃತಜ್ಞತೆಗಳು" ಎಂದರು. ಆ ಮೂಲ ಧನವೇ, ಇಂದಿನ ಬೆಂಗಳೂರಿನ ಹೆಗ್ಗಳಿಕೆ ಎನ್ನಬಹುದಾದ ವಾಣೀವಿಲಾಸ್

ಆಸ್ಪತ್ರೆಯ ನಿರ್ಮಾಣಕ್ಕೆ ಕಾರಣವಾಯಿತು..

ಒಂದು ಸಲ ಕೈಲಾಸಂ ಎಲ್ಲೋ ಸ್ನೇಹಿತರ ನಡುವೆ ಕುಳಿತು ಮಾತನಾಡುತ್ತಿರುವಾಗ 'ಮಕ್ಕಳನ್ನು ಬೆಳಸೋದು ಹೇಗೆ?' ಅನ್ನೋ ವಿಷಯ ಬಂತಂತೆ. ಮಾತಾಡ್ತಾ ಆಡ್ತಾ ಮಧ್ಯೆ "ಕೈ" ತಮಾಷೆಗೋಸ್ಕರ "ಮಕ್ಕಳಿಗೆ ತಾಯಿ ಹಾಲು, ಬೆಳೆದೋರಿಗೆ ಹಸೂ ಹಾಲು. ತಾಯಿ ಹಾಲು ಇಲ್ಲದಿದ್ರೆ ಹಾರ್‌ಲಿಕ್ಸ್ ಮಿಲ್ಕ್ ಇದ್ದೇ ಇದೆ. ಹನುವಂತ ಕೂಡ ಹಾರ್‌ಲಿಕ್ ಮಿಲ್ಕ್ ಕುಡಿದೇ ಸಮುದ್ರ ಹಾರಿದ್ದು" ಅಂತಂದ್ರಂತೆ. ಕೇಳಿದವರು ಯಥಾಪ್ರಕಾರ ನಕ್ಕರಂತೆ.

ಇದು ಮನೇಲಿ ಸ್ನೇಹಿತರ ಮಧ್ಯೆ ನಡೆದದ್ದು.

ಇದಾದ ಮೇಲೆ ಒಂದು ಸಲ ಮೈಸೂರಿನಲ್ಲಿ "ಕೈ" ಸ್ಟೇಜ್ ಮೇಲೆ ಬಂದರಂತೆ. ಕೆಲವು ಜೋಕುಗಳನ್ನು ಹೇಳಿ ಕಾಲ ಭರ್ತಿ ಮಾಡೋಕ್ಕೆ. ಹೇಳಿದ ಜೋಕುಗಳಲ್ಲಿ ಈ "ಹಾರ್‌ಲಿಕ್ ಮಿಲ್ಕ್" ಜೋಕೂ ಇತ್ತಂತೆ. ಜನ ಅದನ್ನು ಮೆಚ್ಚಿಕೊಂಡರಂತೆ.

ಮೈಸೂರಿನಲ್ಲಿ ನಾಟಕ ನೋಡೋಕ್ಕೆ ಬರೋ 'ನಾಕಾಣೆ ಪ್ರಭೃತಿ' ಗಳು ಪೂರಾ ಘಟಿಂಗರು, ಪರಮ ಪ್ರಚಂಡರು ಅಂತ ಪ್ರತೀತಿ. ಪ್ರತೀತಿಮಾತ್ರ ಅಲ್ಲ. ಆ ಗುಂಪು ಸ್ಟೇಜ್ ಮೇಲೆ ಬರೋ ಪ್ರತಿಯೊಬ್ಬನಿಗೂ ಒಂದು ಈತಿ ಬಾಧೆ. ಕನ್ನಡದಲ್ಲಿ ನ್ಯೂಸೆನ್ಸ್ ಅಂತಾರಲ್ಲಾ ಅದು.

ಈ ಘಟಿಂಗ ಪ್ರಭೃತಿಗಳಲ್ಲಿ ಒಬ್ಬ ಪ್ರಚಂಡ, ತನ್ನ ಧ್ರುವದಿಂದಲೇ ಕಿರಲಿದನಂತೆ : "ಹನುಮಂತನಿಗೆ ಹಾರ್‌ಲಿಕ್ ಮಿಲ್ಕ್ ಕೊಟ್ಟರು ಸರಿ, ಕಾಣ್ರಿ ! ಹನುಮಂತನ ಸ್ವಾಮಿ ರಾಮನಿಗೆ ಏನ್ರೀ ಕೊಟ್ಟಿದ್ದು !" ಅಂತ.

"ಕೈ" ಒಂದು ಕ್ಷಣ ಕಣ್ಣು ಕಣ್ಣು ಬಿಟ್ಟರಂತೆ. ಆದರೇನು ? ರಕ್ತ ರಕ್ತನೇವೇಯೇ, ಪಿಂಡ ಪಿಂಡನೇವೇಯೇ !

"ಶ್ರೀರಾಮನಿಗೆ? ರಾಮನಿಗೆ, .....ಲಕ್ಷ್ಮಣನಿಗೆ.....ಅರ್ಜುನನಿಗೆ...ಕರ್ಣನಿಗೆ.... ಅಭಿಮನ್ಯೂಗೆ .." ಅಂತ ಹೇಳ್ತಾ, ಸಿಡಿಮದ್ದನ್ನು ಶೇಖರಿಸಿ ಢಮಾರ್ ಅನ್ನಿಸಿದ ಹಾಗೆ– "ಆರೋರೂಟ್ ಗಂಜಿ !" ಅಂದರಂತೆ "ಕೈ"!

ಜೋಕಿನ ಜೊತೇಲೇನೇ ಜನಾನೂ ಸಿಡಿದರಂತೆ ನಕ್ಕು ನೂರಾಗಿ!

ಆದರೂ ನಾಲ್ಕಾಣೆ ಪ್ರಭೃತಿ ಬಿಟ್ಟಾನೆ? "ಈ ಬೆಂಗಳೂರಿನ ಬುಳ್ಳಪ್ಪನಿಗೆ ಬುಟ್ಕೊಡೋದಾ ನಮ್ ಕೊಪ್ಪಲ್ ಗೈರತ್ನ!" ಅಂತಂದಿದ್ದೇನೆ, "ಅಂಗಾದ್ರೆ ಬೀಮಸೇನನ್ಗೇನ್ ಕೊಟ್ರು ಏಳಿ !" ಅಂತಂದ್ನಂತೆ.

"ಕೈ" ಗೆ ಇಂಥದ್ದು ಸಿಕ್ಕಿದರೆ ಕೊಡಲಿಯ ಬಾಯಿಗೆ ಸಾಣೆಕಲ್ ಸಿಕ್ಕಿದ ಹಾಗೆ.

"ಭೀಮನ್ಗೇ ? ಭೀಮನ್ಗೆ...... ಸುಯೋಧನನ್ಗೆ.... ಬಲಭದ್ರನಿಗೆ.... ಜರಾಸಂಧನಿಗೆ..... ಕೀಚಕನಿಗೆ... ಇವರಿಗೆಲ್ಲಾ ಕ್ರುಷನ್ ಸಾಲ್ಟ್ಸ್ ಕೊಟ್ಟು !" ಅಂತಂದ್ರಂತೆ.

ಕ್ರುಷನ್ ಸಾಲ್ಟಿನ ಹೆಸರು ಕೇಳದೆ ಇದ್ದವರಿಗೆ ಕೂಡ, ಅವರು ಭೀಮನಿಂದ ಹಿಡಿದು ಕೀಚಕನವರೆಗೆ ಎಲ್ಲರನ್ನೂ ಒಟ್ಟಿಗೆ ತಮ್ಮ ತೋಳಿನ ನಡುವೆ ಸಿಕ್ಕಿಸಿಕೊಂಡು ನುಗ್ಗು ನುರಿ ಮಾಡೋಹಾಗೆ ಅಭಿನಯಿಸಿದ್ದು ನೋಡಿಯೇ ಅದು ಅರ್ಥವಾಯಿತಂತೆ. ನಾಕಾನೆಗೂ ಇದೊಂದು ರಸವತ್ತಾದ ಆಟವಾಗಿಯೇ ಪರಿಣಮಿಸಿತು.

"ಹಾಗಾದ್ರೆ ಇದ್ದೇಳ್ರೀ ! ಭೀಷ್ಮನಿಗೆ ಏನರಿ ಕೊಟ್ಟದ್ದು ?"

"ಕೈ" ನಿರ್ಯೋಚನೆಯಿಂದ "ಭೀಷ್ಮ...ಅವನೊಬ್ಬನಿಗೆ ಮಾತ್ರ ತಾಯಿಹಾಲೇ ಕೊಟ್ಟದ್ದು. ನಮ್ಮ ತುಮಕೂರು ಹತ್ರ ಕೇಳಿದ್ದೀರಾ....ಗಂಗಾಪಾಣಿ ಅಂತ ...?" ಅಂದ್ರಂತೆ.

ಮಾತು ಮುಗಿಯುವ ಮೊದಲೇ ಸಭೆ ನಗುವಿನಿಂದ ಕಿವುಡಾಗಿ ಹೋಗಿತ್ತಂತೆ. ನಕ್ಕು ನಕ್ಕು ಸಾಕಾಗಿ ನಿಂತಾಗ ಮತ್ತೆ ಪ್ರಶ್ನೆ ಬಿಡದೆ ಬಂತಂತೆ.

"ಗಂಗಾಪಾಣಿ ಭೀಷ್ಮ ಒಬ್ಬನಿಗೇ ಆದ್ರೆ ...ಕರ್ಣನಿಗೆ ಏನ್ರೀ ಕೊಟ್ಟದ್ದು ?"

ಪ್ರಶ್ನೆ ಮುಟ್ಟಿದೊಡನೆ ಉತ್ತರಹುಟ್ಟಿತಂತೆ. : "ಕರ್ಣನಿಗೆ ಕೊಟ್ಟದ್ದು 'ಕೋ ಕೋ" ಅದಕ್ಕೆ ಅವನು ಬೆಳೆದ ಹಾಗೆಲ್ಲಾ ...ಇಂದ್ರ ಬಂದ್ರೂ 'ಕೋ' ..ಕುಂತಿ ಬಂದ್ರೂ' ಕೋ ' ಯಾರು ಬಂದು ಕೇಳಿದ್ರೂ' ಕೋ ಕೋ '"

ಕೈಲಾಸಂ ಮತ್ತು ರಾ.ಶಿ. ಇವರುಗಳದ್ದು ಗುರು ಮತ್ತು ಶಿಷ್ಯರ ನಡುವಣ ಸಂಬಂಧ. 1969ರಲ್ಲಿ ರಾ.ಶಿ. ಯವರಿಗೆ ಕ್ಯಾಟರಾಕ್ಟ್ ಆಪರೇಷನ್ ಆದಾಗ ಎರಡು ವಾರಗಳ ಕಣ್ಣುಗಳಿಗೆ ಬ್ಯಾಂಡೇಜ್ ಕಟ್ಟಲಾಗಿತ್ತು.( ಆ ದಿನಗಳಲ್ಲಿ ಅದೇ ವಾಡಿಕೆ) ಆ ಅವಧಿಯಲ್ಲಿ ರಾ.ಶಿ.ಯವರು ಹೇಳಿ ಬರೆಸಿದ ಪುಸ್ತಕ "ಕೈಲಾಸಂ ಅಂಡ್ ಐ" ಈ ಪುಸ್ತಕದ ಪ್ರಸ್ತಾವನೆಯಲ್ಲಿ ರಾ..ಶಿ. ಕೈಲಾಸಂ ರವರ ಬಗ್ಗೆ ತಮಗಿದ್ದ ಆಪ್ತ ಭಾವನೆಗಳನ್ನು ಹಂಚಿಕೊಳ್ಳುತ್ತಾರೆ. ಪ್ರಸ್ತಾವನೆಯ ಆಯ್ದ ಭಾಗಗಳನ್ನು ಇಲ್ಲಿ ನೀಡಿರುವೆ.

"ನಾನು ಕೈಲಾಸಂ ಅವರನ್ನು ಮೊದಲು ನೋಡಿದ್ದ 1926ರಲ್ಲಿ. ಅದೂ ದೂರದಿಂದ ನೋಡಿದ್ದು. ಆಗಿನಿಂದ ಸುಮಾರು ಆರು ವರ್ಷಗಳ ಕಾಲ ಅವರ ನಿಕಟವರ್ತಿಯಾಗಿದ್ದೆ. 1931ರಲ್ಲಿ ನಾನು ನನ್ನ ವೈದ್ಯಕೀಯ ವೃತ್ತಿಯಲ್ಲಿ ಮುಳುಗಿದ್ದರಿಂದ ಕೈಲಾಸಂರವನ್ನು ಆಗೊಮ್ಮೆ ಈಗೊಮ್ಮೆ ನೋಡಲು ಸಾಧ್ಯವಾಗುತ್ತಿತ್ತು. 1945ರಲ್ಲಿ ಕೈಲಾಸಂ ಹಲವು ತಿಂಗಳುಗಳ ಕಾಲ ನಮ್ಮ ಮನೆಯಲ್ಲಿದ್ದರು. ಅನಂತರ ಅವರು ಮದ್ರಾಸಿಗೆ ಹೋದರು. ಅವರ ನಿಧನಕ್ಕೆ ಎರಡು ದಿನ ಮುಂಚೆ ಅವರ ದರ್ಶನ ಲಾಭ ನನಗೆ ದೊರಕಿತ್ತು.

ಈ ಪುಸ್ತಕ ನನ್ನ ದೃಷ್ಟಿಕೋನದಿಂದ ಬರೆದಿದ್ದರೂ, ಕೈಲಾಸಂ ರವರ ವ್ಯಕ್ತಿ ಚಿತ್ರಣ ಇದರಲ್ಲಿ ತಕ್ಕಮಟ್ಟಿಗೆ ರೂಪುಗೊಂಡಿದೆಯೆಂದು ಆಶಿಸುವೆ. ಯಾವ ವ್ಯಕ್ತಿಯೂ ಮತ್ತೊಬ್ಬನನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ತನ್ನ ಅನುಭವದ ಮಿತಿಯಲ್ಲಿ ಇನ್ನೊಬ್ಬನ ಹಲವು ಆಯಾಮಗಳನ್ನು ತಿಳಿಯಬಹುದಷ್ಟೆ. ಹಾಗಾಗಿ ನಾನು ಕೈಲಾಸಂ ಅವರ ಜೀವನ ಚರಿತ್ರೆಯನ್ನು ಬರೆಯ ಹೊರಟಿದ್ದರೂ ಅದರ ಅಂತಿಮ ಸ್ವರೂಪ ಇದಕ್ಕಿಂತ ಬೇರೆ ಏನೂ ಆಗಿರಲು ಸಾಧ್ಯವಿಲ್ಲ. ಈ ಪುಸ್ತಕದಲ್ಲಿ ಕೈಲಾಸಂ ನನ್ನ ಮೇಲೆ ಬೀರಿದ ಗಾಢ ಪ್ರಭಾವವನ್ನು ಚಿತ್ರಿಸಿರುವೆ. ವ್ಯಕ್ತಿಗೆ ಅತ್ಯಂತ ಅಗತ್ಯವೆನಿಸುವ ಸಮಯದಲ್ಲಿ ನಿಮಿತ್ತವು ವ್ಯಕ್ತಿಗೆ ಪ್ರತ್ಯಕ್ಷವಾಗುವುದೆಂದು ನಮ್ಮ ಶಾಸ್ತ್ರಗಳು ಹೇಳುತ್ತವೆ. ನನ್ನ ಜೀವನದಲ್ಲಿ ಕೈಲಾಸಂ ತಮಗರಿವಿಲ್ಲದೆಯೇ ಆ ಪಾತ್ರವನ್ನು ವಹಿಸಿದರು.

ಒಬ್ಬ ಸಾಹಿತಿ, ಸಾಹಿತ್ಯವನ್ನೇ ತನ್ನ ಕಾರ್ಯಕ್ಷೇತ್ರವಾಗಿ ಏಕೆ ಆರಿಸಿಕೊಳ್ಳುತ್ತಾನೆ ಎಂಬ ಪ್ರಶ್ನೆ ನನ್ನನ್ನು ಸದಾ ಕಾಡುತ್ತಿರುತ್ತದೆ. ಕೈಲಾಸಂ ತಮ್ಮ ಸ್ಫೂರ್ತಿದಾಯಕ ಸಾಹಿತ್ಯ ಸೃಷ್ಟಿಯಿಂದ ನನಗೆ ಆರಾಧ್ಯದೈವವಾದರು. ನನಗೆ ಇಷ್ಟೇ ಸಾಲದಾಯಿತು. ನಾನೂ ಅವರಂತೆ ಆಗಬೇಕಾದರೆ ಅವರಿಂದ ಏನನ್ನು ಕಲಿಯಬೇಕು ಎಂಬುದೇ ನನ್ನ ಗುರಿಯಾಯಿತು. ಈ ದೃಷ್ಟಿಯಿಂದ ಈ ಪುಸ್ತಕದಲ್ಲಿ ಅವರ ವ್ಯಕ್ತಿತ್ವವನ್ನು ವಿಶ್ಲೇಷಣೆ ಮಾಡಹೊರಟಿರುವೆ.

"ನಾನು ಸೃಷ್ಟಿಸಿರುವ ಸಾತು, ಪಾತು, ಪೋಲಿ ಕಿಟ್ಟಿ ಕಪ್ಪಣ್ಣ ಇವರುಗಳ ಬಗ್ಗೆ

ಮಾತನಾಡಿ. ನನ್ನ ಬಗ್ಗೆ ಬೇಡ" ಅಂತ ಕೈಲಾಸಂ ಹೇಳುತ್ತಿದ್ದರು.

ಇದನ್ನು ನಾನು ಒಪ್ಪಲಾರೆ. ನಾನು ಈ ಎಲ್ಲ ಪಾತ್ರಗಳನ್ನು ಪ್ರೀತಿಸುವ ಕಾರಣದಿಂದಲೇ ಕೈಲಾಸಂ ಈ ಪಾತ್ರಗಳ ಸೃಷ್ಟಿಯನ್ನು ಹೇಗೆ ಮಾಡಿದರೆಂಬ ಪ್ರಶ್ನೆಗೆ ಉತ್ತರ ಹುಡುಕಲು ಈ ಮೂಲಕ ಹೊರಟಿರುವೆ"

ಕೈಲಾಸಂ ನಿಧನದ ಸಮಯದಲ್ಲಿ ತಿರುಮಲೆ ತಾತಾಚಾರ್ಯ ಶರ್ಮರ ಶ್ರದ್ಧಾಂಜಲಿಯು ಹೀಗಿದೆ.


ಕೈಲಾಸಂ–ನಮ್ಮ ಏಕಲವ್ಯ

ತ್ಯಾಗರಾಜ ಪರಮಶಿವ ಕೈಲಾಸಂ ಸತ್ತು ಸ್ವರ್ಗಕ್ಕೇರಿದ. ಆತನ ಆತ್ಮಕ್ಕೆ ಶಾಂತಿ ಬಯಸುವುದು ನಮ್ಮ ತೃಪ್ತಿಗಾಗಿ. ಕೈಲಾಸಂ ಅಂತಹ ಮಾನವ ಪ್ರೇಮಿಗೆ, ಆಸ್ತಿಕನಿಗೆ, ತ್ಯಾಗಿಗೆ ಪರಮಾತ್ಮನ ಹೃದಯದಲ್ಲಿ ಸ್ಥಳವಿಲ್ಲವಾದರೆ, ಲೀಲಾಗೃಹದಲ್ಲಿ ಸ್ಥಳವಿಲ್ಲವಾದರೆ ಮತ್ತೆ ಯಾರಿಗೆ ಇದ್ದೀತು ?

ಕೈ–ಕೈಲಾಸಂ ಕುರಿತು ಹೆಚ್ಚು ಬರೆಯುವುದಕ್ಕೆ ಇದು ಸಮಯವೂ ಅಲ್ಲ. ಸ್ಥಳವೂ ಅಲ್ಲ. ಆ ಕೆಲಸ ಆಗಬೇಕಾದದ್ದು ; ಆಗುತ್ತದೆ. ಈಗ ಇಷ್ಟು ಮಾತ್ರ ಸಾಕು; ಹುಟ್ಟಿದ ಮನೆಗೆ ಕೀರ್ತಿ ತಂದ ಕೈಲಾಸಂ. ! ಹುಟ್ಟಿದ ನಾಡಿಗೆ ಕೀರ್ತಿ ಕಲಶವಿಟ್ಟ ಕೈಲಾಸಂ ! ಅವನ ಹೃದಯೇಶ್ವರ ಏಕಲವ್ಯನಂತೆ ಪರಹಿತ ನಿರತನಾಗಿ, ಅದೊಂದಕ್ಕಾಗಿ ಮಾತ್ರ ಏಕೈಕ ನಿಷ್ಠೆಯಿಂದ ಇದ್ದು ಈಸಿ ಜಯಿಸಿ ಅನಾಯಾಸವಾಗಿ ಪರಮಾತ್ಮನಲ್ಲಿ ಸೇರಿಹೋದ. ■

### – ಪುಸ್ತಕ ಪರಿಚಯ

### ನಾ. ಕಸ್ತೂರಿಯವರ ಬದುಕು ಬರಹ ಕುರಿತ ಸಂಶೋಧನಾ ಕೃತಿ.




ಡಾ. ಎಸ್. ಹೇಮಂತಕುಮಾರ್ ಅವರ ಕೃತಿ. ಇದರಲ್ಲಿ ನಾ ಕಸ್ತೂರಿಯವರ ಬಾಲ್ಯದ ದಿನಗಳಿಂದ ಹಿಡಿದು ಅವರ ಶೈಕ್ಷಣಿಕ ಜೀವನದ ವಿವಿಧ ಮಜಲುಗಳನ್ನು ಸ್ವಾರಸ್ಯಕರವಾಗಿ ವಿವರಿಸುವುದರ ಜೊತೆಗೆ ಕಸ್ತೂರಿಯವರು ಕಡೆಗೆ ಕಾಲ ಕಳೆದ ಸತ್ಯಸಾಯಿ ಆಶ್ರಮದ ದಿನಗಳ ವಿವರಣೆಗಳು ಬಹು ಸೊಗಸಾಗಿ ಬಂದಿದೆ. ಜೊತಗೆ ಕಸ್ತೂರಿಯವರ ಸಾಹಿತ್ಯ ಕೃತಿಗಳ ಪರಿಚಯ, ಅವರ ಇಂಗ್ಲಿಷ್ ಸಾಹಿತ್ಯ, ತೆಲುಗು ಸಾಹಿತ್ಯ, ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದಿಸಿದ ಸಾಹಿತ್ಯ ಇವುಗಳ ಬಗೆಗೆ ಕಿರು ಪರಿಚಯವಿದೆ. ಆಸಕ್ತರು ಗ್ರಂಥದ ಕೃತಿಗಳಿಗೆ ಲೇಖಕರನ್ನು ಸಂಪರ್ಕಿಸಬಹುದು. ನಾ. ಕಸ್ತೂರಿಯವರ ಬದುಕು ಬರಹ, ಲೇಖಕರು ಡಾ. ಹೇಮಂತಕುಮಾರ್. ಪ್ರಕಾಶಕರು, ನಾ ಕಸ್ತೂರಿ ಹಾಸ್ಯ ರಸಿಕ ವೃಂದ 3451/ 2ನೇ ಘಟ್ಟ ವಿಜಯನಗರ ಎರಡನೇ ಹಂತ ಮೈಸೂರು–570032. ದೂರವಾಣಿ 99643 83425 (ಡಾ. ಹೇಮಂತಕುಮಾರ್, ಲೇಖಕರು, ಮತ್ತು ಪ್ರಕಾಶಕರು 93412 64076 (ಆರ್. ಎಸ್. ರಾಜಾರಾಮ್ – ನಾ. ಕಸ್ತೂರಿಯವರ ಮೊಮ್ಮಗ)

# ಸಹಿ ರೀ ಸಹಿ

ನಳಿನಿ ಟಿ. ಭೀಮಪ್ಪ ಧಾರವಾಡ

ನಾಲ್ಕುದಿನ ಊರಿಗೆ ಹೋಗಿ ವಾಪಾಸಾಗುತ್ತಿದ್ದಂತೆ, ಸ್ಥಳೀಯ ಬಾಂಧವರು ಪುರುಸೊತ್ತಿಲ್ಲದಂತೆ ಬಂದು ಹೆಬ್ಬಾಗಿಲಿನ ಸುತ್ತಲೂ ತೋರಣದಂತೆ ಮದುವೆಯ ಆಹ್ವಾನ ಪತ್ರಿಕೆಗಳನ್ನು ಸಿಕ್ಕಿಸಿ ಹೋಗಿದ್ದರು. ಎಲ್ಲವೂ ಹೆಚ್ಚುಕಡಿಮೆ ಹದಿನೈದು ಇಪ್ಪತ್ತು ದಿನಗಳಲ್ಲಿ ವಾಲಗ ಊದುವವಂತವೇ. ಬರಗಾಲದಲ್ಲಿ ಹಗೇವು ಅಗೆದು ಧಾನ್ಯಗಳನ್ನು ಉಪಯೋಗಿಸುವಂತೆ, ಬ್ಯಾಂಕ್ ಲಾಕರ್‌ನಲ್ಲಿ ಇಟ್ಟಿರುವ ಒಡವೆಗಳನ್ನು ತೆಗೆಯಲು ವಿವಾಹಕಾಲವೇ ಸಕಾಲ ಎನ್ನಬಹುದಾದ್ದರಿಂದ, ಒಂದು ಸುಮೂಹೂರ್ತದಲ್ಲಿ ಬ್ಯಾಂಕಿನ ಕಡೆಗೆ ಹೆಜ್ಜೆಹಾಕಲು ಯೋಚಿಸಿದೆ.

ಒಂದೆರಡು ವರ್ಷಗಳಿಂದ ಬ್ಯಾಂಕ್‌ಕಡೆ ಮುಖಮಾಡಿದ್ದೇ ಇರಲಿಲ್ಲ. ಹಣ ವರ್ಗಾವಣೆ ಎಲ್ಲವೂ ಪೇಗಳ ಮೂಲಕ ಅಂದರ್‌ಬಾಹರ್ ಓಡಾಡುತ್ತಿದ್ದುದರಿಂದ ಬ್ಯಾಂಕ್‌ಗೆ ಬ್ಯಾಕ್ ತಿರುಗಿಸಿ ತುಂಬ ದಿನಗಳಾಗಿತ್ತು. ಸೇಫ್ಟೀ ಲಾಕರ್ ಕೆಲಸವಾದ್ದರಿಂದ ಸೇಫ್ಟೀಗೆಂದು ಯಜಮಾನರನ್ನೂ ಜೊತೆಗೆ ಕರೆದೊಯ್ದಿದ್ದೆ. ಲಾಕರ್ ಸಿಬ್ಬಂದಿ ಇಲ್ಲಿ ಸಹಿ ಮಾಡಿ ಎನ್ನುತ್ತಾ, ಉದ್ದನೆಯ ರಿಜಿಸ್ಟರ್ ಪುಸ್ತಕವನ್ನು ನನ್ನೆಡೆಗೆ ತಿರುಗಿಸಿದ. ಸರಸರನೆ ಸಹಿಹಾಕಿ ಅವನತ್ತ ನೂಕುತ್ತಿದ್ದಂತೆ, ಕಂಪ್ಯೂಟರ್ ಸ್ಕ್ರೀನ್‌ನಲ್ಲೆ ಅದೇನೋ ಐದು ನಿಮಿಷ, ಕನ್ನಡಕದೊಳಗಿನಿಂದ ಕಣ್ಣುಗುಡ್ಡೆಗಳು ಹೊರಬರುವಂತೆ ನೋಡಿ, ಮೇಡಂ ನೀವು ಸರಿಯಾಗಿ ಸಹಿ ಮಾಡಿಲ್ಲ, ಸ್ವಲ್ಪ ವ್ಯತ್ಯಾಸವಾಗಿದೆ, ಸರಿಯಾಗಿ ಮಾಡಿ ಎಂದಾಗ ಕಣ್ಕಣ್ಣು ಬಿಡುವಂತಾಯಿತು. ಪಕ್ಕದಲ್ಲಿದ್ದ ಯಜಮಾನರು 'ನೀ ಏನು ಸೈನ್ ನಾ ಮಾಡ್ತೀಯಾ, ಹೆಸರಿನಲ್ಲಿರೋ ಆರಕ್ಷರಗಳನ್ನು ಕಾಪೀ ಪುಸ್ತಕದಲ್ಲಿ ಬರೆದಂತೆ ದುಂಡಗೆ ಬರೀತಿಯಾ, ಅದನ್ನೂ ನೆಟ್ಟಗೆ ನೆನಪಿಡೋಕಾಗಲ್ವೇ' ಎಂದು ಗದರುತ್ತಿದ್ದುದನ್ನು ನೋಡಿ, ಆ ಸಿಬ್ಬಂದಿಗೆ ಕರುಣೆಯುಕ್ಕಿ ಕಂಪ್ಯೂಟರ್‌ನಲ್ಲಿ ಕೆದಕಿ ನನ್ನ ಹಳೆಯ ಸಿಗ್ನೇಚರ್ ಫೋಟೋಪೇಜ್ ತೆಗೆದು ತೋರಿಸಿದ. ಮೊದಲನೆಯ ಅಕ್ಷರ ಕ್ಯಾಪಿಟಲ್, ಮುಂದೆ ಮೂರಕ್ಷರ ಅಕ್ಷರ ಕರ್ಸಿವ್, ಮತ್ತೆರಡು ಅಕ್ಷರ ಬಿಡಿಬಿಡಿ ಸಹಿ ಅದು. ಅದನ್ನು ನಾಲ್ಕು ಸಲ ನೋಡಿಕೊಂಡೇ ಸಹಿ ಮಾಡಿ ಲಾಕರ್ ಎಂಟ್ರನ್ಸ್ ಎಕ್ಸಾಮ್ ಪಾಸ್ ಆಗಿ ಒಳಗಡೆ ಎಂಟ್ರಿಕೊಟ್ಟಾಯ್ತು.

ಚಿಕ್ಕವಳಿದ್ದಾಗಲೂ ದೊಡ್ಡವರೆಲ್ಲ, ಅದರಲ್ಲೂ ಟೀಚರ್‌ಗಳು ಸಹಿಮಾಡುವುದನ್ನು ಕಣ್ಣುಕೀಲಿಸದೆ ಗಮನಿಸುತ್ತಿದ್ದೆ. ಮಗ್ಗಿಯೋ, ಹೋಮ್‌ವರ್ಕ್ ಕೊನೆಗೋ ರೈಟ್ ಹಾಕಿದ ನಂತರ ಸಹಿಹಾಕುತ್ತಿದ್ದರು. ಮೊದಲಿನ ಅಕ್ಷರವನ್ನು ಡುಮ್ಮಗೆ ಉದ್ದಗೆ ಬರೆದು, ಮುಂದೆ ಕಂಬಳಿಹುಳುವಿನಾಕಾರದಲ್ಲಿ ಗೀಚಿ, ಬುಡಕ್ಕೊಂದು ಅಡ್ಡಗೆರೆ ಎಳೆದು ಎರಡು ಚುಕ್ಕಿಗಳನ್ನಿಟ್ಟು ಕೆಳಗೆ ದಿನಾಂಕ ಬರೆಯುತ್ತಿದ್ದರು. ಇಂಗ್ಲೀಷ್ ಇನ್ನೂ ಎಂಟ್ರಿ ಕೊಟ್ಟಿರದ ಕಾಲವದು. ಬಹುಶಃ ಇಂಗ್ಲೀಷ್ ಸಿಗ್ನೇಚರ್ ಅಂದರೆ ಹೀಗೇ ಕಚಿಪಿಚಿ ಇರಬೇಕು ಅಂದುಕೊಂಡು, ಹಳೆಯ ನೋಟ್‌ಬುಕ್ಕಿನಲ್ಲೆಲ್ಲ ರೈಟ್ ಹಾಕಿ ಅವರ ಸಹಿಯನ್ನೇ ನಕಲು ಮಾಡಲು ಪ್ರಯತ್ನಿಸಿ ಸೋತು ಸುಣ್ಣವಾಗಿದ್ದಾಯ್ತು. ನನ್ನದೂ ಒಂದು ಸಹಿ ಎಂದು ಮಾಡುವ ಕಾಲ ಎಂದು ಕೂಡಿ ಬರುವುದೋ ಎಂದು ಮನಸ್ಸು ಚಡಪಡಿಸುತ್ತಿತ್ತು.

ಐದನೆಯ ತರಗತಿಗೆ ಕಾಲಿಡುತ್ತಿದ್ದಂತೆ, ಇಂಗ್ಲೀಷ್ ವಿಷಯ ಕೂಡಾ ನಮ್ಮ ಜೊತೆಗೆ ಕಾಲಿಟ್ಟಿತ್ತು. ಇಪ್ಪತ್ತಾರು ಅಕ್ಷರದ ದೊಡ್ಡ ಎಬಿಸಿಡಿ, ಸಣ್ಣ ಎಬಿಸಿಡಿ, ಕೂಡಿಸಿ ಬರೆಯುವ ಎಬಿಸಿಡಿ ಕಲಿತರೆ ಇಡೀ ಆಂಗ್ಲವೇ ನಮ್ಮ ಅಂಗಾಲಿನ ಕೆಳಗೆ ಎನ್ನುವ

ಹುಂಬತನ. ಆಗಲೇ ಒಂದು ದಿನ ಇಂಗ್ಲೀಷ್ ಟೀಚರ್, ಮನೆಯಲ್ಲಿ ಎಲ್ಲರೂ ಇಂಗ್ಲೀಷಿನಲ್ಲಿ ನಿಮ್ಮ ಸಹಿ ಕಲಿತುಕೊಂಡು ಬನ್ನಿ ಎನ್ನುವ ಫರ್ಮಾನು ಹೊರಡಿಸಿದ್ದರು. ಅದೆಷ್ಟು ಖುಷಿಯಾಗಿತ್ತು ಎಂದರೆ ಶಾಲೆ ಬಿಟ್ಟ ತಕ್ಷಣ ಹೆಚ್ಚೂಕಡಿಮೆ ಹಕ್ಕಿಯ ಹಾಗೆ 'ಫುರ್ರನೆ' ಮನೆಗೆ ಹಾರಿ, ಪಾಟೀಚೀಲ ಅಲ್ಲೆಲ್ಲೋ ಎಸೆದು ನೋಟ್‌ಪುಸ್ತಕ ಮತ್ತು ಪೆನ್ನು ಹಿಡಿದು, ಲೆಕ್ಕ ಬರೆಯುತ್ತಿದ್ದ ಅಜ್ಜನ ಮುಂದೆ ಹಾಜರಾಗಿದ್ದೆ.

'ಅಜ್ಜಾ ನಮ್ಮ ಸೈನ್ ಕಲಿತುಕೊಂಡು ಬರಬೇಕಂತೆ' ಎಂದು ಹೇಳುತ್ತಿದ್ದಂತೆ, ಎಸ್‌ಎಸ್‌ಎಲ್‌ಸಿ ಓದುವ ಚಿಕ್ಕಪ್ಪ, 'ನಿನ್ನ ಹೆಸರು ಬರಿಯೇ, ಅದೇ ಸೈನು' ಎಂದಾಗ, ಪಾಪ ಇವನಿಗೆ ಸಹಿಯ ಬಗ್ಗೆ 'ಸಹೀ ಸೆ ಮಾಲೂಮ್ ನಹಿ' ಎನ್ನುವಂತೆ ಕರುಣಾಪೂರಿತ ನೋಟ ಬೀರಿದ್ದೆ. ನಂತರ ಎಲ್ಲರೂ ಅದೇ ಮಾತನ್ನೇ ರಿವೈಂಡ್ ಮಾಡತೊಡಗಿದಾಗ, ನನ್ನದೇ ಹೆಸರನ್ನು ತಿರುಗಿಸಿ, ಮುರುಗಿಸಿ, ಕೆಡಿಸಿ, ಗೀಚಿ, ಗಜಿಬಿಜಿ ಮಾಡಿ ಹಾಕಲು ನಾನಾ ಕಸರತ್ತು ನಡೆಸತೊಡಗಿದೆ. ಆರೋಗ್ಯವಂತ ಹೃದಯದ ಕಾರ್ಯಕ್ಷಮತೆಯನ್ನು ತೋರುವ ಜಿಗ್‌ಜಾಗ್ ರೇಖೆಗಳು ಸ್ಕ್ರೀನ್ ಮೇಲೆ ಮೂಡಿದಂತೆ ಕಾಣುವ ಸಹಿ ಮಾತ್ರ ನನಗೆ ದಕ್ಕಲೇ ಇಲ್ಲ. ಪ್ರತಿಸಲ ಸಹಿಹಾಕುವಾಗಲೂ ನಿಯಂತ್ರಣ ತಪ್ಪಿದ ಹೃದಯಬಡಿತದಂತೆ, ಕಲಾವಿದರಿಗಿಂತ ಹೆಚ್ಚು ಕಲಾತ್ಮಕವಾಗಿ ವಿವಿಧ ವಿನ್ಯಾಸಗಳು ಮೂಡಿ, ಒಮ್ಮೆ ಹಾಕಿದ ಸಹಿಗೂ ಮತ್ತೊಮ್ಮೆ ಹಾಕಿದ ಸಹಿಗೂ ತಾಳಮೇಳ ಇಲ್ಲದಂತಾಗಿ, ಕೊನೆಗೆ ದುಂಡು ಅಕ್ಷರಗಳಿಗೇ ಒಗ್ಗಿಕೊಂಡೆ. ಸ್ವತಂಕ್ಕೊಂದು ಸುಂದರ ಸೂರು ಕಟ್ಟಿಕೊಳ್ಳದವರು ಪೇಚಾಡುವಂತೆ, ಸ್ವಂತಕ್ಕೊಂದು ಸು(ಕು)ರೂಪದ ಸಹಿಯನ್ನು ಕಟ್ಟಿಕೊಳ್ಳಲಾಗದ ಬಗ್ಗೆ ತುಂಬ ಖೇದವಿದೆ.



ಅಜ್ಜ ತೀರಿದ ನಂತರ, ಅವರ ಪೆನ್ಷನ್ ತರಲು ಹೆಬ್ಬೆಟ್ಟಿನ ಅಜ್ಜಿಗೆ ಸಹಿ ಕಲಿಸಲು ಅಪ್ಪ, ಚಿಕ್ಕಪ್ಪಂದಿರೆಲ್ಲರೂ ಸರ್ಕಸ್ ಮಾಡಿ, ಕೊನೆಗೂ ಪಾಸ್ವರ್ಡ್‌ಪರ್ಫುಲ್ ರೀತಿಯಲ್ಲಿ 'ಎಲ್ಲಮ್ಮ' ಎಂದು ಬರೆಸಲು ಯಶಸ್ವಿಯಾದಾಗ ಒಬ್ಬಟ್ಟು ತಿಂದಂತೆ ಸಂಭ್ರಮಿಸಿದ್ದರು. ಆದರೆ ಪ್ರತಿತಿಂಗಳೂ ಪೆನ್ಷನ್ ತರುವುದಕ್ಕೆ ಮುಂಚಿನ ಎರಡು ದಿನ ತಾಲೀಮಿನಂತೆ, ಅಜ್ಜಿಗೆ ಸಹಿ ಪ್ರಾಕ್ಟೀಸ್ ಮಾಡಿಸಲೇಬೇಕಿತ್ತು. ಕೊನೆಗೆ ಎಲ್ಲರೂ ಬೇಸತ್ತು, ವಿವಿಧ ಕಾರಣಗಳನ್ನು ಹೇಳುತ್ತಾ ನುಣುಚಿಕೊಂಡು, ಸಣ್ಣಚಿಕ್ಕಪ್ಪನಿಗೆ ಈ ಕೆಲಸವನ್ನು ವಹಿಸಿ ನಿರಾಳಾಗಿದ್ದರು. ಅವನು ಪ್ರಾಕ್ಟೀಸ್ ತಂಟೆಗೂ ಹೋಗದೆ, ಬ್ಯಾಂಕಿಗೆ ಸೀದಾ ಅಜ್ಜಿಯನ್ನು ಕರೆದುಕೊಂಡು ಹೋಗಿ, ಅರ್ಜಿ ತುಂಬಿ ತಾನೇ ಎಡಗೈನಿಂದ 'ಎಲ್ಲಮ್ಮ' ಎನ್ನುವ ಕುಣಿಯುವ ಅಕ್ಷರಗಳನ್ನು ಸಹಿಮಾಡಿ ಹಣ ತರುತ್ತಿದ್ದ. ಅಜ್ಜಿಯ ಬಾಯಿಯಿಂದ ಈ ವಿಷಯ ತಿಳಿದ ನಂತರ ಎಲ್ಲರೂ ಸೇರಿ ಅವನಿಗೆ ಬಿಸಿನೀರು ಕಾಸಿದ್ದರು. ಹೀಗೆ ಸಿಗ್ನೇಚರ್ ಜೊತೆಗೆ ಸರಸವಾಡುತ್ತ ಆಡುತ್ತ, ಅವನ ಮದುವೆಯ ಬ್ಯಾಂಡ್ ಮೊಳಗಿಸಲು, ಬಾರ್‌ಗೆ ಕರೆದುಕೊಂಡು ಹೋಗಿ ಸಿಗ್ನೇಚರ್ ಬ್ರ್ಯಾಂಡ್‌ನಲ್ಲಿ ಮುಳುಗೇಳಿಸಿದ ಮೇಲೆಯೇ ಹುಡುಗಿಯನ್ನು ಒಪ್ಪಿಕೊಂಡಿದ್ದು ಇತಿಹಾಸ.

ಬಹುಶಃ ಚಿಕ್ಕಪ್ಪನ ಚಾಳಿಯೇ ನನಗೂ ಬಂದಿತ್ತೋ ಏನೋ ಗೊತ್ತಿಲ್ಲ. ಎರಡೆರಡು

ಶಿಫ್ಟ್‌ಗಳಲ್ಲಿ ಅಪ್ಪ ಕೆಲಸ ಮಾಡುತ್ತಿದ್ದುದರಿಂದ ನಮ್ಮ ಮಾರ್ಕ್ಸ್‌ಕಾರ್ಡ್‌ಗೆ ಸಹಿ ಹಾಕಿಸಲು ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ನಾನೇ ಯಾರಿಗೂ ಹೇಳದೆ ಕೇಳದೆ ನನ್ನ ಮತ್ತು ತಂಗಿ ತಮ್ಮನ ಅಂಕಪಟ್ಟಿಗೂ ಸಲೀಸಾಗಿ ಸಹಿಮಾಡಿಕೊಡುತ್ತಿದ್ದೆ. ತುಂಬು ಕುಟುಂಬವಾದ್ದರಿಂದ ಇದೆಲ್ಲ ಯಾರ ಗಮನಕ್ಕೂ ಅಷ್ಟಾಗಿ ಬರುತ್ತಿರಲಿಲ್ಲ. ಅಲ್ಲದೆ ಅದು ತಪ್ಪು ಎಂದು ತಿಳಿಯುವ ವಯಸ್ಸೂ ನಮ್ಮದಲ್ಲ. ಅಂಚೆಕಚೇರಿಯಲ್ಲಿ ಒಂದು ದಿನ ಹೀಗೇ ಅಪ್ಪನ ಸಹಿಯನ್ನು ಮಾಡಿ ಅವರು ಹುಬ್ಬೇರಿಸಿ ನೋಡಿ, ಅಪ್ಪನನ್ನು ಕರೆಸಿ, ಇಬ್ಬರೂ ಸೇರಿಸಿ ಬುದ್ಧಿ ಹೇಳಿ ನನ್ನನ್ನು 'ಸಹಿ' ದಾರಿಗೆ ತಂದಿದ್ದರು.

ಈ ಸಹಿಯ ಕಹಿ ಅನುಭವವೂ ಒಂದಿದೆ. ಆಗೆಲ್ಲ ಮನೆಮನೆಗೇ ಬಂದು ಪಿಗ್ಮಿಹಣ ಕಲೆಕ್ಟ್ ಮಾಡುತ್ತಿದ್ದವನ ಹತ್ತಿರ ಅಮ್ಮ ಹಣ ಕಟ್ಟುತ್ತಿದ್ದಳು. ಅವಳ ಸಹಿಯನ್ನು ಎಡಗೈನಿಂದ ನಡುಗುತ್ತ ಬರೆದರೆ ನೂರಕ್ಕೆ ನೂರು ಮ್ಯಾಚ್ ಆಗುತ್ತಿದ್ದರಿಂದ, ಪಿಗ್ಮಿ ಕಲೆಕ್ಟರ್ ಅದೇ ತಂತ್ರ ಉಪಯೋಗಿಸಿ, ತಾನೇ ಸಹಿಮಾಡಿ ಚೂರೂ ನಡುಗದೆ ಹಣ ಹೊಡೆದಿದ್ದ.

ರಸಋಷಿ ಕುವೆಂಪು ಅವರ 'ದೇವರು ರುಜು ಹಾಕಿದನು' ಕವಿತೆಯಲ್ಲಿ ಬಾನಂಗಳದಲ್ಲಿ ಹಾರುವ ಬೆಳ್ಳಕ್ಕಿಗಳ ಸಾಲು ಅವರಿಗೆ ದೇವರ ಹಸ್ತಾಕ್ಷರದಂತೆ ಗೋಚರಿಸಿದ ಕಲ್ಪನೆಯೇ ಅದ್ಭುತ. ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸೆಲೆಬ್ರಿಟಿಗಳು ಭೇಟಿಯಾಗುತ್ತಿದ್ದಂತೆ ಆಟೋಗ್ರಾಫ್ ಎಂದು ಸಹಿಗೆ ಮುಗಿಬೀಳುತ್ತಿದ್ದವರು ಕಡಿಮೆಯಾಗಿ, ಸೆಲ್ಫೀಗಾಗಿ ಮರುಳಾಗಿರುವವರು ಹೆಚ್ಚಾಗಿದ್ದಾರೆ. ಶಾಲೆ ಕಾಲೇಜುಗಳ ಹಂತ ಪೂರೈಸುವ ಹೊತ್ತಿನಲ್ಲಿ, ಹೆಚ್ಚು ಹೆಚ್ಚು 'ಆಟೋಗ್ರಾಫ್' ಬರೆಸಿಕೊಂಡು ತಮ್ಮ ತಮ್ಮ ಪುಟ್ಟ ಸಹಿಪುಸ್ತಕದ ಗ್ರಾಫ್ ಏರಿಸಿಕೊಳ್ಳುತ್ತಿದ್ದವರ ಸಂಖ್ಯೆಯೇನು ಕಡಿಮೆಯಿರಲಿಲ್ಲ. 'ಆಟೋಗ್ರಾಫ್' ಎನ್ನುವ ಸಿನೆಮಾ ಕೂಡಾ ಹೆಸರಿನಿಂದಲೇ ಗಮನಸೆಳೆದಿತ್ತು. ಇತ್ತೀಚೆಗೆ ಶಿಕ್ಷಕಿಯೊಬ್ಬರು ತಮ್ಮ ಶಾಲೆಯ ಮಕ್ಕಳ ಕೈಲಿ ಕನ್ನಡದಲ್ಲೇ ಸಹಿ ಮಾಡಿಸಿ, ಗೋಡೆಗೆ ಅಂಟಿಸಿ ರಾಜ್ಯಾದ್ಯಂತ ಸಹಿಸಿಹಿ ಸುದ್ದಿ ಮಾಡಿದ್ದರು. ಲೇಖಕರೊಬ್ಬರು 'ಸಹಿ ಸಮಯ' ಎನ್ನುವ ಕಾರ್ಯಕ್ರಮ ಹಮ್ಮಿಕೊಂಡು, ಅಸಂಖ್ಯಾತ ಕನ್ನಡ ಓದುಗರು ಇದ್ದಾರೆ ಎಂಬುದನ್ನು 'ರುಜು'ವಾತು ಮಾಡಿಬಿಟ್ಟರು. 'ಸಹಿ ರಿ ಸಹಿ' ಎನ್ನುವ ಯಶವಂತ ಹಳಿಬಂಡಿಯವರ ನಾಟಕವೂ ಸಹಿಯ ಬ್ರಹ್ಮಾಂಡರೂಪದ ದರ್ಶನ ಮಾಡಿಸಿದೆ. ಇನ್ನು ಡಿಜಿಟಲ್ ಲೋಕದಲ್ಲಂತೂ 'ಸೈನ್ ಅಪ್' ಆಗದೆ ಮುಂದೆ ಸಾಗಲು ಸಾಧ್ಯವಿಲ್ಲ.

ಈಗ ಎಲ್ಲಿ ಸಹಿ ಮಾಡಿದರೆ ಏನು ಕಳೆದುಕೊಳ್ಳುತ್ತೀವೋ ಎನ್ನುವ ಕಾಲ. ಸಹಿಗಾಗಿ ಎಂತೆಂತಹ ಕಷ್ಟಗಳನ್ನು ಸಹಿಸಿಕೊಂಡವರೂ ಇದ್ದಾರೆ, ಮೋಸ, ವಂಚನೆ, ಕೇಡು ಬಯಸಿದವರೂ ಇದ್ದಾರೆ. ಈ ಸಹಿಯ ದೆಸೆಯಿಂದಲೇ ಸಂಪತ್ತನ್ನೆಲ್ಲ ಕಳೆದುಕೊಂಡು ಬೀದಿಗೆ ಬಿದ್ದವರಿದ್ದಾರೆ. ಅಂಕಪಟ್ಟಿ ಹಿಡಿದು ಸಹಿ ಹಾಕಲು ಮೊಮ್ಮಕ್ಕಳು ಅಜ್ಜನ ಕಡೆಗೆ ಹೋದರೂ, ಆ ಸಹಿಯಲ್ಲೇನೋ ಮಸಲತ್ತಿರಬಹುದು ಎನ್ನುವ ಗುಮಾನಿಯಿಂದ ಹಾಕದೆ ಇರುವವರೆಷ್ಟೋ ಜನ ಇದ್ದಾರೆ. 'ಇಬ್ಬರ ಹೆಂಡಿರ ಸುಖವು ಇಂದು ಕಂಡೇನಯ್ಯಾ ನಾ ಕಂಡೇನಯ್ಯಾ' ಎನ್ನುವ ಹಾಡಿನ ಸಾಲುಗಳಂತೆ, ವ್ಯವಹಾರಕ್ಕೊಂದು, ಉಳಿದದ್ದಕ್ಕೆಲ್ಲ ಮತ್ತೊಂದು ಎಂಬಂತೆ ಎರಡೆರಡು ಸಹಿಯನ್ನು ಮೇಂಟೇನ್ ಮಾಡಿಕೊಂಡು ಸೇಫ್ ಆಗಿರುವವರೇ ಹೆಚ್ಚು ಎನ್ನಬಹುದು.

ಒಂದಾಗುವುದಕ್ಕೆ, ಬೇರ್ಪಡುವುದಕ್ಕೆ, ಕೊಡುಕೊಳ್ಳುವಿಕೆಗೆ, ಒಪ್ಪಂದಕ್ಕೆ, ಒಡಂಬಡಿಕೆಗೆ ಎಲ್ಲೆಡೆ ಸಹಿಯದೇ ಸಾಮ್ರಾಜ್ಯ. 'ಸಹಿಯ ಸಹವಾಸವಿದು, ಸಹ್ಯವಲ್ಲವೋ ಮನುಜ' ಎನ್ನುವ ಕಾಲ. ನಾ ಹೇಳಿರುವುದೆಲ್ಲ ಸಹಿ(ರಿ) ತಾನೇ? ■

## ಅಕ್ತರ್ ಚಿಕಿತ್ಸೆ...

**ಎಚ್.ಗೋಪಾಲಕೃಷ್ಣ**

ನಿಮಗೆ ಶೋಯಿಬ್ ಅಕ್ತರ್ ಇನ್ನೂ ನೆನಪಿನಲ್ಲಿ ಇದ್ದಾನೆ ಅಂತ ತಿಳಿದಿದ್ದೇನೆ. ಶೋಯಿಬ್ ಅಕ್ತರ್ ಗೊತ್ತಿಲ್ಲದೇ ಇರುವವರಿಗೆ (ಅಂತಹವರು ಯಾರೂ ಇಲ್ಲ ಅಂತ ನನ್ನ ನಂಬಿಕೆ) ಅವನ ಬಗ್ಗೆ ತಿಳಿಸಿ ನಂತರ ಮುಂದಿನ ಕತೆಗೆ ಹಾರಬೇಕು ಅಂತ ಡಿಸೈಡ್ ಮಾಡಿದ್ದೀನಿ. ಶೋಯಿಬ್ ಅಕ್ತರ್ ಪಾಕಿಸ್ತಾನದವನು ಮತ್ತು ಆ ಕಾಲದಲ್ಲಿ ಸಿಕ್ಕಾ ಪಟ್ಟೆ ಫೇಮಸ್ ಆಗಿದ್ದ ಕ್ರಿಕೆಟ್ ಆಟಗಾರ. ವರ್ಲ್ಡ್ ನಂಬರ್ ಒನ್ ಫಾಸ್ಟ್ ಬೋಲರ್ ಅಂತ ಹೆಸರು ಮಾಡಿದ್ದ ಮತ್ತು ಇವನು ಕನಿಷ್ಠ ಅಂದರೆ ನೂರಾ ಅರವತ್ತು ಕಿಮೀ ವೇಗದಲ್ಲಿ ಬಾಲ್ ಬೋಲ್ ಮಾಡ್ತಾ ಇದ್ದ. ಅವನ ರೆಕಾರ್ಡ್ ಅಂದರೆ ನೂರಾ ಅರವತ್ತ ಎರಡು ಅವನ ಸ್ಪೀಡ್ ಅಂತೆ. ಅವನನ್ನು ರಾವಲ್ಪಿಂಡಿ ಎಕ್ಸ್‌ಪ್ರೆಸ್ ಅಂತ ಕೂಗುತ್ತಾ ಇದ್ದರು.ಅವನ ಬಗ್ಗೆ ಗೊತ್ತೀರೋರು ಹಳೇದು ನೆನಪಿಸಿಕೊಂಡರೆ ಹೊಸಬರು ಈ ಶೋಯಿಬ್ ಅಕ್ತರ್ ಅನ್ನುವ ಹೆಸರನ್ನು ಗೂಗಲ್ ನಲ್ಲಿ ಹುಡುಕ್ತಾ ಇದ್ದೀರಿ... ಇಷ್ಟೂ ಪ್ರೋಲಾಗ್ ನೊಂದಿಗೆ ಮುಂದೆ ಹಾಪ್ ಮಾಡುತ್ತೇನೆ. ಮೊದಮೊದಲು ಏನೋ ಲಿಂಕೆ ಇಲ್ಲದೇ ಬುರುಡೆ ಬಿಡ್ತಾ ಅವ್ನೆ ಇವ್ನು ಅಂತ ನಿಮಗೆ ಅನಿಸ್ಬೋದು. ಕೊನೇ ಗಂಟ ಓದಿ, ಮಧ್ಯೆ ನಗು ಬರ್ತದೆ, ನಕ್ಬಿಡಿ.. ಕೊನೆಗೆ ನಿಮಗೇ ಗೊತ್ತಾಗ್ತದೆ, ಲಿಂಕ್ ಸಿಗ್ತದೆ ಮತ್ತು ಅಬ್ಬಾ ಎಷ್ಟು ಚೆನ್ನಾಗಿ ರೈಲು ಬಿಟ್ನಪ್ಪಾ ಇವ್ನು ಅಂತ... ಈಗ ಮುಂದೆ ಓದ್ರಲಾ....

ನಮ್ಮ ಗೋಪಣ್ಣನ ಶೂ ಸೈಜ್ ಎಷ್ಟಪ್ಪಾ ಅಂದರೆ ಬಾಟಾ ಕಂಪನಿಯಲ್ಲಿ ಸಹಾ ಇವನ ಸೈಜ್‌ನ ಶೂ ಸಿಕ್ತಾ ಇರಲಿಲ್ಲ. ಇದು ಅವನು ಕೆಲಸಕ್ಕೆ ಸೇರಿದ ಹೊಸದರಲ್ಲಿ. ಶೂ ಸಿಕ್ಕಲಿಲ್ಲ ಅಂತ ಸುಮ್ಮನೆ ಕೂರೋ ಪೈಕಿ ಅಲ್ಲ ಗೋಪಣ್ಣ. ನೂರು ಅಂಗಡಿ ಸುತ್ತಿ ಅಲ್ಲಿರೋ ಅತಿ ದೊಡ್ಡ ಸೈಜ್ ಶೂ ತೆಗೆಸಿ ಊಹೂಂ ಆಗುಲ್ಲ ಅಂತ ನಿಟ್ಟುಸಿರು ಬಿಟ್ಟು ಮುಂದಿನ ಅಂಗಡಿಗೆ ಹೋಗುತ್ತಿದ್ದ. ಎಲ್ಲೂ ಇವನ ಸೈಜಿನ ಶೂ ಸಿಗದೇ ಇದ್ದಾಗ ಇಡೀ ಬೆಂಗಳೂರು ಸಂದಿ ಗೊಂದಿ ಹುಡುಕಿ ಒಬ್ಬರು ಚಪ್ಪಲಿ ರಿಪೇರಿ ಅವರನ್ನು ಗುರುತಿಸಿದ್ದ. ಇವರ ವಿಶೇಷ ಏನಪ್ಪಾ ಅಂದರೆ ಗೋಪಣ್ಣನ ತರಹ ಓವರ್ ಸೈಜ್ ಬೆಳೆದಿರ್ತಾರಲ್ಲ, ಅಂತಹವರಿಗೆ ಅವರ ಕಾಲಿಗೆ ಸರಿ ಹೊಂದುವ ಹಾಗೆ ಚಪ್ಪಲಿ ಶೂ ತಯಾರು ಮಾಡಿ ಕೊಡೋದು. ಯಾವುದೋ ಸ್ಪೆಶಲ್ ಅಂಟು ಹಾಕಿ ಅವರು ಚಪ್ಪಲಿ ಮಾಡಿ ಕೊಡ್ತಾ ಇದ್ದರು. ಅದಕ್ಕೆ ವಿಶೇಷವಾದ ಅಟ್ಟೆ ಅಂದರೆ ಸೋಲು (sole). ಇದೂ ಸಹ ಪಾದಕ್ಕಿಂತ ಸುತ್ತಲೂ ಅರ್ಧ ಮುಕ್ಕಾಲು ಇಂಚು ಕೆಲವುಸಲ ಕಾಲಿಗಿಂತ ಆರು ಇಂಚು ದೊಡ್ಡದು ಇರುವಂತಹುದು! ಇಂತಹವನ್ನು ಹೊಲಿದು ಕೊಡ್ತಾ ಇದ್ದರು. ಈ ಅಂಗಡಿ ಹುಡುಕುವ ಮೊದಲು ಗೋಪಣ್ಣ ಪಟ್ಟ ಪಾಡಿನ ಬಗ್ಗೆ ಒಂದು ಪುಟ್ಟ ನೋಟ್..

ಮೊದಲು ಅಂಗಡಿಯಲ್ಲಿ ಇರುವ ಅತಿ ದೊಡ್ಡ ಸೈಜ್‌ನ ಚಪ್ಪಲಿ ಅಥವಾ ಶೂ ತೆಗೆದು ಕೊಂಡು ಅದರಲ್ಲಿ ಕಷ್ಟಪಟ್ಟು ಪಾದ ಸಿಕ್ಕಿಸಿಕೊಂಡು ಚಪ್ಪಲಿ ಶೂ ನಿರ್ಮಾತ್ರರನ್ನು ಬಾಯಿತುಂಬಾ ಸಹಸ್ರ ನಾಮಾರ್ಚನೆ ಮಾಡುತ್ತಾ ಗೋಪಣ್ಣ ಅಂಗಡಿಯಿಂದ ಆಚೆ ಬರುತ್ತಿದ್ದ. ಇವನಿಗೆ ರೆಡಿಮೇಡ್ ಚಪ್ಪಲಿ ಅಂದರೆ ಚಿಕ್ಕಪೇಟೆಯಲ್ಲಿ ಒಂದು ಅಂಗಡಿ ನಾನು ಗುರುತಿಸಿದ್ದೆ. ಅಲ್ಲಿ ಅಂಗಡಿಯವರು ಶೋ ಕೇಸಿನಲ್ಲಿ ಒಂದು ಐದಡಿ ಉದ್ದ ಮೂರು ಅಡಿ ಅಗಲದ ಚಪ್ಪಲಿ ತಯಾರಿಸಿ ಇಟ್ಟಿದ್ದರು. ಚಿಕ್ಕಪೇಟೆ ಕಡೆ ಹೋದಾಗಲೆಲ್ಲಾ

ಈ ಅಂಗಡಿ ಮುಂದೆ ಹೋಗೋದು. ಜತೆಯಲ್ಲಿ ಗೋಪಣ್ಣ ಇದ್ದರೆ,ಗೋಪಣ್ಣ ನೋಡು ನಿನಗೋಸ್ಕರ ಚಪ್ಪಲಿ ಮಾಡಿ ಇಟ್ಟಿದ್ದಾರೆ ಅಂತ ಅದನ್ನು ತೋರಿಸೋದು, ಗೋಪಣ್ಣ ರೇಗಿ ಬಾರಿಸಲು ರೆಡಿ ಆಗುತ್ತಿದ್ದ. ನಾನು ಓಡಿ ವಿಜಯ ಲಕ್ಷ್ಮಿ ಥಿಯೇಟರ್ ಒಳಗೆ ನುಗ್ಗಿ ತಪ್ಪಿಸ್ಕೋತಾ ಇದ್ದೆ!

ಹೊಸಾ ಚಪ್ಪಲಿ ಕೊಂಡಾಗ ಅಂಗಡಿ ಅವನಿಗೆ, ಶೂ ಚಪ್ಪಲಿ ತಯಾರಕರಿಗೆ ಕೋಟಿ ಕೋಟಿ ನಾಮಾರ್ಚನೆ ಮಾಡುತ್ತಾ ಅಂಗಡಿಯಿಂದ ಆಚೆ ಚಪ್ಪಲಿ ತರುತ್ತಿದ್ದ ತಾನೇ? ಅದು ಕಿತ್ತು ಹೋಗುವ ತನಕ ಅದು ಹೇಗೋ ಹಿಂಸೆ ಪಟ್ಟುಕೊಂಡು ಫ್ಯಾಕ್ಟರಿಗೆ ಧರಿಸುತ್ತಿದ್ದ. ಗೋಪಣ್ಣ ಕೆಲಸಕ್ಕೆ ಸೇರಿ ಅದೆಷ್ಟೋ ವರ್ಷಗಳ ನಂತರ ಅಲ್ಲಿ ಯೂನಿಫಾರ್ಮ್ ಕೊಡಲು ಶುರೂ ಮಾಡಿದರು. ಇದರ ಒಂದು ಭಾಗವಾಗಿ ಶೂ ಸಹ ಅವರೇ ನೀಡುವುದು. ಇದು ನೂರಕ್ಕೆ ತೊಂಬತ್ತ ಒಂಬತ್ತು ಪಾಯಿಂಟ್ ಒಂಬತ್ತು, ಒಂಬತ್ತು, ಒಂಬತ್ತು.. ಹೀಗೆ ಹತ್ತು ಒಂಬತ್ತು ಬರಲಿ, ಜನಕ್ಕೆ ಓಕೆ ಆದರೂ ಗೋಪಣ್ಣ ಅಂತಹ ಒಬ್ಬರಿಗೆ ನಾಟ್ ಓಕೆ! ಕಾರಣ ಅವನ ಕಾಲಿನ ಸೈಜ್ ಶೂ ಇಲ್ಲದಿರುವುದು. ಶೂ ಬೇಡ ಅಂತ ಬಿಡುವ ಹಾಗಿಲ್ಲ ಬೇರೆ. ಶೂ ಬೇಡ ಅಂತ ಬಿಟ್ಟರೆ ಪರ್ಯಾಯ ಏನೂ ಇರಲಿಲ್ಲ. ಚಪ್ಪಲಿ ಹಾಕ್ಕೊಂಡು ಫ್ಯಾಕ್ಟರಿಗೆ ಹೋಗೋ ಹಾಗಿಲ್ಲ, ರೂಲ್ಸ್ ಅಡ್ಡ ಬರ್ತದೆ.

ಬೇರೆ ದಾರಿ ಇಲ್ಲದೇ ಹತ್ತನೇ ಸೈಜ್ (ಅದೇ ದೊಡ್ಡದು ಆಗ) ಶೂ ತೆಗೆದುಕೊಂಡು ಹರಸಾಹಸ ಪಟ್ಟು ಅದನ್ನು ಹಾಕಿಕೊಳ್ಳುವುದು ಮತ್ತು ಇಡೀ ದಿನ ರಾತ್ರಿ ಇಂತಹ ದೊಡ್ಡ ಅಳತೆಯ ಕಾಲನ್ನು ಕೊಟ್ಟು ಸೃಷ್ಟಿಸಿದ ಬ್ರಹ್ಮನನ್ನು, ಅವನ ತಂದೆಯನ್ನು, ಅವನ ತಂದೆಯನ್ನು, ಅವನ ತಂದೆಯನ್ನು.....ಹೀಗೆ ನಿದ್ದೆ ಬರುವ ತನಕ ಅದೆಷ್ಟೋ ಬ್ರಹ್ಮನ



ಮತ್ತು ಅವನ ತಂದೆಯರನ್ನು ಬೈಯುತ್ತಾ ಜೀವನ ಮಾಡುವುದು ಅಭ್ಯಾಸ ಆಗಿಬಿಟ್ಟಿತ್ತು! ಅದರ ಜತೆಗೆ ಎರಡೂ ಕಾಲಿನ ಕಿರುಬೆರಳು ಮತ್ತು ಹೆಬ್ಬೆಟ್ಟಿನ ಪಕ್ಕದಲ್ಲಿ ಗೋಲಿ ಗಾತ್ರದ ಗಂಟು ಹುಟ್ಟಿತ್ತು. ಶೂ ತೊಟ್ಟಾಗ ಬಾಯಿ ಬಡಿದುಕೊಳ್ಳುವಷ್ಟು ನೋವು. ಶೂ ಬೇಡ ಅಂತ ಬಿಟ್ಟರೆ ಶೂ ಹೋಗುತ್ತೆ, ಚಪ್ಪಲಿ ಅವನ ಖರ್ಚಿನಲ್ಲಿ ಕೊಂಡು ಹೋಗಲು ಮನಸು ಬಾರದು; ಅದಕ್ಕಿಂತ ಮಿಗಿಲಾಗಿ ಚಪ್ಪಲಿ ನಾಟ್ ಅಲೋಡ್ ಮತ್ತು ಬರಿಗಾಲಿನಲ್ಲಿ ಹೋಗುವ ಹಾಗಿಲ್ಲ.!. ಬರೀ ಕಾಲಿನಲ್ಲಿ ಹೋಗಲು ಕಾರ್ಖಾನೆ ಸೇಫ್ಟಿ ರೂಲ್ ನಲ್ಲಿ ಆಸ್ಪದ ಇಲ್ಲ. ಕೆಲಸ ಬಿಟ್ಟು ಬಿಡೋಣ ಅಂದರೆ ಕೆಲಸ ಬಿಟ್ಟು ಸಾಪಾಟಿಗೆ ಏನು ಮಾಡುವುದು? ಬೇರೆ ಕೆಲಸವೂ ಗೊತ್ತಿಲ್ಲ ಮತ್ತು ಕಳ್ಳತನ ಮಾಡಲು ಗೊತ್ತಿಲ್ಲ! ಬೇರೆ ಕೆಲಸ ಸಿಕ್ಕುತ್ತಲೂ ಇರ್ಲಿಲ್ಲ! ಹೀಗೇ ಒಂದೆರೆಡು ಮೂರುವರ್ಷ ತಳ್ಳಿದ ಗೋಪಣ್ಣ. ಪರಿಸ್ಥಿತಿ ಹೀಗೇ ಮುಂದುವರೆದು ಈ ಪಾದಗಳ ನೋವಿನಿಂದ ಮುಕ್ತಿ ಕೊಡಪ್ಪಾ

ದೇವರೇ ಅಂತ ಪ್ರಾರ್ಥಿಸಿದ.ಗೊರವನ ಹಳ್ಳಿ ಲಕ್ಷ್ಮಿ ಮೇಡಂಗೆ ಹರಕೆ ಹೊತ್ತ ಮತ್ತು ಮಂತ್ರಾಲಯದ ದೇವರಿಗೆ ತಿಂಗಳಿಗೆ ಒಮ್ಮೆ ಉರುಳು ಸೇವೆ ಮಾಡುವುದಾಗಿ ಹರಕೆ ಸಹ ಹೊತ್ತ.

ಒಂದು ದಿನ ರಾತ್ರಿ ಸೆಕೆಂಡ್ ಶಿಫ್ಟ್ ಮುಗಿಸಿಕೊಂಡು ಬಂದು ನೋವಿನ ಎಣ್ಣೆ ಹಾಕಿ ಕಾಲು ಮಾಲಿಶ್ ಮಾಡುತ್ತಾ ಟಿವಿ ಯಲ್ಲಿ ಒಂದು ಕ್ರಿಕೆಟ್ ಮ್ಯಾಚು ನೋಡುತ್ತಾ ಕೂತಿದ್ದ.

ಇವನ ಬಲಗಾಲು ಎಡಗಾಲಿನ ತೊಡೆಯ ಮೇಲೆ ರೆಸ್ಟಿಸಿತ್ತು ಮತ್ತು ಬಲಗಾಲಿನ ಹೆಬ್ಬೆರಳು ಮತ್ತು ಕಿರು ಬೆರಳಿನ ಮೇಲಿನ ಗಂಟುಗಳನ್ನು ನೇವರಿಸುತ್ತಿತ್ತು, ಇವನ ಎರಡೂ ಕೈಗಳು. ಗೋಪಣ್ಣ ಒಂದು ರೀತಿಯ ಹಿತವಾದ ಸುಖ ಅನುಭವಿಸುತ್ತಾ ಇದ್ದ.ಬಹುಶಃ ಕೃಷ್ಣ ಪರಮಾತ್ಮ ಪಲ್ಲಂಗದ ಮೇಲೆ ಅರ್ಧ ಮಲಗಿ ಸತ್ಯಭಾಮೆ ಕಾಲು ಒತ್ತುತ್ತಿದ್ದಾಗ ಇದೇ ಸುಖ ಅನುಭವಿಸಿರಬಹುದು.

ಈ ಹಿಂದೆ ಮಾಡಿದ್ದ ಇವನ ಪ್ರಾರ್ಥನೆ ಮತ್ತು ಹೊತ್ತಿದ್ದ ಹರಕೆ ದೇವರಿಗೆ ತಲುಪಿತ್ತು ಮತ್ತು ದೇವರು ಗೋಪಣ್ಣನ ಸಮಸ್ಯೆಗೆ ಒಂದು ಶಾಶ್ವತ ಪರಿಹಾರ ಕಂಡುಹಿಡಿದಿದ್ದ ಅಂತ ಕಾಣಿಸುತ್ತೆ. ಅಂತಹ ಶಾಶ್ವತ ಪರಿಹಾರ ಗೋಪಣ್ಣ ಕ್ರಿಕೆಟ್ ನೋಡುತ್ತಿದ್ದ ಈ ಸಮಯದಲ್ಲಿ ಸಿಕ್ಕಿತು. ಅದು ಇವನಿಗೆ ಗೋಚರವಾಗಿದ್ದು ಹೀಗೆ. ಇಂಡಿಯಾ ಪಾಕಿಸ್ತಾನ ಕ್ರಿಕೆಟ್ ಮ್ಯಾಚು. ಇಂಡಿಯಾ ದವರ ಬ್ಯಾಟಿಂಗ್ ಮುಗಿದಿತ್ತು.ಪಾಕಿಸ್ತಾನದ ಬೊಲಿಂಗು ಶುರು ಆಗಿತ್ತು. ಒಂದು ಓವರ್ ಪೆವಿಲಿಯನ್ ಕಡೆಯಿಂದ ಒಬ್ಬ ಬೋಲ್ ಮಾಡಿದ. ಅವನ ನಂತರ ಶೋಯಿಬ್ ಅಖ್ತರ್ ಬಂದ. ಶೋಯಿಬ್ ಅಖ್ತರ್ ಹೇಗೆ ಬೋಲ್ ಮಾಡುತ್ತಿದ್ದ ಅಂದರೆ ಎಡಗೈನಿಂದ ಬಲಗೈಗೆ ಬಾಲು ಎಸೆಯುತ್ತಾ ಕುಣಿಯುತ್ತಾ ಶುರು ಮಾಡುತ್ತಿದ್ದ...

ಶೋಯಿಬ್ ಅಕ್ತರ್ ಮೊದಲನೇ ಓವರನ್ನು ಬೋಲ್ ಮಾಡಲು ಮೂವತ್ತಮೂರು ಸ್ಟೆಪ್ಸ್ ವಿಕೆಟ್‌ನಿಂದಾ ಲೆಕ್ಕ ಹಾಕಿ ಅಲ್ಲಿ ನಿಂತ. ಫೀಲ್ಡರ್ಸ್ ಎಲ್ಲರೂ ಅವರವರ ಸ್ಥಾನದಲ್ಲಿ ನಿಂತಿದ್ದರು. ವಿಕೆಟ್ ಕೀಪರ್ ವಿಕೆಟ್ ಹಿಂದೆ ನಿಂತು ಒಂದೆರೆಡು ಬಾರಿ ಸ್ಮಾಲ್ ಜಂಪು, ಕದಂ ದಾಲ್ ಮಾಡುತ್ತಾ ಇದ್ದ. ಕೈ ಮೇಲೆತ್ತಿ ಆಕಾಶಕ್ಕೆ ಪಾರಲೆಲ್ ಆಗಿ ಎರಡು ಸುತ್ತು ತಿರುಗಿಸಿದ. ನಂತರ ಇನ್ನೊಂದು ಕೈನಿಂದ ಅದೇ ಸರ್ಕಸ್ ರಿಪೀಟ್ ಮಾಡಿದ. ಸೊಂಟ ಮುಂದಕ್ಕೆ ಹಿಂದಕ್ಕೆ ಮಾಡಿದ. ಆಗಿನ ಫೇಮಸ್ ಡ್ಯಾನ್ಸರ್ ಹೆಲೆನ್ ತರಹ ಒಂದು ಹತ್ತು ಹೆಜ್ಜೆ ಸ್ಟೆಪ್ಸ್ ಹಾಕಿ ವಿಕೆಟ್ ಹಿಂದೆ ನಿಂತ.

ಇತ್ತ ಶೋಯಿಬ್ ಅಕ್ತರ್ ಸುತ್ತಲೂ ನೋಡಿದ. ಎಡಗೈಯಿಂದ ಬಲಗೈಗೆ ಬಾಲು ಬದಲಾಯಿಸಿ ಕೊಳ್ಳುತ್ತಾ ಒಂದೊಂದೇ ಹೆಜ್ಜೆ ನೆಗೆದು ನೆಗೆದು ಇಟ್ಟ. ಅವನ ತಲೆಗೂದಲು ಇವನು ಹೆಜ್ಜೆ ಇಟ್ಟ ಹಾಗೆ ಅತ್ತ ಇತ್ತ ಹಾರುತ್ತಾ ಅವನ ಮುಖಕ್ಕೆ ಒಂದು ಅನಿರ್ವಚನೀಯ ಲುಕ್ ಕೊಟ್ಟಿತ್ತು. ವರ್ಡ್ಸ್ ವರ್ಥ್ ಒಂದು ಪದ್ಯದಲ್ಲಿ ವಿವರಿಸಿರುವ ಹಾಗೆ ಒಮ್ಮೆ ಬಲಕ್ಕೆ ಒಮ್ಮೆ ಎಡಕ್ಕೆ ಅವನ ಕೂದಲು ತಂಗಾಳಿ ಬೀಸಿದಾಗ ಗಿಡದಲ್ಲಿ ಡಾಫೋಡಿಲ್ಸ್ ಹೂವಿನ ಗೊಂಚಲು ಓಲಾಡುವ ಹಾಗೆ ಓಲಾಡುತ್ತಾ ಇತ್ತು. ಮತ್ತು ಶೋಯಿಬ್ ಅಖ್ತರ್ ನೋಡಿದಾಗ ಗೋಪಣ್ಣನಿಗೆ ಡಾಫೋಡಿಲ್ಸ್ ಹೂ ನೆನಪಿಗೆ ಬರುತ್ತಿತ್ತು. ಅವನು ನಿಜವಾದ ಡಾಫೋಡಿಲ್ಸ್ ನೋಡಿಲ್ಲ. ಯಾಕಪ್ಪಾ ಅಂದರೆ ಅವನು ವಿದ್ಯಾರಣ್ಯಪುರ ಬಿಟ್ಟು ಆಚೆ ಹೋದವನೇ ಅಲ್ಲ.

ನಿಧಾನಕ್ಕೆ ಟಿವಿ ಕ್ಯಾಮೆರಾ ಶೋಯಿಬ್ ಅಖ್ತರ್ ನ ತಲೆ, ಅವನ ಭುಜ, ಅವನ

ಕೈಗಳು, ಅವನು ನೆಗೆದು ಬರುತ್ತಿರುವ ಸ್ಟೈಲ್ ತೋರಿಸುತ್ತಾ ತೋರಿಸುತ್ತಾ ಅವನ ಹೊಟ್ಟೆ, ಅದರ ತೆಳಗಿನ ತೊಡೆ ಮಂಡಿಗೆ ಬಂದಿತು. ಈಗ ಅದು ನೇರ ಅವನ ಕಾಲಿಗೆ ಫೋಕಸ್ ಮಾಡಿದೆ! ಅವನ ಹನ್ನೆರಡನೇ ಸೈಜಿನ ಶೂ ತೊಟ್ಟ ಕಾಲುಗಳು ಓಟ ಕುದುರಿಸಿ ಒಂದೊಂದೇ ಹೆಜ್ಜೆ ಅತ್ತ ಇತ್ತ ಹಿಂದೆ ಮುಂದೆ ಹಾಕುತ್ತಾ ಬರುತ್ತಿದ್ದಾನೆ...ದೇವರು ಇದೇ ಸಮಯ ಕಾಯುತ್ತಿದ್ದ. ಗೋಪಣ್ಣ ಈ ನಿಮಿಷ ಟೀವಿ ಅತ್ತ ದಿಟ್ಟಿಸಿ ನೋಡುವ ಹಾಗೆ ಮಾಡಿದ.

ನಮ್ಮ ಗೋಪಣ್ಣನ ಗಮನ ಅವನ ಅಂದರೆ ಶೋಯಿಬ್ ಅಖ್ತರ್ ನ ಕಾಲನ್ನು ನೋಡುತ್ತಿದ್ದ ಹಾಗೇ ಥಟ್ಟನೆ ಅಲ್ಲೇ ನಿಂತು ಬಿಟ್ಟಿತು. ಬಿಟ್ಟ ಬಾಯಿ ಮತ್ತು ಬಿಟ್ಟ ಕಣ್ಣು ಬಿಟ್ಟ ಹಾಗೆ ಅವತ್ತು ಒಂದು ಗಂಟೆ ಶೋಯಿಬ್ ಅಖ್ತರ್ ನ ಬೊಲಿಂಗ್ ನೋಡಿದ.. ಹತ್ತು ನಿಮಿಷದ ನಂತರ ಅಡುಗೆ ಮನೆಗೆ ಓಡಿದ. ಅಲ್ಲಿಂದ ಒಂದು ಎಂಟು ಇಂಚಿನ ಕತ್ತರಿ, ತರಕಾರಿ ಹೆಚ್ಚುವ ಅರ್ಧ ಅಡಿ ಉದ್ದದ ಚಾಕು ತಂದ. ಅದನ್ನು ಎದುರಿನ ಟೇಬಲ್ ಮೇಲೆ ಇಟ್ಟ. ಬಾಗಿಲ ಬಳಿ ನಡೆದ. ಅದಕ್ಕೆ ಮೊದಲು ಶೋ ಕೇಸಿನಿಂದ ಬಣ್ಣದ ಪೆನ್ನು ಮಾರ್ಕರ್ ಪೆನ್ನು, ಸೀಮೆ ಸುಣ್ಣ ತೆಗೆದು ಕೊಂಡು ಅದನ್ನೂ ಟೇಬಲ್ ಮೇಲಿಟ್ಟ. ಬಾಗಿಲ ಬಳಿ ನಡೆದವನು ಮೂಲೆಯಲ್ಲಿ ಎರಡು ಗಂಟೆಯ ಹಿಂದೆ ಬಿಚ್ಚಿಟ್ಟಿದ್ದ ಶೂ ತೆಗೆದ. ಶೂ ಒಳಗೆ ಸಾಹಸ ಪಟ್ಟು ಮೊದಲು ಬಲ ಕಾಲು ತೂರಿಸಿದ. ನಂತರ ಅಷ್ಟೇ ಕಷ್ಟ ಪಟ್ಟು ಎಡ ಕಾಲು ತೂರಿಸಿದ. ನಂತರ ಆಪರೇಶನ್ ಅಕ್ತರ್‌ಗೆ ಕೂತ ಸೀಮೆ ಸುಣ್ಣ, ಮಾರ್ಕರ್ ಪೆನ್ನು ಉಪಯೋಗಿಸಿಕೊಂಡು ಎಡ ಕಾಲಿನ ಹೆಬ್ಬೆರಳು ಜಾಗ ಗುರುತು ಮಾಡಿದ. ನಂತರ ಅದೇ ಕಾಲಿನ ಕಿರು ಬೆರಳು ಜಾಗ ಗುರುತು ಮಾಡಿದ. ಇದರ ನಂತರ ಬಲ ಕಾಲಿಗೂ ಇದೇ ಪ್ರಯೋಗ ಮಾಡಿದ. ಬೆಳಗಿನ ಜಾವದ ತನಕ ಕೂತು ನಿದ್ದೆ ಕೆಟ್ಟು ಒಂದು ಹೊಸಾ ವೈಜ್ಞಾನಿಕ ಆವಿಷ್ಕಾರಕ್ಕೆ ಕಾರಣನಾದ....! ಮಾರ್ಕ್ ಮಾಡಿದ್ದ ಎರಡೂ ಶೂಗಳ ಆಯಾ ಭಾಗಗಳನ್ನು ಗುಂಡಗೆ ಕತ್ತರಿಸಿ ತೆಗೆದು ಬಿಟ್ಟಿದ್ದ. ಅವತ್ತಿನ ಟೀವಿಯಲ್ಲಿ ಶೋಯಿಬ್ ಅಖ್ತರ್ ಅವನ ಶೂಗೆ ಬಲಗಾಲಿನ ಹೆಬ್ಬೆರಳು ತೂ ರುವಷ್ಟು ಭಾಗವನ್ನುಕಿತ್ತು ಎಸೆದು ಬೋಲ್ ಮಾಡಿದ್ದು ಇವನು ನೋಡಿದ್ದ. ಮಾರನೇ ದಿವಸ ಇವನು ಶೂ ತೊಡ ಬೇಕಾದರೆ ಒಂದು ಎಳ್ಳು ಕಾಳಿನಷ್ಟೂ ನೋವಿಲ್ಲದೆ ಕಾಲು ತೂರಿಸಿದ. ಮೊದಲು ಎಡಗಾಲು. ನಂತರ ಬಲಗಾಲು. ಜೀವನದಲ್ಲಿ ಮೊದಲ ಬಾರಿಗೆ ಹೇಳಿಕೊಳ್ಳ ಲಾಗದ ಸಂತೋಷಪಟ್ಟ.....

ಮಾರನೇ ದಿವಸ ಇವನು ಫ್ಯಾಕ್ಟರಿಗೆ ಬಂದನಾ? ಈವರೆಗೆ ಯಾರೂ ನೋಡದಿದ್ದ ಸಂತೋಷ ಸಾಗರದಲ್ಲಿ ತೇಲಾಡಿದ, ಸ್ನೇಹಿತರ ಜತೆ ನಕ್ಕ, ಕುಣಿದ ಕುಪ್ಪಳಿಸಿದ. ಜೋಕು ಸಹ ಹೊಡೆದು ಅವನ ಜೋಕಿಗೇ ಅವನೇ ಬಿದ್ದು ಬಿದ್ದು ನಕ್ಕ. ತುಂಬಾ ಕುತೂಹಲದಿಂದ ಇವನ ಈ ಬದಲಾವಣೆ ಗಮನಿಸುತ್ತಾ ಇದ್ದ ಸ್ನೇಹಿತರು ಗರ ಬಡೆದಿದ್ದರು. ಯಾವಾಗಲೂ ಮುಖ ಸಿಂಡರಿಸಿಕೊಂಡು ಮಾಜಿ ಪ್ರಧಾನಿಗಳ ಹಾಗೆ ಆರು ತಿಂಗಳಿಂದ ಹೊಟ್ಟೆ ಕಟ್ಟಿಕೊಂಡ ಹಾಗೆ ಮುಖ ಮಾಡಿಕೊಂಡು ಅದೇನೋ ವೇದನೆ ಅನುಭವಿಸುತ್ತಿದ್ದ ಗೋಪಣ್ಣ ಏಕ್‌ದಂ ಟ್ರಾನ್ಸ್ ಫಾರ್ಮ್ ಆಗಿದ್ದ...! ಗೆಳೆಯರು ಈ ಸಂತೋಷ ಹಂಚಿಕೊಳ್ಳ ಬೇಕು ಗೋಪಣ್ಣ ಅಂತ ಪುಸ ಲಾಯಿಸಿ ಸಂಜೆ ತಿರುಪತಪ್ಪನ ಬಾರ್‌ಗೆ ಹೋದರಾ?

ಒಂದು ಆರು ಪೆಗ್ ನಂತರ ಗೋಪಣ್ಣ ಟೇಬಲ್ ಏರಿದ. ನನ್ನ ಕಾಲು ನೋಡ್ರಿ, ನನ್ನ ಶೂ ನೋಡ್ರಿ.. ಅಂತ ಎರಡು ಜೋಡಿ ಸ್ಟೆಪ್ ಹಾಕಿದ. ಶೂಗೆ ಪೂರ್ತಿ ಆಪರೇಶನ್ ಆಗಿತ್ತು. ಎರಡೂ ಶೂಗಳಿಗೆ ಹೆಬ್ಬೆರಳ ಜಾಗದಲ್ಲಿ ದೊಡ್ಡ ಕಿಂಡಿ, ಕಿರುಬೆರಳು ಇರುವ

ಕಡೆ ಮತ್ತೊಂದು ತೂತು ಮಾಡಿದ್ದ. ಸದರಿ ತೂತಿನಿಂದ ಹೊರಗೆ ಸಾಕ್ಸ್ ತೊಟ್ಟ ಕಿರು ಬೆರಳು, ಹೆಬ್ಬೆರಳು ಕಿಸಿ ಕಿಸಿ ನಗುತ್ತಾ ಕೂತಿದ್ದವು!

ಇದೇನು ಗೋಪಣ್ಣ ನ್ಯೂ ಡಿಸೈನು ಅಂತ ತೊದಲು ಮತ್ತು ಗೊಗ್ಗರು ಧ್ವನಿಯಲ್ಲಿ ಬುಡ್ಡಿ ಫ್ರೆಂಡ್ಸ್ ಕೇಳಿದ್ರಾ..? ಆರು ಪೆಗ್ ಅವರ ನಾಲಿಗೆ ಮೇಲೆ ಎಫೆಕ್ಟ್ ಮಾಡಿತ್ತು. ಗೋಪಣ್ಣ ಹಿಂದಿನ ರಾತ್ರಿ ಶೋಯಿಬ್ ಅಖ್ತರ್ ಬೋಲಿಂಗ್ ನೋಡಿದ್ದು, ಅದರಿಂದ ಐಡಿಯಾ ಹಾರಿಸಿದ್ದು, ಇಡೀ ರಾತ್ರಿ ಕೂತು ಶೂ ಆಪರೇಶನ್ ಮಾಡಿದ್ದೂ.... ಈ ಕತೆ ವಿವರವಾಗಿ ಬಿಚ್ಚಿಟ್ಟ. ಗೆಳೆಯರು ಗೋಪಣ್ಣ ಉಘೇ ಅಂತ ಉಘಾಯಿಸಿ ಮತ್ತೆರೆಡು ಪೆಗ್ ಗಿಟ್ಟಿಸಿದರು.....ಇನ್ನು ಮುಂದೆ ಗೋಪಣ್ಣ ಮಾಡಿದ ಈ ಹೊಸ ಆವಿಷ್ಕಾರ ಅಖ್ತರ್ ಚಿಕಿತ್ಸೆ ಎಂದು ಹೆಸರು ಪಡೆಯಿತು. ಗೋಪಣ್ಣ ಹೀಗೆ ಅಖ್ತರ್ ಚಿಕಿತ್ಸೆ ಮೂಲಕ ತನ್ನ ಪರ್ಮನೆಂಟ್ ನೋವಿಗೆ ಮುಕ್ತಿ ದೊರಕಿಸಿಕೊಂಡಿದ್ದ ಹಾಗೂ ಶೂ ಕತ್ತರಿಸಿ ತೊಡುವ ಉಪಾಯ ಕಂಡು ಹಿಡಿದಿದ್ದ. ದುರಂತ ಎಂದರೆ ಈ ಹೊಸ ಆವಿಷ್ಕಾರವನ್ನು ಅವನು ಪೇಟೆಂಟ್ ಮಾಡಿಸದೇ ಇದ್ದದ್ದು...

■

**ಇಷ್ಟೇ...ಅಧಿಕಾರದ ನಂಟು...!** **ವಿ.ವಿಜಯೇಂದ್ರ ರಾವ್**

ತಾಲೂಕಿನ ತಹಶಿಲ್ದಾರರ ಆಫೀಸ್ ಯಾವಾಗಲೂ ಗಿಜಿ ಗಜಿಯಾಗೆ ಇರುತ್ತಿತ್ತು. ಎಲ್ಲರೂ ತಮ್ಮ ತಮ್ಮ ಕಾರ್ಯಗಳನ್ನು ಮುಗಿಸಿಕೊಳ್ಳಲು ತಹಶಿಲ್ದಾರರ ಆಗಮನವನ್ನು ಬಲು ಕಾತುರದಿಂದ ಕಾಯುತ್ತಿದ್ದರು.ಯಾವಾಗಲೂ ಸಮಯಕ್ಕೆ ಸರಿಯಾಗಿ ಬರುವ ಅವರು, ಅಂದು ಯಾವುದೋ ಕಾರ್ಯನಿಮಿತ್ತ ಬರಲು ತಡವಾದ್ದರಿಂದ, ಅವರು ಅವಸರದಲ್ಲಿ ಬರುವಾಗ, ಅವರ ಆಫೀಸಿನ ಮುಂಭಾಗದಲ್ಲಿ ಇದ್ದು ಒಂದು ತೆರೆದ ಬಾವಿಯೊಳಗೆ ಅಕಸ್ಮಾತ್ತಾಗಿ ಬಿದ್ದುಬಿಟ್ಟರು. ಅದನ್ನು ಮುಚ್ಚಿರಿ, ಇಲ್ಲಾ ಭದ್ರವಾದ ಕಟ್ಟೆ ಕಟ್ಟಿರಿ ಎಂದು ಎಷ್ಟು ಅಹವಾಲುಗಳನ್ನು ಕೊಟ್ಟಿದ್ದರೂ, ಅದನ್ನು ಕಾರ್ಯಗತಗೊಳಿಸದಿದ್ದರ ಪರಿಣಾಮ, ಅವರಿಗೆ ಮುಳುವಾಯಿತು. ಅದು ಅವರ ಆಫೀಸಿನಲ್ಲಿ ಕಾಡ್ಗಿಚ್ಚಿನಂತೆ ಹರಡಿ, ಆಫೀಸಿನ ಎಲ್ಲಾ ಸಿಬ್ಬಂದಿ ಅವರನ್ನು ಬಾವಿಯಿಂದ ಎತ್ತಲು ತಮ್ಮ, ತಮ್ಮ ಶರ್ಟಗಳನ್ನು ಬಿಚ್ಚಿ, ಅದನ್ನು ಒಂದಕ್ಕೊಂದು ಗಂಟು ಹಾಕಿ, ಅವರಿಗೆ ಅದನ್ನು ಕಳುಹಿಸಿ, ಇದನ್ನು ಗಟ್ಟಿಯಾಗಿ ಹಿಡಿದುಕೊಳ್ಳಿ ಸಾರ್, ನಾವು ನಿಮ್ಮನ್ನು ಮೇಲೆಳೆದು ಕಾಪಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟು, ಎಳೆಯಲು ಪ್ರಾರಂಭ ಮಾಡಿದರು. ಆಫೀಸಿನ ಹೆಂಗಳೆಯರು, ತಮ್ಮ ಬಾಸಿಗೆ ಹೀಗಾಯ್ತಲ್ಲ ಎಂದು ಮುಸಿ, ಮುಸಿ ಅಳಲು ಶುರುಮಾಡಿದರು. ಗಂಡಸರು ಅವರಿಗೆ ಸುಮ್ಮನೆ ಇರಿ ನೀವೆಲ್ಲರು ಎಂದು ಗದರಿ, ಕಷ್ಟಪಟ್ಟು ಅರ್ಧದಷ್ಟು ಎಳೆಯುತ್ತಿದ್ದಾಗ........

ಆ ಆಫೀಸಿನ ಪ್ಯೂನ್ ಮಾದೇವ ಬಂದು, "ಏ, ನೀವೆಲ್ಲಾ ಇಲ್ಲಿ ಏನು ಮಾಡುತ್ತಿದ್ದೀರಾ?, ಈ ತಹಶಿಲ್ದಾರರಿಗೆ ಬೇರೆ ಕಡೆ ಟ್ರಾನ್ಸಫರ್ ಆಯ್ತಂತೆ. ಹೊಸ ತಹಶಿಲ್ದಾರರು ನಮ್ಮ ಆಫೀಸಿಗೆ ಬಂದು, ಯಾಕೆ ಯಾರೂ ಆಫೀಸಿನಲ್ಲಿ ಇಲ್ಲ ಎಂದು ಕೂಗಾಡುತ್ತಿದ್ದಾರೆ ಎಂದು ಹೇಳಿದ ಕ್ಷಣವೇ... ಎಲ್ಲರೂ ಹಿಡಿದಿದ್ದ ಹಗ್ಗವನ್ನು ಬಿಟ್ಟು, ಎಲ್ಲಾ ಆಫೀಸಿನ ಕಡೆಗೆ ಓಡಿದರು....!

ನೀತಿ: ಅಧಿಕಾರದಲ್ಲಿರುವವರೆಗೆ ಮಾತ್ರ ಗೌರವ, ಮರ್ಯಾದೆ ಎಲ್ಲಾ.... ಇಳಿದ ಮರುಕ್ಷಣವೇ ನೀನ್ಯಾರೋ...ನಾನ್ಯಾರೋ ಅಷ್ಟೇ...!

# ದಾಮೋದರನ ಆಹಾರ ಪ್ರೀತಿ

ಮಹಾಬಲ. ಕೆ.ಎನ್

ಅದೇಕೋ ಬಹಳ ದಿನಗಳಿಂದ ನಮ್ಮ ಕಾಫಿ ಕಟ್ಟೆಗೆ ದಾಮೋದರ ಭೇಟಿ ನೀಡಿರಲಿಲ್ಲ. ದರಿದ್ರನಿಗೆ ಹೊಟ್ಟೆ ದಾಮೋದರನಿಗೆ ನಿದ್ದೆ ಎಂಬ ಗಾದೆಯ ಮಾತಿನ ಅರ್ಥ ಹೇಗೋ ಏನೋ? ಹೊಟ್ಟೆಯ ವಿಚಾರದಲ್ಲಂತೂ ನಮ್ಮ ದಾಮೋದರ ಒಂದು ಹೆಜ್ಜೆ ಮುಂದೆ ಅನ್ನಿ. "ದಾಮು,ಕಾಫಿ ಜತೆ ಒಂದು ಇಡ್ಲಿ ಹೇಳಲಾ?" ಎಂದು ಯಾರಾದರೂ ಕೇಳಿದರೆ. "ನೀನು ಬೇಕಾದರೆ ಒಂದು ತಗೋ. ನನಗೆ ಎರಡು ಇಡ್ಲಿ ಜತೆಗೆ ಒಂದು ವಡೆ" ಎಂಬ ಉತ್ತರ ಬರದಿದ್ದರೆ ಕೇಳಿ.

"ಹಾಗಾದರೆ ಮನೆಯಲ್ಲಿ ಉಪಾಹಾರ ಇಲ್ಲವೇ ದಾಮೂ ? ಎಂದು ಯಾರಾದರೂ ಪ್ರಶ್ನಿಸಿದರೆ." ಯಾಕಿಲ್ಲ ಗುರೂ ?ಮನೆಯಲ್ಲಿ ಸರೂ ಪೂರಿ ಜತೆಗೆ ಸಾಗು ಮಾಡ್ತಾ ಇದಾಳೆ. ಅದಿನ್ನೂ ಒಂಬತ್ತೂವರೆಗೆ. ಅಷ್ಟೊತ್ತಿಗೆ ಇವೆಲ್ಲ ಭಸ್ಮ ಆಗತ್ತೆ" ಎಂದಿದ್ದ ಒಮ್ಮೆ.

ಇದೇ ರೀತಿ ಒಮ್ಮೆ ನಾಲ್ಕು ಜನ ಸಹೋದ್ಯೋಗಿಗಳು ಬ್ಯಾಂಕ್ ಶಾಖೆಯ ಎದುರಿಗಿದ್ದ ಹೋಟೆಲಿಗೆ ಮಧ್ಯಾಹ್ನ ಉಪಾಹಾರಕ್ಕೆ ಹೋಗಿದ್ದರಂತೆ. ಅಲ್ಲಿ ಅಚಾನಕ್ಕಾಗಿ ನುಗ್ಗಿದ ದಾಮುವಿಗೆ ಆತಿಥೇಯ "ಬಾ ದಾಮೂ. ನೀನೂ ಏನಾದ್ರೂ ಕಬಳಿಸು." ಎಂದು ಉಪಚಾರಕ್ಕೆ ಕರೆದಾಗ ಈ ಮಹಾಶಯ "ಈಗ ತಾನೇ ಎಂ ಟಿ ಆರ್ ನಲ್ಲಿ ಊಟ ಆಯ್ತು. ಆದರೂ ನೀನು ಪ್ರೀತಿಯಿಂದ ಕರೆದ ಮೇಲೆ ಇಲ್ಲ ಅನ್ನೋಕೆ ಮನಸ್ಸಾಗಲ್ಲ.ಏನಾದ್ರೂ ಲೈಟ್ ಆಗಿ ತೊಗೋತೀನಿ." ಎನ್ನುತ್ತಾ ಮಾಣಿಯನ್ನು ಕರೆದು ಏನೇನಿದೆ ಅಂತ ಕೇಳಿ, ಎಲ್ಲಾ ಐಟಮ್ ಆರ್ಡರ್ ಮಾಡಿದನಂತೆ. ಪಾಪ! ಆತಿಥೇಯ ಪಾಪ ಜೇಬು ಮುಟ್ಟಿ ನೋಡಿಕೊಳ್ಳುವಂತಾಯಿತು ಎಂಬುದಂತೂ ನಿಜ.

ಇಂಥ ಹಿನ್ನಲೆಯ ದಾಮೂ ಒಂದು ದಿನ ಇದ್ದಕ್ಕಿದ್ದಂತೆ ಕಾಫಿ ಕಟ್ಟೆಯಲ್ಲಿ ಪ್ರತ್ಯಕ್ಷನಾದ. "ಏನೂ ದಾಮೂ, ದರ್ಶನವಿಲ್ಲ ಹೇಳಿ ಬಿಟ್ಟು ಹೊಗೋದಲ್ವ?" ಆಕ್ಷೇಪಿಸಿದೆ.

ಇದ್ದಕ್ಕಿದ್ದಂತೆ ಯೂರೋಪ್ ಟೂರ್ ಫಿಕ್ಸ್ ಆಗಿ ಹೊರಟುಬಿಟ್ಟೆ ಶಿಷ್ಯ, ಹೇಳೋಕ್ಕೂ ಟೈಮ್ ಇರಲಿಲ್ಲ ಎಂಬ ಉತ್ತರ ಅವನಿಂದ ಬಂತು.

ಜನಾರ್ದನ ಗುಪ್ತ "ಅಲ್ಲಯ್ಯ ಹದಿನೈದು ದಿನ ಫಾರಿನ್ ಟೂರ್ ಅಂದ್ರೆ ನಮ್ಮ ಹಳೇ ಮೈಸೂರಿನ ಹೈಕ್ಳು ತಿನ್ನಲು ಏನೂ ಸಿಗಲ್ಲ ಅಂತ ಗೊಣಗಿಕೊಂಡು ಮತ್ತೆ ಒಣಗಿಕೊಂಡು ಕರಿಬೇವ ಕಡ್ಡಿ ಥರಾ ಆಗಿ ಬರ್ತಾರೆ.ಇದೇನು ನೀನು ಮಾತ್ರ ನಾಲಕ್ ಕೆಜಿ ತೂಕ ಏರಿಸಿಕೊಂಡ ಹಾಗಿದೆ ?" ಬಹಿರಂಗವಾಗಿಯೇ ಪ್ರಶ್ನಿಸಿಬಿಟ್ಟ.

ಯಾತಕ್ಕೆ ತೆಳ್ಳಗಾಗಬೇಕು? ಮನೆಯಲ್ಲೇ ಸಿಗದಷ್ಟು ಕವಳ ಹೊತ್ತು ಹೊತ್ತಿಗೆ ಸಿಕ್ಕಾಗ? ದಾಮುವಿನ ಪ್ರಶ್ನೆರೂಪದಲ್ಲೇ ಉತ್ತರಿಸಿದ.

"ಮತ್ತೆ ವಿದೇಶದಲ್ಲಿ ಅದರಲ್ಲೂ ಇಟಲಿಯಂಥ ದೇಶದಲ್ಲಿ ನಮ್ಮ ಥರ ಇಡ್ಲಿ, ವಡೆ, ದೋಸೆ, ಪೂರಿ ಇಂಥವು ಸಿಗೋದು ಕನಸು ಅಂತಾರಲ್ಲಯ್ಯ ?" ಸಂದೇಹವಾದಿ ಶಾಂತಯ್ಯ ಕೇಳಿದ.

"ಅದಿಲ್ಲದಿದ್ರೆ ಏನಯ್ಯ ಅದರಪ್ಪನಂಥವು ಸಿಗತ್ತೆ. ನೀನೂ ಒಂದ್ಸರಿ ಹೋಗಿ ಬಂದು ನೋಡು." ಅದೇ ಆತ್ಮವಿಶ್ವಾಸ ದಾಮುವಿನ ದನಿಯಲ್ಲಿ.


ಆಯ್ತಪ್ಪ ಧೀರ, ನಮಗೂ ಸ್ವಲ್ಪ ವಿವರಿಸು ಮುಂದೆ ಯಾರಾದರೂ ಫಾರಿನ್

ಟೂರ್ ಮಾಡೋವ್ರಿಗೆ ಧೈರ್ಯ ಕೋಡೋಕ್ಕೆ ಬರತ್ತೆ "ಎಂದೆ ಸೋತು ಶರಣಾದವನಂತೆ.

ಕೇಳ್ರಯ್ಯ, ಅಲ್ಲಿ ಅಲ್ಲಿ ಲಾಡ್ಜ್ ತಲುಪಿದ ಕೂಡಲೇ ರೂಮಿನ ಕೀ ಸಿಗತ್ತೆ, ಅಲ್ಲಿ ಬಾಗಿಲಲ್ಲೇ ಫ್ರಿಜ್. ತೆಗೆದು ನೋಡಿದ್ರೆ ಹಾಲಿನ ಪ್ಯಾಕೆಟ್, ಅದರ ಮೇಲೆ ಟ್ರೇನಲ್ಲಿ ಬಿಸ್ಕತ್, ಚಿಪ್ಸ್ ಕಾಫಿ ಪುಡಿ, ಸಕ್ಕರೆ ಇತ್ಯಾದಿ. ಮೂಲೆಯಲಿ ಕೆಟಲ್.

ಬೆಳಗಾಗೆದ್ದು ಹಲ್ಲುಜ್ಜಿದ ತಕ್ಷಣ ಯಾವೋನ್ನೂ ಕುರೀದೇ ನಮ್ಮ ಕಾಫಿ ನಾವೇ ಮಾಡಿಕೊಳ್ಳೋ ಸೌಭಾಗ್ಯ. ಸ್ವಲ್ಪ ಹೊತ್ತಿನಲ್ಲೇ ದೂರವಾಣಿಯಲ್ಲಿ ಕೋಕಿಲ ಕಂಠದ ಸ್ವರ "ಉಪಾಹಾರ ಸಿದ್ಧವಿದೆ ಬನ್ನಿ ಅತಿಥಿಗಳೇ" ರಿಸೆಪ್ಷನ್ನಿನಿಂದ ಕರೆ. "ಸ್ನಾನ ಆಯ್ತಾ ಅಂತ ಅಪ್ಪಿತಪ್ಪಿಯೂ ಕೇಳೋದೇ ಇಲ್ಲ" ಸ್ವಲ್ಪ ವಿರಾಮ ಪಡೆದು ಪ್ರವರ ಮುಂದುವರೆಸಿದ.

ಅಲ್ಲೆ ಹೋದ ತಕ್ಷಣ ಸ್ವಾಗತಕಾರಿಣಿಯಿಂದ "ಬನ್ನಿ ಬನ್ನಿ, ನಿಮ್ಮ ಟೇಬಲ್ ನಂಬರ್ ನಾಲ್ಕು" ಎಂಬ ಇನಿದನಿಯ ಮಾರ್ಗದರ್ಶನ. ಅಲ್ಲಂತೂ ಅಣಿಗೊಂಡ ಮೇಜುಗಳಲ್ಲಿ ಕಾಫಿ, ಟೀ, ಹಾಲು, ಬಸಿಂಯುವ ಯಂತ್ರಗಳು ಮಧುಪಾನಿಗಳನ್ನು ಕೈ ಬೀಸಿ ಕರೆವ ಬೀರ್ ಪೀಪಾಯಿ. ಇಡೀ ಹಣ್ಣುಗಳು, ಕತ್ತರಿಸಿದ ಘನೀಕೃತ ಹಣ್ಣುಗಳು, ಜಾಮ್, ಜೇನುತುಪ್ಪ, ಬೆಣ್ಣೆ ಇತ್ಯಾದಿಗಳ ಟ್ರೇ, ಬ್ರೆಡ್ ಜತೆಗೆ ಅದನ್ನು ಗರಿಗರಿಮಾಡಿಕೊಳ್ಳಲು ಯಂತ್ರ, ಬೇಯಿಸಿದ ಆಲೂಗಡ್ಡೆ, ಮೊಟ್ಟೆ, ಇನ್ನೂ ಲೆಕ್ಕವಿಲ್ಲದಷ್ಟು ಚರಪುಗಳು. ನಿಧಾನವಾಗಿ ಸವಿಯುತ್ತ, ತಂಪಾದ ಪ್ರಕೃತಿ ಆಸ್ವಾದಿಸುತ್ತ, ಸುತ್ತ ಸುಳಿಯುವ ಬಣ್ಣದ ಬೀಸಣಿಗೆಗಳ ನೋಡುತ್ತ ಹೊಟ್ಟೆ ಸೇರಿದ್ದೆಷ್ಟೋ ಲೆಕ್ಕವಿಟ್ಟವರು ಯಾರು. ಅವನಿನ್ನೂ ಆ ಲೋಕದಲ್ಲೇ ಇದ್ದ.



ಇದು ಉಪಾಹಾರದ ವೈಭವ ಆಯ್ತು.ಊಟದ್ದೇನು? ಅಲ್ಲೇ ಅಲ್ವೇ ಎಡವಟ್ಟು? ಸಿದ್ದಪ್ಪನ ಕೋಟಿ ವರಹದ ಪ್ರಶ್ನೆ.

ತಾಳು ಅದನ್ನೂ ವಿವರಿಸ್ತೀನಿ. ಮಧ್ಯಾಹ್ನ ಮತ್ತೆ ರಾತ್ರಿ ಊಟಕ್ಕೆ ಯಾವುದಾದರೂ ಇಂಡಿಯನ್ ರೆಸ್ಟೋರೆಂಟ್ ಅಂತ ಬೋರ್ಡ್ ಇರೋ ಹೋಟೆಲಿಗೆ ಕರೆದುಕೊಂಡು ಹೋಗ್ತಾನೆ ಟೂರ್ ಮ್ಯಾನೇಜರು. ಯಾರೋ ಪಂಜಾಬಿಗಳೋ, ಗುಜರಾತಿಗಳೋ ತಲೆಮಾರುಗಳಿಂದ ನಡೆಸಿಕೊಂಡು ಬಂದ ಹೋಟೆಲುಗಳು ಅವು. ಮದ್ಯ, ಮಾಂಸಾಹಾರ, ಸಸ್ಯಾಹಾರ ಎಲ್ಲ ಒಂದೇಕಡೆ ಇರುತ್ತೆ. "ಸಸ್ಯಾಹಾರ ಎಂದರೆ?" ಮತ್ತೆ ಸಿದ್ದಪ್ಪನ ಸಂದೇಹ.

ಅಲ್ಲಿ ಘಮಘಮಿಸುವ ಬಾಸ್ಮತಿ ಅಕ್ಕಿ ಅನ್ನ, ಗೋಧಿ ರೊಟ್ಟಿ, ಕಾಬೂಲ್ ಕಡಲೆ ಕುರ್ಮ, ಸಲಾಡ್, ಆಲೂಗಡ್ಡೆ ಫ್ರೈ ಎಲ್ಲ ಇರತ್ತೆ. ಒಳ್ಳೆ ಮೊಸರು, ರಾತ್ರಿ ಹೊತ್ತು ಸ್ವೀಟು, ಅಥವಾ ಐಸ್ಕ್ರೀಮು, ಹೇಳ್ರಯ್ಯ ಇದರಲ್ಲಿ ತಿನ್ನಬಾರದ್ದು ಏನಿದೆ? ನೀವೂ ಶನಿವಾರ

ರಾತ್ರಿ ಈಟ್ ಔಟ್ ಅಂತ ಸಂಸಾರ ಸಮೇತ ಹೋಗಿ ಇಂಥವನ್ನೇ ಅಲ್ಲವೇ ಆರ್ಡರ್ ಮಾಡೋದು? "ಪ್ರಶ್ನಿಸಿದ ದಾಮೂ. ಮತ್ತೆ ಪಿಜ್ಜಾ ಬರ್ಗರ್ ಇತ್ಯಾದಿ" ಮತ್ತೊಂದು ಅನುಮಾನ ಗುಪ್ತನಿಗೆ.

ಅದೂ ಮಜವಾಗಿರತ್ತೆ ಬಿಡ್ರಯ್ಯ. ಪಿಜ್ಜಾ ನಮ್ಮಲ್ಲಿ ಪದರ ಚಪಾತಿ ಇದ್ದ ಹಾಗೆ. ಬರ್ಗರ್ ಕೂಡ ಬೊಂಬಾಟೇ. ಬಾಯಿ ತೆರೆದ ಬನ್ನಿನಲ್ಲಿ ಚೀಸ್, ತರಕಾರಿ ಇತ್ಯಾದಿ ತುರುಕಿ ಮುಂದಿಡುತ್ತಾರೆ. ಅದನ್ನು ತಿನ್ನಲು ಬಾಯಿ ದೊಡ್ಡದಿರಬೇಕು ಅಷ್ಟೆ! ಇನ್ನು ಫ್ರೆಂಚ್ ಫ್ರೈ ಕರಿ ಅಲೂಗೆಡ್ಡೆ ಅಂದರೆ ಚಿಪ್ಸ್ ತರಹ. ತಿನ್ನಬಾರದ್ದೇನೂ ಅಲ್ಲ. "ಸಮಜಾಯಿಷಿ ನೀಡಿದ ದಾಮೂ. ನಾನು ಚರ್ಚೆ ಸಮಾಪ್ತಿಗೊಳಿಸುವ ದನಿಯಲ್ಲಿ "ಹಾಗಾದ್ರೆ ಅಲ್ಲಿನ ಆಹಾರ ಏನೂ ತೊಂದರೆ ಇಲ್ಲ ಅನ್ನು "ಎಂದೆ ಹಾಗನ್ನೋವ್ರನ್ನ ನನ್ನೆದುರು ತಂದು ನಿಲ್ಲಿಸು. ಸರಿಯಾಗಿ ಬೆಂಡ್ ಎತ್ತಿ ಬಿಡ್ತೇನೆ" ಎಂದು ಅಬ್ಬರಿಸಿ ಅಲ್ಲಿಂದ ಹೊರಟ ದಾಮೂ.

ವಿದೇಶಯಾತ್ರೆ ಏರ್ಪಡಿಸುವ ಪ್ರವಾಸಿ ಸಂಸ್ಥೆಗಳು ಆಹಾರ ಸೇವನೆ ವಿಷಯದಲ್ಲಿ ನಮ್ಮ ದಾಮೋದರನನ್ನೇ ಏಕೆ ಬ್ರಾಂಡ್ ರಾಯಭಾರಿಯನ್ನಾಗಿ ನೇಮಿಸಿಕೊಳ್ಳಬಾರದು ಅಂತ ನಮ್ಮ ಕಾಫಿಕಟ್ಟೆ ಗುಂಪಿಗೆ ಅಂದು ಅನ್ನಿಸಿದ್ದು ಅಚ್ಚರಿಯೇನಲ್ಲ.

■

## ಪಮ್ಮಿ ಮಾಡಿದ ಸ್ವೀಟ್

**–ಸುಮನಾ**

"..ಅಮ್ಮ, ಪಕ್ಕದ್ಮನೆ ಪರಿಮಳ ಆಂಟಿ ಮಾಡೋ ಹಾಗೆ ಕಡಲೆಕಾಯಿ ಬೀಜದ ಸಿಹಿ ಮಿಠಾಯಿ ನಾನೇ ಮಾಡ್ತೀನಿ ,ನೀನು ಏನು ಮಾಡ್ಬೇಕು ಅಂತ ಹೇಳು ಸಾಕು ಅಂತ ಪಮ್ಮಿಸ್ವೀಟ್ ಮಾಡಲು ಶುರು ಮಾಡಿದ್ಲು.

ಹ್ಲೂ..ಅಡಿಗೆಯ ಓ ಅಂದ್ರೆ ಠೊ ಅನ್ನೋದು ಗೊತ್ತಿಲ್ಲ, ಅದೇನು ಮಾಡ್ತಾಳೋ ಅಂದ್ಕೊಂಡು ಅಮ್ಮ..ಸರಿ ಕಣಮ್ಮ, ಪರಿಮಳ ಬರೋ ತನ್ಕಕಡಲೇಕಾಯಿ ಹುರಿದುಕೋ ಅಂತ ಹೇಳಿ..ಅಂಗಳದಲ್ಲಿ ಕುಳಿತರು..

ಸ್ವಲ್ಪ ಹೊತ್ತಾದ ಮೇಲೆ..ಘಂ ಅಂತ ವಾಸನೆ ಬರೋ ಬದ್ಲು ಸೀದು ಕರಕಲಾದ ವಾಸ್ನೆ ಬಂತು, ಏನಾಯ್ತೋ ಅಂತ ಓಡಿಬಂದು ನೋಡಿದ್ರು..ಪಮ್ಮಿ ಇನ್ನೂ ಹುರೀತಿರೋದು ನೋಡಿ, ಏನು ಮಾಡ್ತಿದೀಯ?? ಓವರ್ ಫ್ರೈ ಆಗ್ತಿದೆ.. ಇನ್ನೂ ಯಾಕೆ ಹುರೀತಿದೀಯ??

ಅಂದ್ರು..ಅಲ್ಲಮ್ಮಾ, ನೀನೇ ಹೇಳಿದ್ಯಲ್ಲ ಪರಿಮಳ ಬರೋವರ್ಗೂ ಹುರೀಬೇಕು ಅಂತ, ಕಾಯ್ತಾ ಇದೀನಿ ಇನ್ನೂ ಪರಿಮಳ ಆಂಟಿ ಬರ್ಲೇ ಇಲ್ಲ..ಅಂದಾಗ ಅಮ್ಮ ತಲೆಮೇಲೆ ಕೈ ಹೊತ್ತು ಕೂತರು..

ದಂನಆ

- ✓ ಯಾವ ಪ್ರಯತ್ನವೂ ಇಲ್ಲದೆ ದೊರೆಯುವುದು ವೃದ್ಧಾಪ್ಯ ಒಂದೇ.
- ✓ ಐ ಕುಡ್ ಲಿವ್ ವಿತೌಟ್ ಚಾಟ್ ಜಿಪಿಟಿ ಬಟ್ ಐ ಡೋಂಟ್.
- ✓ ಬೇರೊಬ್ಬರ ಮೋಡದಲ್ಲಿ ಕಾಮನ ಬಿಲ್ಲಾಗಲು ಪ್ರಯತ್ನಿಸಿ.
- ✓ ಬಿ ಹ್ಯಾಪಿ ಇನ್ ರಿಯಲ್ ಲೈಫ್, ನಾಟ್ ಜಸ್ಟ್ ಸೋಷಿಯಲ್ ಮೀಡಿಯ.
- ✓ ಅನೇಕ ಸಾಮಾನ್ಯ ಮನುಷ್ಯರು ಮಾಡಬಹುದಾದ ಕೆಲಸವನ್ನು ಒಂದು ಯಂತ್ರ ಮಾಡಬಹುದು ಆದರೆ ಒಬ್ಬ ಅಸಾಮಾನ್ಯ ಮಾಡಬಹುದಾದ ಕೆಲಸವನ್ನು ನಿರ್ವಹಿಸುವ ಯಂತ್ರ ಇಲ್ಲ.
- ✓ ಹಿ ಡ್ರೆಮ್ಟ್ ದಟ್ ಹಿ ವಾಸ್ ಸ್ಲೀಪಿಂಗ್!
- ✓ ಯುದ್ಧವನ್ನು ಸಾರುವವರು ವಯಸ್ಸಾದವರು. ಅದರಲ್ಲಿ ಹೋರಾಡಿ ಸಾಯುವವರು ಯುವಕರು.
- ✓ ಲೋಟ ಅರ್ಧ ತುಂಬಿದೆ ಅಥವಾ ಅರ್ಧ ಖಾಲಿ ಇದೆ ಎಂದು ಭಾವಿಸುವವರು ಆ ಲೋಟವನ್ನು ತುಂಬಲು ಸಾಧ್ಯ ಎಂಬ ಮಖ್ಯ ಅಂಶವನ್ನೇ ಮರೆತಿರುತ್ತಾರೆ.
- ✓ ದಿ ಓನ್ಲಿ ಮ್ಯಾನ್ ಹು ಕೆನ್ ಕಂಟ್ರೋಲ್ ಎ ವುಮನ್ ಆನ್ ಅರ್ಥ್ ವಿಥೌಟ್ ಆರ್ಗ್ಯುಮೆಂಟ್ ಈಸ್ ಎ ಕ್ಯಾಮೆರಾಮ್ಯಾನ್.
- ✓ ನಿನ್ನ ಲೋಟ ಅರ್ಧ ತುಂಬಿದೆಯೊ ಅಥವಾ ಅರ್ಧ ಖಾಲಿ ಇದೆಯೊ ಎಂದು ಕೇಳಿದವರಿಗೆ ನನ್ನ ಉತ್ತರ: ಸದ್ಯ ಲೋಟವಾದರೂ ಇದೆಯಲ್ಲ ನನ್ನ ಬಳಿ.
- ✓ ದಿ ಗ್ರೇಟೆಸ್ಟ್ ಡೇಂಜರ್ ಫಾರ್ ಮೋಸ್ಟ್ ಆಫ್ ಈಸ್ ನಾಟ್ ದಟ್ ವಿ ಏಮ್ ಟೂ ಹೈ ಅಂಡ್ ಮಿಸ್ ಇಟ್ ಬಟ್ ದಟ್ ವಿ ಏಮ್ ಟೂ ಲೊ ಅಂಡ್ ರೀಚ್ ಇಟ್.
- ✓ ನೀನೇಕೆ ಇಷ್ಟು ಕ್ಲಿಷ್ಟ? ಎಂದು ಬದುಕನ್ನು ಕೇಳಿದೆ. ನಗುತ್ತಾ ಅದು ಉತ್ತರಿಸಿತು: ನೀವು ಮಂದಿ ಸುಲಭವಾದದುದನ್ನು ಇಷ್ಟ ಪಡುವುದಿಲ್ಲವಲ್ಲಾ..
- ✓ ಡೋಂಟ್ ಲೆಟ್ ದಿ ಅಗ್ಲಿ ಇನ್ ಅದರ್ಸ್ ಕಿಲ್ ದಿ ಬ್ಯೂಟಿ ಇನ್ ಯು.
- ✓ ಎಷ್ಟೇ ಬೆಲೆ ಕೊಟ್ಟರೂ ಸಮಯವನ್ನು ಕೊಳ್ಳಲು ಆಗದು. ಆದುದರಿಂದ ನಿಮಗಾಗಿ ಯಾರಾದರೂ ಸಮಯವನ್ನು ವ್ಯಯಿಸಿದರೆ ಅದು ನಿಮ್ಮ ಬಗ್ಗೆ ಅವರು ಇಟ್ಟಿರುವ ಕಾಳಜಿಯನ್ನು ತೋರಿಸುತ್ತದೆ.
- ✓ ಯು ಕೆನಾಟ್ ಟಚ್ ಮ್ಯೂಸಿಕ್ ಬಟ್ ಮ್ಯೂಸಿಕ್ ಕೆನ್ ಟಚ್ ಯು.
- ✓ ಪ್ರತ್ಯಕ್ಷ ನೋಡಿದ ಮೇಲೆ ನಂಬಬೇಕೋ ಅಥವಾ ನಂಬಿದ ಮೇಲೆ ಪ್ರತ್ಯಕ್ಷ ನೋಡಬೇಕೊ?
- ✓ ಟೀಕೆಗಳ ಬಗ್ಗೆ ಉತ್ತರಿಸುತ್ತಾ ಹೋದರೆ ಪ್ರಶ್ನೆಗಳು ಹುಟ್ಟುತ್ತಲೇ ಇರುತ್ತವೆ. ಉತ್ತರಗಳು ಸಾಧನೆಯಲ್ಲಿರಲಿ.
- ✓ ಇಫ್ ಸಂಬಡಿ ಈಸ್ ಲುಕಿಂಗ್ ಫಾರ್ ಎ ಬಿನ್ ಟು ಥ್ರೊ ಆಲ್ ದೇರ್ ಟ್ರಾಶ್ ಮೇಕ್ ಶ್ಯೂರ್ ಇಟ್ಸ್ ನಾಟ್ ಇನ್ ಯುವರ್ ಮೈಂಡ್.

■

# ಬಸಪ್ಪನವರೆ ಸಿಸ್ಟಮ್ ಅಫ್ ಮೆಡಿಸಿನ್

**ಇ.ಆರ್. ರಾಮಚಂದ್ರನ್**

ಮೂಲೆ ಬಸಪ್ಪನವರ ಹೊಟ್ಟೇಲಿ ಬೆಳಿಗ್ಗೆಯಿಂದ ಸಂಕಟ. ಹಿಂದಿನ ರಾತ್ರಿ ಯಾರದೋ ಮದುವೆ ಬೀಗರ ಔತಣದಲ್ಲಿ ಪಾಯಸ ಚಿತ್ರಾನ್ನ ಆಂಬೊಡೆ ಎರಡು ರೌಂಡ್ ಆದ್ಮೇಲೆ ಇನ್ನೆರೆಡು ಸರ್ತಿ ಹಾಕಿಸಿಕೊಂಡಿದ್ದೋ ಅಥವ ಬನಾರಸ್ಸು ಅಲಹಾಬಾದ್ ಬೀಡನಾ ಸೇರಿಸಿ ಜಗದಿದ್ದಕ್ಕೋ ಗೊತ್ತಿಲ್ಲ...ಹೊಟ್ಟೆಯಲ್ಲಿ ಜುಗಳಿಬಂದಿ, ಜಗಳ ಬಂದಿ ಎರಡೂ ಸೇರಿ ದೊಂಬರಾಟ ನಡೀತಿದೆ....ಹೋಟ್ಲಲ್ಲೋ ಮದ್ವೇಲೋ ಮೂಲೇಲಿ ಕೂತ್ಕೊಂಡು ತಿನ್ನೋ ಅಭ್ಯಾಸ ಅವರ್ಗೆ... ಅದಕ್ಕೆ ಅವ್ರ ಹೆಸರಿಗೆ ಮೂಲೆ ಅಂಟಿಕೊಂಡಿದೆ.

ಓಡಿದರು.. ಡಾಕ್ಟರ್ ಡಾ. ಸಂಪಂಗಿ ಹತ್ರ..

'ಹೊಟ್ಟೇಲಿ ಶೂಲೆ ಚಾಕೂಲಿ ತಿವಿದ ಹಾಗಾಗ್ತಿದೆ ಸ್ವಲ್ಪ ನೋಡಿ ಡಾಕ್ಟ್ರೆ..'

'ಹೊಟ್ಟೆ ಊದಿದೆ... ನಿನ್ನೆ ಏನು ತಿಂದ್ರಿ ಬಸಪ್ಪನವರೆ..'

'ಅಯ್ಯೋ ಅನ್ನ ತಿಳಿ ಸಾರು ಮಜ್ಜಿಗೆ ನೀವು ಹೋದ ಸರ್ತಿ ಹೇಳಿದಾಗಿಂದ ಇದೇ ನನ್ನ ಡೈಎಟ್ಟು.. ಉಪ್ಪಿಟ್ಟೂ ಮುಟ್ಟಲ್ಲ..'

'ನಿಮ್ ಹೊಟ್ಟೇನೇ ಬೇರೆ ಏನೋ ಹೇಳ್ತಿದೆ...ಇರ್ಲಿ. ಈ ಟ್ಯಾಬ್ಲೆಟ್ಸ್ 10 ದಿವ್ಸ ಬೆಳಿಗ್ಗೆ ನಾಷ್ಟ, ರಾತ್ರಿ ಊಟವಾದ ಮೇಲೆ ದಿನಾ ತೊಗೊಳಿ..ಈ ಸಿರಪ್ಪು ಎರಡು ಚಮಚ ಮದ್ಯಾಹ್ನ ಊಟವಾದ ಮೇಲೆ ಕುಡೀರಿ.. ನೀವು ಹೇಳಿದ ಡೈಎಟ್ನ ಕನ್ಟಿನ್ಯು ಮಾಡಿ.. ಒಂದು ವಾರಕ್ಕೆ ರಿಲೀಫ್ ಸಿಗುತ್ತೆ.. ಹೋಗ್ದಿದ್ರೆ ಬನ್ನಿ.. ಎಂಡಾಸ್ಕೊಪಿ ಮಾಡ್ತಿನಿ... ಫೀಸಾ? 500 ರುಪೀಸ್'.

ಒಳ್ಳೆದೇ ಆಯ್ತು. ಡಾ.ಸಂಪಂಗಿಗೆ ನಾನು ತಿಂದಿದ್ದು ಹೇಳಿದ್ರೆ ಒಂದು 3 ತಿಂಗಳು ಹಸಿವೆಯಿಂದ ಸಾಯ್ಬೇಕಾಗಿರೋದು.. ಮೂರು ಹೊತ್ತೂ ಡೈಎಟ್ಟು ಗಂಜಿ-ಗಂಜಿ ಗಂಜಿ ಹಾಕಿರೋವ್ರು.. ಕುಡ್ದು ಪ್ರಾಣ ಹೋಗಿರೋದು.

ಬಸಪ್ಪನವರ ಹೆಂಡತಿ ಕಮಲಮ್ಮ ಆ ಔಷಧಿಗೆ ಒಂದು ಕಡೆ ಜಾಗ ಮಾಡಿ ಕೊಟ್ಟರು.

ಮೂರನೇ ದಿನ ಬಸಪ್ಪನವರ ಅಳಿಯ ಶಿವ ಫೋನ್ ಮಾಡ್ದ..

'ಹೇಗಿದ್ದೀರ ಮಾವಯ್ಯ.. ಯಾಕೊ ನಿಮ್ಮ ವಾಯ್ಸ್ ಡಲ್ ಆಗಿದೆ? ಹೊಟ್ಟೆ ಪ್ರಾಬ್ಲಂಮ್ಮಾ.. ನಾನಿಲ್ದೆ ಡ್ರಿಂಕ್ಸ್ ತೊಗೊಂಡ್ರಾ? ... ತಮಾಶೆಗೆ ಕೇಳ್ದೆ.. ಅಲೋಪತಿ ಕೆಲ್ಸ ಮಾಡ್ತಿಲ್ವೆ? ಅಲೋಪತಿ ನಮ್ ಶತ್ರೂಗೂ ಬೇಡ... ಮಾವಳ್ಳಿಲಿ ನಮ್ಮ ಆಯುರ್ವೇದಿಕ್ ಡಾಕ್ಟರ್ ಇದಾರೆ.. ಡಾ. ಸಿಂಗಾರಪ್ಪ. ವೆಲ್ ನೋನ್ ಆಯುರ್ವೇದಿಕ್ ಡಾಕ್ಟರ್. ನನಗೆ ಯಾರೋ ಅಲೋಪತಿನವನು ಸಿರೋಸಿಸ್ಸ್ ಅಂತ ಹೆರ್ಸಿದ್ದ.. 15 ದಿವಸದಲ್ಲಿ ಹೊಟ್ಟೆ ಪ್ರಾಬ್ಲಂನ ಓಡಿಸಿದ್ರು ಸಿಂಗಾರಪ್ಪ....ಅವ್ರ ಟ್ರೀಟ್ಮೆಂಟಲ್ಲಿ ವನ್ ಥಿಂಗ್ ಮಾವಯ್ಯಾ..ಡಯಟ್ ನಾರ್ಮಲ್ ಇರಲಿ ಅಂತಾರೆ.. ನೋವು, ಹೊಟ್ಟೇಲಿ ಗುಡು ಗುಡು ಶಬ್ದ ಎಲ್ಲಾ ಓಡಿಸ್ಬಿಡ್ತಾರೆ.. ನೀವು ಇವತ್ತೇ ಸಾಯಂಕಾಲ ಅವ್ರ ಹತ್ರ ಹೋಗಿ ಟ್ರೀಟ್ಮೆಂಟು ಶುರು ಮಾಡ್ಬಿಡಿ.. ನೆಕ್ಸ್ಟ್ ಟೈಮ್ ನಾನು ಬೆಂಗಳೂರಿಗೆ ಬಂದಾಗ ನಾನೇ ಡ್ರಿಂಕ್ಸ್ ತರ್ತೀನಿ.. ಒಟ್ಟಿಗೆ ಚೀರ್ಸ್ ಮಾಡೋಣ.. ಈಗ ಬೆಳ್ಳಾರಿಲಿ ಇನ್ನು 38 ಡಿಗ್ರಿ.. ಫಾರ್ಟಿ ದಾಟಿಲ್ಲ... ನೋಡ್ಕೊಳ್ಳಿ ಚೀರ್ಸ್.'

ಸಿಂಗಾರಪ್ಪ ನಾಮ, ಕುಂಕುಮ ಎರಡೂ ಹಾಕಿದ್ದರು. 'ಸೈಕಲ್ ಅಗರ್ಬತ್ತಿ ಹಚ್ಚಿದ್ರು.. ಒಳ್ಳೆ ವಾಸನೆ ಹೊಗೆ ಸುರುಳಿ ಸುರುಳಿಯಾಗಿ ಕ್ಲಿನಿಕ್ ಪೂರ್ತಿ ಓಡಾಡ್ತಿತ್ತು. ಅವರಿಗೆ ಫೋನ್ ಮಾಡ್ದಾಗ್ಲೇ ಸಂಜೆ ಕಾಫಿ ಕುಡಿಯದೇ ಬನ್ನಿ ಅಂತ ಹೇಳಿದ್ದರು. ಬಸಪ್ಪನವರಿಗೆ ಬೆಳಿಗ್ಗೆ ಸಾಯಂಕಾಲ ಕಾಫಿ ಬೇಕೇ ಬೇಕು. ಹ್ಯಾಗೋ ಅಡ್ಜಸ್ಟ್ ಮಾಡ್ಕೊಂಡು ಹೋದ್ರು ಬಸಪ್ಪ.

'ನಿಮಗೆ ಏನು ಪ್ರಾಬ್ಲಂ? ಹುಳಿ ತೇಗು ಬರುತ್ತಾ? ವಾಂತಿ ಆಗೋ ಹಾಗೆ ಆಗುತ್ತಾ?'

'ಹೊಟ್ಟೆ ಯಾವಾಗ್ಲೂ ಫುಲ್ ಆಗಿರುತ್ತೆ..ಹಸಿವೆ ಆಗಲ್ಲ..'

'ನಿಮ್ಮ ಅಳಿಯ ಕುಮಾರನಿಗೂ ಹೀಗೇ ಇತ್ತು..ಅವರ ಹೆಸರು ಶಿವಾನಾ? ಸರಿ ಬಿಡಿ. ಅವನಿಗೆ ಒಂದು ತಿಂಗಳಲ್ಲಿ ವಾಸಿ ಮಾಡ್ದೆ.. ಇಲ್ಲಿ ಬರ್ದಿದೀನಿ ..ನಮ್ ಕಂಪೌಂಡರ್ ಕೊಡ್ತಾನೆ..ಡೈರೆಕ್ಷನ್ ಅವ್ನೇ ಹೇಳ್ತಾನೆ. ಫೀಸ್ ..... ಕನ್ಸಲ್ಟನ್ಸಿ ಮತ್ತು ಮೆಡಿಸಿನ್ ಎರಡೂ ಸೇರಿ 500 ರುಪೀಸ್.'

'ನೀವು ಬಿಳಿ ಪುಡೀನ ಮಜ್ಜಿಗೆಲಿ ಬೆರಸಿ ಲೇಹ್ಯ ಮಾಡಿ ನೆಕ್ಕ ಬೇಕು, ಮೂರು ಸರ್ತಿ; ನೀಲಿ ಪುಡಿನ ಜೇನುತುಪ್ಪದಲ್ಲಿ ಈಕ್ವಲ್ ಆಗಿ ಮಿಕ್ಸ್ ಮಾಡಿ ದಿನಕ್ಕೆ ಮೂರು ಸರ್ತಿ; ರಕ್ತ ಕ್ವಾಲಿಟಿ ಇಂಪ್ರೂವ್ ಮಾಡಕ್ಕೆ 'ರಕ್ತ ಶುದ್ಧೀಕರಣ' ಮೂರು ಸರ್ತೀ 10 ಎಮ್ ಎಲ್, 10 ಎಮ್ ಎಲ್ ನೀರಿನ ಜೊತೆ 15 ದಿವಸ ಕುಡೀರಿ ಊಟಕ್ಕೆ ಮುಂಚೆ; ಊಟಕ್ಕೆ ಅರ್ಧ ಘಂಟೆಗೆ ಮುಂಚೆ ಬೆಳಿಗ್ಗೆ ರಾತ್ರಿ ಈ ಟ್ಯಾಬ್ಲೆಟ್ ತಿನ್ನಿ.. ರಾತ್ರಿ ಮಲಗ್ತಾ ಉತ್ತರ ದಿಕ್ಕಿಗೆ ಮಲಗಿ ಕೆಟ್ಟ ಕನಸು ಬೀಳಲ್ಲ ಆವಾಗ ಹೊಟ್ಟೇಲಿ ತಳಮಳ ಆಗಲ್ಲ. 3 ವೀಕ್ಸ್ ಆದ್ಮೇಲೆ ಬನ್ನಿ.. ಹೋಗ್ದೇ ಇದ್ರೆ ಶಿರೋಧ್ಧಾರ ಮಾಡಿಸ್ತಾರೆ' ಎಂದ ಕಂಪೌಂಡರ್.



ಕಮಲಮ್ಮ ಇನ್ನೊಂದು ಗೂಡಲ್ಲಿ ಆಯುರ್ವೇದದ ಔಷದಿಗೆ ಜಾಗ ಮಾಡಿದ್ರು.

ಆವತ್ತೇ ಬಸಪ್ಪ ಮುತ್ತುವರ್ಜಿಯಿಂದ ಶುರು ಮಾಡಿದ್ರು. ಬೆಳಿಗ್ಗೆ ಗುಡು ಗುಡು ಶಬ್ದ ಕೇಳಿಸ್ಲಿಲ್ಲ.. ಆದ್ರು ಫುಲ್ಲಾಗಿತ್ತು ಹೊಟ್ಟೆ.

ಬಸಪ್ಪನ ಫ್ರೆಂಡ್ಸ್, ಸೀನಿಯರ್ ಸಿಟಿಜನ್ಸ್ ದಿನಾ ಸಾಯಂಕಾಲ ಪಾರ್ಕಲ್ಲಿ ಮೀಟ್ ಮಾಡ್ತಾರೆ. ಅವ್ರು 15 ದಿವಸ ಹೋಗಿರ್ಲಿಲ್ಲ ... ಹೋಗೋ ಅಷ್ಟು ಹೊತ್ತಿಗೆ ಅವರು ವಾಕಿಂಗು ಮುಗಿಸಿ ಮಾಮೂಲು ಕಾಫಿಗೆ ಹೊರಟಿದ್ರು.

'ನೀನು ಬಂದು ಒಂದು ತಿಂಗಳಾಗ್ತಾ ಬಂತು. ನಾವೇ ನಿನ್ಮನೆಗೆ ಬಂದು ವಿಚಾರಿಸೋಣ ಅಂತ ಅನ್ಕೊಂಡಿದ್ವಿ. ಸೀನಿಯರ್ ಸಿಟಿಝುನ್ ಸ್ವಲ್ಪ ದಿವ್ಸ ಬರ್ಲಿಲ್ಲ

ಅಂದ್ರೆ ಅವ್ರ ವಾಕಿಂಗ್ ಫ್ರೆಂಡ್ಸೆ ಹೆದರ್ಕೆ ಆಗುತ್ತೆ.... ಯಾರಾದ್ರೂ ಸರಿ. ನೀನು ಬಿಡು ಕಲ್ ಗುಂಡ್ ಹಾಗೆ ಇದ್ದೀಯ... ಹೀಗೆ ಇರು.' ಪ್ರೆಸಿಡೆಂಟ್ ಶರಣಪ್ಪ ಶುರು ಮಾಡಿದ್ರು.

'ನನಗೆ ಹೊಟ್ಟೇಲಿ ಪ್ರಾಬ್ಲಂ ಇತ್ತು... ಇದೆ.. ಅದಕ್ಕೆ ಔಷದಿ ತೊಗೋಳ್ತಾ ಇದೀನಿ'.

'ಅದಕ್ಕೆ ಹೋಮಿಯೋಪತಿ ಬಿಟ್ರೆ ಬೇರೆ ಯಾವ್ದೂ ಸರಿ ಇಲ್ಲ. ಅದು ತಾನೆ ನೀನು ಈಗ ತೊಗೋಳ್ಳೊದು?'

'ಇಲ್ಲ.. ಅಲೋಪತಿ .. ಆಮೇಲೆ ಆಯುರ್ವೇದಿಕ್..'

'ಹೋಪ್ಲೆಸ್ ಅದೆಲ್ಲಾ.. ಹೋಮಿಯೋಪತಿ ನಿನ್ನ ಫುಲ್ ಸಿಸ್ಟಮ್ ಸರಿಮಾಡುತ್ತೆ. ಆ ಮೆಡಿಸಿನ್ ನಿನ್ನ ಸಿಸ್ಟಂ ಒಳಗೆ ಹೋಗಿ ಕಂಪ್ಲೀಟ್ ಕ್ಲೆನ್ಸ್ ಮಾಡುತ್ತೆ. ನಿನಗೆ ಮೆಜಸ್ಟಿಕ್ನಲ್ಲಿ ಗುಪ್ತ ಮಾರ್ಕೆಟ್ ಗೊತ್ತಾ?'

'ಹುಂ..ಯಾಕೆ?'

'ಅಲ್ಲಿ ಬೇಲೂರ್ ಶ್ರೀನಿವಾಸ ಐಯಂಗಾರ್ ಮನೆ ಗೊತ್ತಲ್ಲಾ.. ಅಲ್ಲೇ ಅಲ್ವೆ ಅವರ ಫ್ಯಾಮಿಲಿ ಮರ್ಡರ್ ಆಗಿದ್ದು.... ಅವರ ಪಕ್ಕದ ಮನೆ ಈಗ ಹೋಮಿಯೋಪತಿ ಕ್ಲಿನಿಕ್ ಆಗಿದೆ. ಡಾ. ಮೃತ್ಯುಂಜಯ ಹೋಮಿಯೋಪತಿ ಡಾಕ್ಟರ್. ಫುಲ್ ಡೀಟೇಲ್ಸ್ ತೊಗೊಂಡು ಮೆಡಿಸಿನ್ ಕೊಡ್ತಾರೆ. ಮೆಡಿಸಿನ್ ಆಗೋದ್ಮೇಲೆ ಇನ್ನೂ ಬೇಕಾದ್ರೆ ಅವ್ರ ಅಸಿಸ್ಟೆಂಟ್ ಮನೆಗೆ ಔಷಧಿ ತಂದು ಕೊಡ್ತಾನೆ. ಇವತ್ತೇ ಹೋಗಿ ನೋಡು.. ಬೇಗ ಟ್ರೀಟ್ಮೆಂಟು ಮಾಡ್ಸು..ಇಲ್ಲಿಗೂ ಬರ್ತಾ ಇರು. ಬರ್ದೇ ನಿಲ್ಲಿಸ್ಬೇಡ.. ನಮ್ಗೆ ಹೆದರ್ಕೆ ಆಗುತ್ತೆ.'

ಬಸವನಗುಡಿಯಿಂದ ಮೆಜಸ್ಟಿಕ್ಗೆ ಆಟೋಲಿ ಹೋದ್ರು ಬಸಪ್ಪ.

ಡಾ. ಮೃತ್ಯುಂಜಯನ ಅಸಿಸ್ಟೆಂಟ್ ಒಂದು ಡೈರಿ ತಂದು ಅವ್ರ ಮುಂದೆ ಕೂತು ಅವ್ರ. ಹೆಸರು, ಅಡ್ರೆಸ್, ಮೊಬೈಲ್ ನಂಬರ್ನಿಂದ ಹಿಡಿದು ಅವ್ರ 5 ವರ್ಷದ ಡೈಯಟ್, ಡ್ರಿಂಕಿಂಗ್ ಹ್ಯಾಬಿಟ್ಸ್, ಸ್ಲೀಪ್, ಸ್ಲೀಪ್ಲೆಸ್ನೆಸ್ ಎಲ್ಲಾ ಬರೆಸಿ ಕೊಂಡರು. ಪೊಲೀಸ್ ಸ್ಟೇಷನ್ನಲ್ಲಿ ಥರ್ಡ್ ಡಿಗ್ರಿ ಕ್ರಾಸ್ ಎಕ್ಸಾಮಿನೇಷನ್ ಶುರುವಾಯಿತು. ಹಗಲು ಇಷ್ಟನೋ, ರಾತ್ರಿನೋ, ಕಲರ್ ನೀಲಿ ನೋ ಊದ ಬಣ್ಣ... ಕಾಫಿನೋ ಟೀನೋ....

ಆಮೇಲೆ ಡಾ. ಮೃತ್ಯುಂಜಯ ಆ ಡೊಸಿಯರ್ ಜೊತೆ ಅವ್ರ ಪ್ರಾಬ್ಲಂ ಎಲ್ಲಾ ಕೇಳಿ ಮತ್ತೆ ನೋಟ್ಸ್ ಮಾಡ್ಕೊಂಡ್ರು.

'ಬಸಪ್ಪನವರೆ ನೀವು ಸೀನಿಯರ್ ಸಿಟಿಜನ್ ಗ್ರೂಪ್ ನವರು ಅಂತ ಹೇಳಿದ್ರಿ.. ನಿಮಗೆ ಸುಲಭವಾಗಿ ಮಾತ್ರೆ ಹೇಗೆ ತೊಗೊಳ್ಳೊದು ಅಂತ ತಿಳಿಸ್ತೀನಿ. ಇದಲ್ಲಾ ಬಹಳ ಸಣ್ಣ ಸಣ್ಣ ಮಾತ್ರೆಗಳು. ಇದನ್ನು ಬೇಕಾದ್ರೆ ಮ್ಯಾಗ್ನಿಫೈಯಿಂಗ್ ಗ್ಲಾಸಿನಲ್ಲಿ ಸರಿಯಾಗಿ ನೋಡ್ಬಹುದು. ನೀವು ಅದನ್ನು ಒಂದು ತೊಗೊಂಡು ಬಿಡಿ. ಅದಿಲ್ದೆ ಇದ್ರೆ ನಿಮ್ಮ ಕಣ್ಣಿಗೆ ಸ್ಟ್ರೈನ್ ಆಗುತ್ತೆ. ನಿಮ್ಮ ಹಿಸ್ಟರಿ ನೋಡಿದ್ರೆ ನಿಮಗೆ ಗ್ಯಾಸ್ಟ್ರಿಕ್ ಆಗಿರೋಹಾಗಿದೆ. ನೀವು ಈ ಔಷಧಿಗಳನ್ನು ತೊಗೋಳ್ಳಿ. ನಿಮಗೆ ಯಾವ ಔಷದಿ ಸರಿಯಾಗಿ ಒಗ್ಗುತ್ತೆ ಅಂತ ಗೊತ್ತಾಗೋದಕ್ಕೆ ಸ್ವಲ್ಪ ಟೈಮ್ ಆಗುತ್ತೆ. ಬೇರೆ ಬೇರೆ ಔಷದಿ ಟ್ರೈ ಮಾಡಬೇಕಾಗುತ್ತೆ. ಯಾವುದು ನಿಮಗೆ ಬೆಸ್ಟ್ ಸೂಟ್ ಆಗುತ್ತೆ ನೋಡೋಣ. ನಿಮಗೆ ಮನೇಗೆ ಔಷದಿ ಕಳಿಸ್ತೀವಿ. ಫೀಸ್ 400/ ರೂಪಾಯಿ. ನೆಕ್ಸ್ಟ್ ಟೈಮ್ ಮನೆಗೆ ಮೆಡಿಸಿನ್ ಕಳಿಸಿದರೆ ರೂ.500 ಆಗುತ್ತೆ. ಹಾಂ.. ನೀವು ಕೊಟ್ಟ ಮಾಹಿತೀಲಿ ಏನಾದ್ರೂ ವ್ಯತ್ಯಾಸ ಇದ್ದರೆ ತಕ್ಷಣ ಫೋನ್ ಮಾಡಿ..ಮೆಡಿಸಿನ್ ಚೇಂಜ್ ಮಾಡ್ಬೇಕಾಗುತ್ತೆ..'

ಮನೆಗೆ ಹೋದಾಗ ಒಬ್ಬ ಕಾರ್ಪೆಂಟರ್ ಜೊತೆ ಅವರ ಹೆಂಡತಿ ಮಾತಾನಾಡ್ತಿದ್ರು. ಬಸಪ್ಪನವರು ಮಾರ್ಕಟ್ಟಿಗೆ ಹೋಗಿ ಬರುವಷ್ಟರಲ್ಲಿ ಮರದಲ್ಲಿ ಬೇರೆ ಬೇರೆ ಶೆಲ್ಫ್ ಮಾಡಿದ್ದ. ಅದರಲ್ಲಿ ಅಲೋಪತಿ, ಆಯುರ್ವೇದ ಮತ್ತು ಹೋಮಿಯೋಪತಿ ಔಷಧಿಗಳನ್ನು ಆಯಾ ಗೂಡಿಗೆ ತುಂಬುತ್ತಿದ್ದರು. ಬಸಪ್ಪನವರ ಮಗ ಅದಕ್ಕೆ ಕಾಗದದಲ್ಲಿ ಆಯಾ ಹೆಸರು ಡಾಕ್ಟರ್ ಹೆಸರು ಹಾಕಿ ಅಂಟಿಸುತ್ತಿದ್ದ.

ಫೇಸ್ಬುಕ್ನಲ್ಲಿ ಬಹಳ ಜನ ಹೊಟ್ಟೆ ಉಬ್ಬರಕ್ಕೆ ಏನು ಔಷದಿ ಅಂತ ಹಾಕ್ತಾರೆ.. ಬಸಪ್ಪನವರ ಮಗಳು ಅದನ್ನು ಡೌನ್ ಲೋಡ್ ಮಾಡಿ ಅದನ್ನು ಉಪಯೋಗಿಸಲು ರೆಡಿ ಮಾಡಿದ್ಳು.. ಟಿವಿಯಲ್ಲೂ ಕಿವಿ ಮಾತು, ಅಂಬುಜಮ್ಮನ ಔಷಧಿನೂ ಬರೆದಿಟ್ಕೊಂಡಿದಾಳೆ. ಬಸಪ್ಪನವರ ಮಗ ಛಾಟ್ ಜಿಪಿಟಿ ಏಐನಿಂದ ಹೊಟ್ಟೆ ಉಬ್ಬರ ವಾಸಿಯಾಗುತ್ತಾ ಅಥವ ಇಲ್ಲವ ಅಂತ ನೋಡಿ ಚಾನ್ಸ್ % ಎಷ್ಟು ಅಂತ ನೋಡಿಟ್ಟಿದ್ದ.

ಹಾಗೇ ಗೂಗಲ್ನಲ್ಲಿ ಸಿಮ್ಟಮ್ಸ್ ಹಾಕಿ ಏನು ಪ್ರಾಬ್ಲಂ ಇರಬಹುದು ಅಂತ ಚೆಕ್ ಮಾಡಿಸಿ ಅಮೆಝಾನ್ ನಿಂದ ಔಷಧಿ ಆರ್ಡರ್ ಮಾಡಿದ್ದ.

*******

ನಾವೆಲ್ಲಾ ಮಾಡುವ ಹಾಗೆ ಬಸಪ್ಪನವರೂ ಯಾರು ಏನು ಹೇಳಿದ್ರೂ ಅದನ್ನ ಅವರು ಟ್ರೈ ಮಾಡ್ತಾ ಹೋದ್ರು!

ಈಗ ಬಸಪ್ಪನವರಿಗೆ ಹೊಟ್ಟೆಲಿ ಪ್ರಾಬ್ಲಂ ಏನೂ ಇಲ್ಲ. ಪೂರ್ತಿ ಗುಣವಾಗಿದೆ. "ಏನಾದರೂ ಸರಿ..ಸ್ವಲ್ಪ ದಿವಸ ಹಾಗೇ ಬಿಟ್ಟರೆ ಏನು ಬೇಕಾದ್ರೂ ವಾಸಿಯಾಗುತ್ತೇಂತ" ಎಲ್ಲೋ ಓದಿದ್ದರ ನೆನಪು. ಅದರಿಂದಲೇ ವಾಸಿಯಾಗಿದೆ ಅಂತ ಅವರ ಮನಸ್ಸಿನಲ್ಲಿ ದೃಢವಾಗಿದೆ.

ಹಾಗೇ ಮನಸ್ಸಿನಲ್ಲಿ ಎಲ್ಲಾ ಅರ್ಧ ಕ್ಷವರ ಮಾಡಿ ಯಾವ ಔಷಧಿಯನ್ನೂ ಪೂರ್ತಿ ತಗೆದುಕೊಳ್ಳಲಿಲ್ಲ. ಅವೆಲ್ಲಾ ಶೆಲ್ಫ್‌ನಲ್ಲಿ ಹಾಗೇ ಉಳಿದಿದೆ.

ಇನ್ನೆರೆಡು ಕಾಹಿಲೆ ಹೀಗೆ ಎಕ್ಸ್ಪೀರಿಯೆನ್ಸ್ ಆದ ಮೇಲೆ ಯಾವ ಯಾವ ಕಾಹಿಲೆಗೆ ಯಾವ ಯಾವ ಸಿಸ್ಟಮ್ನ ಮೆಡಿಸಿನ್ ಕೆಲಸ ಮಾಡಲ್ಲ ಅಂತ ಅವರಿಗೆ ಖಾತ್ರಿಯಾಗಿ ಗೊತ್ತು! ಬಂದ ಕಾಹಿಲೆ ಯಾವುದರಿಂದ ಹೋಗುತ್ತೇಂತನೂ ಅವರಿಗೆ ಚೆನ್ನಾಗಿ ಗೊತ್ತು ಈಗ! ಬಸಪ್ಪನವರು ಈಗ ಮನೆ ಮುಂದೆ ಒಂದು ಕನ್ಸಲ್ಟನ್ಸಿ ಬೋರ್ಡ್ ಹಾಕುವಾ ಅಂತ ಯೋಚಿಸ್ತಿದಾರೆ.. ಏನು ಅಡ್ವೈಸ್ ಮಾಡಬೇಕು ಅಂತಾನೂ ಗೊತ್ತು... ಫೀಸ್ ಎಷ್ಟು ಕೇಳ್ಬೇಕೂಂತ ಸ್ವಲ್ಪ ಗಲಿಬಿಲಿ ಅಷ್ಟೆ! ■

ಫ್ಯಾಮಿಲಿ ಪ್ಲಾನಿಂಗ್ ಆಫೀಸರ್ : ನೀವಿಬ್ಬರೂ ಗಂಡ ಹೆಂಡತೀನಾ ?
ಹೆಂಡತಿ: ಅವರಿಗೆ ಕಿವಿ ಕೇಳಿಸಲ್ಲ
ಫ್ಯಾಪ್ಲಾಆ : ಇವರು ನಿಮ್ಮ ಯಜಮಾನರಾ ?
ಹೆಂಡತಿ: ಹೌದು
ಫ್ಯಾಪ್ಲಾಆ : ನಿಮಗೆ ಇಬ್ಬರು ಮಕ್ಕಳಾ ?
ಹೆಂಡತಿ : ಇಲ್ಲ, ಏಳು ಮಕ್ಕಳು, ಐದು ಮಕ್ಕಳು ಮನೆಯಲ್ಲಿ ಇದ್ದಾರೆ
ಫ್ಯಾಪ್ಲಾಆ: ಮಕ್ಕಳು ಸಾಕು ಅಂತ ನೀವು ಹೇಳಲಿಲ್ಲವಾ?
ಹೆಂಡತಿ : ಅದೇ ನಾನು ನಿಮಗೆ ಹೇಳಿದೆನಲ್ಲ, ಅವರಿಗೆ ಕಿವಿ ಕೇಳಲ್ಲ ಅಂತಾ...!
ಫ್ಯಾಪ್ಲಾ ಆಫೀಸರ್ ಹಾಗೆ ಮೂರ್ಛೆ ಹೋದರು...!

# ರಿಟೈರ್ ಆದ ಮ್ಯಾಲಿನ ನೋಕ್-ಝೋಕ್

ಸಿ.ಎ. ವಿಲಾಸ ನಾ ಹುದ್ದಾರ

ಮುಂಜಾನಿ ವಾಕಿಂಗ್ ಮುಗಿಸಿಕೊಂಡ ಮನೀ ಕಡೆ ಹೊರಟಿದ್ದೆ, ಸ್ವಲ್ಪ ವ್ಯಾಳ್ಯಾನೂ ಆಗಿತ್ತ. ಹೇಂಣ್ತಿ ಕಡೀಂದ ಬೈಗಳಾ ತಿನ್ನೋದು ಖಾತ್ರಿ ಆಗಿತ್ತ. ಹೆಂಗೂ ಲೇಟ ಆಗೇದ ಒಂದ ಎರಡ ತಿಂಗಳ ಹಿಂದ ರಿಟೈರ್ ಆದ ನನ್ನ ದೋಸ್ತನ ಜೀವನಾ ಹೆಂಗ ನಡದದ ಆಂತ ಕೇಳಿದ್ರಾತ ಅಂತ ಅವ್ನ ಮನೀ ಕಡೆ ಹೊರಟೆ. ಅವನ ಮನೀ ಗೇಟ್ ತಗದು ಬೆಲ್ಲ್ ಬಾರಿಸಿದೇ. ಅವನ ಬಂದ ಬಾಗ್ಲಾ ತಗದಾ. ಏನೂ ಮಾತ್ನಾಡದ ಸುಮ್ನ ಒಳಗ ಹೋಗಿ ಸೋಫಾದ ಮ್ಯಾಲೆ ಕೂತಾ.

"ಯಾಕೋ, ಏನಾತೋ, ಹಿಂಗ್ಯಾಕ ಆಗೇದ ನಿನ್ನ ಮಾರಿ?"

"ಮತ್ತೇನೋ, ಇದು ಮೂರನೇ ಸಲಾ ಬಂದ ನಾ ಬಾಗಲಾ ತಗದದ್ದು.. ಪೇಪರ ಒಂದ ಪೇಜು ಓದ್ಲಿಕ್ಕೆ ಆಗ್ವಾಲ್ತು. ಅದೀರ್ಲಿ, ಏನ ಮುಂಜ-ಮುಂಜಾನೆ ನಿನ್ನ ಸವಾರಿ ಈ ಕಡೆ?" ಅಂತ ಹೇಳಿ ನನಗ ಮರು ಸವಾಲ್ ಹಾಕಿದಾ. "ವಾಕಿಂಗ್ ಮುಗಿಸಿಕೊಂಡ ಹೋಗೋದು ಲೇಟ್ ಆತ, ಹೆಂಗೂ ಈಗ ಮನೀಗೆ ಹೋದ್ರ ಚಹಾ ಸಿಗೂದಿಲ್ಲಾ, ನಾನ ಮಾಡ್ಕೋ ಬೇಕ.. ಮತ್ತ ನಿನ್ನ ರಿಟೈರ ಆದ ಮ್ಯಾಲೀನ ಜೀವನಾ ಹೆಂಗ ನಡದದ ಅಂತ ನೋಡಿದ್ದಂಗೂ ಆತು, ವೈನಿ ಕೈಯಿಂದ ಒಂದ ಕಪ್ ಬಿಸಿ ಬಿಸಿ ಚಹಾ ಕುಡದ್ಹಂಗೂ ಆತು ಅಂತ ಬಂದೆ"

"ಏ ಭೊಲೋ ಮಾಡೀದಿ ಏಳ, ಏ, ಇಕೀನ, ಮೂರು ಕಪ್ ಚಹಾ ತೊಗೊಂಡ ಬಾ....

"ಯಾಕೋ, ಇನ್ನೂ ನಿಮ್ಮ ಮುಂಜಾನೀ ನೋಕ-ಝೋಕ ಚಹಾ ಆಗಿಲ್ಲೇನ...."


"ಇಲ್ಲೋ ಮಾರಾಯಾ... ಈಗೇನ ಇಡೀ ದಿವಸಾ ನೋಕ-ಝೋಕ... ಇವತ್ತಿನಿಂದ ಮುಂಜಾನೆ ಆರಕ್ಕ ವಾಕಿಂಗ್ ಹೊಗಲಿಕ್ಕೆ ಹತ್ತಿದೇ.. ಆಗ ಈಕೀನೂ ಬರ್ತೇನಿ ಅಂದ್ಲು.. ಹೋಗೋ ಮುಂದ ಹಾಲಿನ ಚೀಲಾ ಗೇಟಗೆ ಹಾಕಿರಲಿಲ್ಲಾ.. ಕೇಳಿದೆ.. ಮೊದಲ ವಾಕಿಂಗ್ ಹೋಗಿಬರೋಣು ನಡೀರೀ.. ಅಮ್ಯಾಲೆ ನಿಮಗ ಗೊತ್ತ ಆಗ್ತದ ಅಂತ ಹೇಳೀದ್ಲು... ತಿರಗಿ ಬಂದ ಮ್ಯಾಲೆ ನನ್ನ ಗೇಟ್ ಹತ್ರ ನಿಂದ್ರಸಿ ಒಳಗಿನಿಂದ ಚೀಲಾ ತಂದ ನನ್ನ ಕೈಯಾಗ ಕೊಟ್ಟ , ಹಾಲ ತೊಗೊಂಡ ಬರ್ರೀ ಅಂದ್ಲು .. ನಾ ಅಕೀ ಮಾರೀ ನೋಡಿದ್ದಕ್ಕ ಹೆಂಗೂ ಆಫೀಸಿಗೆ ಹೋಗೋ ಗಡಬಡೀ ಇಲ್ಲಾ, ಹಾಲ ಹಾಕ್ತಾನ್ಲಾ ಅವನಿಗೆ ಕೊಡೋ ಸರ್ವೀಸ್ ಚಾರ್ಜ್ರೆ ಉಳೀತದ. ಯಾಕಂದ್ರ, ನಿಮಗೇನ ಪೇನ್ಸ್ಯನ್ ಏನ ಬರೂದಿಲ್ಲಾ, ಬಡ್ಡೀ ಮ್ಯಾಲೆ ಜೀವನ ಸಾಗಬೇಕ. ದರಿದ್ರ ಬ್ಯಾಂಕಿನವರೂ ಬಡ್ಡೀ ದರಾ ಸತತ ಇಳಸ್ಲಿಕತ್ತಾರ. ನಿಮಗ ಕೆಲಸರೇ ಏನ ಅದ ಅಂತ ಪ್ರೀತಿ ಇಂದ ಹೇಳಿ ಕಳಿಸಿದ್ಲ.. ಹಾಲ ತರ್ಲಿಕ್ಕೆ ಹೋದಾಗ ನನ್ನಂಗ ರಿಟೈರ್ ಆದ ದೋಸ್ತರು ಭೆಟ್ಟಿ ಆದ್ರು.. ಹರಟೀ ಹೋಡ್ಕೋತ ನಿಂತ್ವಿ.. ಲೇಟ್ ಆತ.. ಈಗ ನನಗ ಬೈದು ಚಹಾ ಮಡ್ಕೊಂಡ ಬರ್ಲಿಕ್ಕೆ ಹೋಗ್ಯಾಳ ...ಅಷ್ಟರೊಳಗ ಗೂರ್ಖಾ ಬಂದ ಬೆಲ್ ಮಾಡಿದಾ, ಆಮ್ಯಾಲೆ ಕಸಾ ತಗದು ನೆಲಾ ವರ್‍ಸಾಕಿ ಬಂದು ಬೆಲ್ ಬಾರ್‍ಸಿದ್ಲು , ಈಗ ನೀ ಬಂದಿ.. ನಾ ಪೇಪರ್ ಓದ್ಲಿಕ್ಕೆ ವಿಘ್ನಗಳ ಮ್ಯಾಲೆ ವಿಘ್ನ.."

ಅಷ್ಟರೊಳಗ ವೈನಿ ಹೊಗಿ ಆಡ್ತಿರೋ ಬಿಸಿ ಬಿಸಿ ಚಹಾದ ಮೂರು ಕಪ್ಪ ತೊಗೊಂಡ ಬಂದ್ರು.

"ನೋಡ್ರೀ, ಇವ್ರು ತಮ್ಮದ ಶಂಖಾ ಊದ್ತಾರ.. ನಿಮಗ್ಯಾಲ್ಲಾರಿಗೂ ರಿಟೈರ್‌ಮೆಂಟ್ ಅಂತ ಅದ.. ಸುಡಗಾಡ ನಮಗ ಎಲ್ಲೆ ಅದ ರಿಟೈರ್‌ಮೆಂಟ್ ... ಸಾಯೋತನಕಾ ದುಡ್ಕೋತ ಇರೋದ ನಮ್ಮ ಹಣೇ ಬರಹಾ... ಅದ್ರಾಗ ಬ್ಯಾರೆ ಮಗಾ,ಸೊಸಿ ಮೊಮ್ಮಕ್ಕಳು ಬ್ಯಾರೆ ದೇಶದಾಗ.. ಅವರೇನ ತಿರಗಿ ಏನ ಬರೋಹಂಗಿಲ್ಲಾ .. ನನಗ ಸಾಯೋತನಕಾ ದುಡಿಯೋದು ತಪ್ಪೊ ಹಂಗಿಲ್ಲಾ ...".

ನನಗೂ ಖರೇ ಅನಿಸ್ತು .. ಆದ್ರ ಏನಂತ ಸಮಾಧಾನ ಹೇಳೋದು.. ಎಲ್ಲಾರ ಮನ್ಯಾಗಿನ ಗೋಳು ಇದು.

ಇಷ್ಟ ಹೇಳಿ ಕುಡದ ಚಹಾ ಕಪ್ಪ ಒಳಗ ತೊಗೊಂಡ ಹೋದ್ರು. ತಿರಗಿ ಬಂದ ಚವಳಿಕಾಯಿ ನನ್ನ ದೋಸ್ತನ ಮುಂದ ಸುಲದ ಕಟ್ ಮಾಡ್ಲಿಕ್ಕೆ ಇಟ್ಟ ಹೋದ್ರು. ನನ್ನ



ದೋಸ್ತ ಪೇಪರ್ ಬಾಜೂಕ ಇಟ್ಟ ತನ್ನ ಕೆಲಸಾ ಸುರು ಮಾಡಿದಾ. ಆದ್ರೂ ಅವನ ಮಾರೀ ಮ್ಯಾಲೆ ಸ್ವಲ್ಪರೇ ತನ್ನಿಂದ ತನ್ನ ಹೇಂಣ್ತಿ ಕೆಲಸದ ಭಾರ ರಿಟೈರ್ ಆದದ್ದಕ್ಕ ಕಡೀಮಿ ಮಾಡ್ಲಿಕ್ಕೆ ಸಾಧ್ಯ ಆದದ್ದಕ್ಕ ಸಮಾಧಾನ ಇತ್ತು. ಆದ್ರೂ ತನ್ನ ಪ್ರವರಾ ಬಿಡ್ಲಿಲ್ಲಾ. ಅವಂಗ ತನ್ನ ಹೇಂಣ್ತಿನ್ನ ಛೇಡಸೋದ ಅಂದ್ರ ಭಾಳ ಖುಷಿ. ಇದು ಎಲ್ಲಾರಿಗೂ ಇರ್ತದೇನೋ?

"ನೋಡ ದೋಸ್ತ, ನಾ ಅನ್ಕೊಂಡಿದ್ದೆ ರಿಟೈರ್ ಆದ ಮ್ಯಾಲೆ ಆರಾಮ ಕಾಲ ಚಾಚ್ಕೊಂಡ ಇರೋಣ ಅಂತ , ಆದ್ರ ಆಗವಾಲ್ತು.. ಈಗ ಬಾಗ್ಲಾ ತಗ್ಯೋಗ ವಾಚ್‌ಮನ್ ಆಗೇನಿ... ಈಗ ನೋಡ ಮೊದಲನೇ ಕೆಲಸದಾಕಿ ಬಂದಾಳ.. ಇನ್ನೊಂದ ಸ್ವಲ್ಪ ಹೊತ್ತಿಗೆ ಕಸಾ ತೊಗೊಂಡ ಹೋಗಾಂವ ಬರ್ತಾನ.. ಆಮ್ಯಾಲೆ ಕಸಾ ತಗದ ನೆಲಾ ವರ್ಸಾಕಿ ಬರ್ತಾಳ... ನಾ ಆಫೀಸಿಗೆ ಹೋಗೋ ಮುಂದ ಇಕೀ ಆಮ್ಯಾಲೆ ಬರ್ತಿದ್ಲು, ಆದ್ರ ಈಗ ನಾ ಯಾವಾಗ್ಲೂ ಮನ್ಯಾಗ ಇರ್ತೇನಿ ಏನ ಫರಕ್ ಬೀಳೂದಿಲ್ಲ ಅಂತ, ತನಗ ಅನುಕೂಲ ಆಗ್ತದ ಅಂತ ಈಗ ಬರ್ತಾಳ... ಆಕೀ ಬಂದ ಸ್ವಲ್ಪ ಹೊತ್ತಿಗೆ ಅರಿವಿ ಒಗ್ಯಾಕಿ ಬರ್ತಾಳ... ಹೀಗ ಬಾಗ್ಲಾ ತಗ್ಯೋದು ಹಾಕೋದು ಮಾಡ್ಕೋದ ಮುಂಜಾನೆ ಹೋಗೇ ಬಿಡ್ತದ.. ಪೇಪರ್ ಓದಿಕ್ಕೆ ಆಗೂದಿಲ್ಲಾ.. ಆರಾಮನೂ ಆಗೂದಿಲ್ಲಾ.. "

"ಯಾಕ ಮೂರು ಮೂರು ಮಂದಿ ಯಾಕ ?"

"ಎಲ್ಲಾ ಕೆಲಸಾ ಒಬ್ಬಾಕೀನ ಮಾಡ್ತಿದ್ರ, ಎಂದರೆ ಒಂದ ದಿವಸ ತಪ್ಸಿದ್ರ ತ್ರಾಸ ಆಗ್ತದ ಅಂತ ಮೂರೂ ಕೆಲಸಕ್ಕ ಬ್ಯಾರೆ ಬ್ಯಾರೆ ಅವರ್‍ನ ಹಚ್ಚ ಅಂತ ನಾನ ಹೇಳಿದ್ದೆ ... ನನಗೇನು ಗೊತ್ತಿತ್ತ ಮಾರಾಯ.. ಅದ ನನಗ ಇಷ್ಟ ತ್ರಾಸ ಕೊಡ್ತದ ಅಂತ ... ರಿಟೈರ್ ಆದ ಮ್ಯಾಲೆ ಚೌಕಿದಾರ ಆಗಬೇಕಾಗತದ ಅಂತ ..."

"ಮತ್ತ ವೈನಿಗೂ ಕೆಲಸ ಇದ್ದ ಇರ್ತದ ಅಲಾ ?"

"ಹೂಂ, ಪಾಪ ಅಕೀಗೂ ಅಡಿಗೆ ಮನ್ಯಾಗಿನ ಕೆಲಸಾ ಮುಗಸೋ ತನಕಾ ಸುಸ್ತು ಹೊಡೀತಾಳ... ಆಕೀನೂ ಏನ ಸಣ್ಣಾಕಿ ಇಲ್ಲಾ.. ನಾ ಸ್ವಲ್ಪರೇ ಕೆಲಸದೊಳಗ ಸಹಾಯ ಮಾಡೀದ್ರ.. ಆಕೀನೂ ಶಾಂತ ಇರ್ತಾಳ, ನನಗೂ ಶಾಂತತೆ ಸಿಗ್ತದ.. " ಹಿಂಗ ಹೇಳ್ಕೋತ ಕಣ್ಣ ಹೊಡದ ತನ್ನ ಪುರಾಣ ಮುಂದುವರೆಸಿದ..

"ನಾ ಪಲ್ಯಾ ಹೆಚ್ಚಿಕೊಟ್ಟ ಸ್ನಾನಾ ಮಾಡಿ ಬರೋತನಕಾ ಟಿಫಿನ್ ರೆಡಿ ಇರ್ತದ, ಇಬ್ರೂ ಕೂಡಿ ಹರಟಿ ಹೊಡ್ಕೋತ ತಿಂದ, ಅವಳು ಸ್ವಲ್ಪ ರೆಸ್ಟ್ ತೊಗೋಳ್ಳಿಕ್ಕೆ ಹಾಸಿಗೀ ಮ್ಯಾಲೆ ಉರಳ್ತಾಳ ಮೊಬೈಲ್ ಹಿಡ್ಕೊಂಡ, ನಾನು ಪೇಪರ್ ಓದ್ಲಿಕ್ಕೆ ಕೈಯಾಗ ತೊಗೋತೇನಿ, ಬೆಲ್ ಆಗ್ತದ, ಬಾಗ್ಲಾ ತಗದ್ರ ಅಮೇಝಾನ ಮನುಷ್ಯಾ ಪ್ರತ್ಯಕ್ಷ ಆಗ್ತಾನ. ಅವನ ಕೈಯಾಗಿಂದ ಪಾರ್ಸಲ್ ತೊಗೊಂಡ ಒಳಗ ಇಟ್ಟ ಬಾಗಲಾ ಹಾಕ್ಕೊಂಡ, ಒಂದ ಪೇಜ್ ಓದಿರ್ತೀನಿ.. ಮತ್ತ ಬೆಲ್ ಆಗ್ತದ.. ಈ ಸರ್ತೆ ಬಿಗ್ ಬಾಸ್ಕೆಟ್... ಹಿಂಗ ಬರೋವರ ಮೆರವಣಿಗೆ ದಿವಸದ ತುಂಬ ನಡ್ದಿರ್ತದ.. ಪೋರ್ಟರ್ ಬರ್ತಾನ, ಫ್ಲಿಫ್‌ಕಾರ್ಟ ಬರ್ತಾನ.. ಪಾಪಾ.. ನನ್ನಾಕಿಗೂ ಬ್ಯಾಸರ ಬರ್ತಿರ್ತದ.. ಕೈಯಾಗಿನ ಮೊಬೈಲ್‌ನೊಳಗ ಅಮೇಝಾನ್, ಜಿಯೋ ಇಂಥಾವೆಲ್ಲಾ ನೋಡ್ತಿರ್ತಾಳ.. ಅಲ್ಲಿ ಸಿಗೋ ಆಫರ್ ಆಶಾ ಹುಟ್ಟಸ್ತಾವ.. ಸಹಜೀಕ ಅದ... ನನಗ, ಮಕ್ಕಳಿಗೆ, ಮೊಮ್ಮಕ್ಕಳಿಗೆ,ಮನೀಗೆ ಮತ್ತ ತನಗ ಅಂತ ಖರೀದಿ ಮಾಡ್ತಾಳ.. ಅವು ಮೆರವಣಿಗೀ ಹಂಗ ಸಾಲ್ಕ ಬರ್ತಾವ ನಾ ಬಾಗ್ಲಾ ತಗದ ತೊಗೋತೇನಿ. ಆಮ್ಯಾಲೆ ಇಬ್ಬರೂ ಕೂಡಿ ಊಟಾ ಮಾಡೀದ ಮ್ಯಾಲೆ ನಾ ಸ್ವಲ್ಪ ಅಡ್ಡಾಗ್ತೇನಿ, ನಮ್ಮನಿಯವರು ಮಕ್ಕಳಿಗೆ, ಮೊಮ್ಮಕ್ಕಳಿ ಫೋನ ಮಾಡೋದು, ಟಿ.ವಿ. ನೋಡೋದು ಮಾಡ್ತಾರ. ಸಂಜೀ ಐದ ಘಂಟೆಕ್ಕ ಒಂದ ಕಪ್ಪ ಚಹಾ ಕುಡದ ಸಂಜೀ ವಾಕೀಂಗ್ ಹೋಗ್ತೀವಿ. ಒಂದ ಎಂಟ ರಿಂದ ಒಂಬತ್ತ ಸಾವಿರ ಸ್ಟೆಪ್ಸ ನಡೀತೀವಿ. ದೋಸ್ತ ಖರೇ ಹೇಳ್ತೇನಿ, ಆ ಒಂದ ತಾಸ ಏನ ಇಬ್ರೂ ಕೂಡಿ ಸ್ವಲ್ಪ ಮಾತಾಡ್ಕೋತ, ಸ್ವಲ್ಪ ಮೌನವಾಗಿ ಕಳೀತೀವಿ ಅಲ್ಲಾ, ನಾ ರಿಟೈರ್ ಆದದ್ದಕ್ಕ ಸಾರ್ಥಕ ಅನಸ್ತದ. ಆ ಒಂದ ತಾಸ ಮಾತ್ರ ಯಾಕರೇ ಮುಗೀತದೋ ಅಂತ ಅನಸ್ತದ. ಆಕೀ ತನಗ ಆದ ಕೆಲಸದ ಆಯಾಸ ಮರ್ತು ರಿಲ್ಯಾಕ್ಷ ಆದ್ರ, ನಾನು ದಿನ ಪೂರ್ತಿ ಚೌಕೀದಾರ ಆದದ್ದಕ್ಕ ನನಗ ಏನೋ ಒಂದ ಥರಾ ಖುಷಿ ಆಗಿ ಯಾವಾಗಲೂ ನಮ್ಮ ಸಲವಾಗಿ ಕಷ್ಟ ಪಡೋ ಜೀವಕ್ಕ ಸ್ವಲ್ಪರೇ ಶಾಂತಿ ಕೊಟ್ಟದ್ದಕ್ಕ ಧನ್ಯತಾಭಾವ ಮೂಡ್ತದ." ಇಷ್ಟ ಹೇಳ್ಕೋತ ನನ್ನ ದೋಸ್ತನ ಕಣ್ಣೊಳಗ ಕಣ್ಣಿರಿನ ಅಂಶ ಕಂಡ ಬಂತು. ಭಾಳ ಭಾವುಕ ಆದ.

ನನ್ನ ರಿಟೈರ್ ಜೀವನಾನೂ ಇದೇ ತರಹ ನಡೀಲಿಕ್ಕತ್ತದ ಅನ್ನೋದು ಮನಸ್ಸಿಗೆ ಬಂದು, ಅಲ್ಲಿರುವ ಮೌನದ ವಾತಾವರಣವನ್ನ ಕಲಕುವ ಮನಸ್ಸಾಗದ ಸಾವಕಾಶ ನನ್ನ ದೋಸ್ತನ ಕೈಗಳನ್ನ ನನ್ನ ಕೈಯಾಗ ತೊಗೊಂಡ ಸಾವಕಾಶ ಒತ್ತಿ ಹೊರಗ ಬರ್ಲಿಕ್ಕೆ ಎದ್ದೆ, ವೈನಿಯವರೂ ಕಣ್ಣೊಳಗ ಕಣ್ಣೀರ ತುಂಬಿಸಿಕೊಂಡ ಹೊರಗ ಬಂದ, ಅವರೂ ಭಾವುಕರಾಗಿ "ನಾಳೆ ಮುಂಜಾನೆ ಚಹಾಕ್ಕ ವೈನಿಯವನ್ನೂ ಕರ್ಕೊಂಡ ಬರ್ರೀ.." ಅಂದ್ರು. ಮೌನದಿಂದ ಗೋಣು ಹಾಕಿ ನಾನೂ ಭಾವುಕನಾಗಿ ಸಂತೃಪ್ತ ಮನಸ್ಸಿನಿಂದ ಹೊರಗ ಬಂದ ಮನೀ ಕಡೆ ನಡದೆ.

■

# ಇಂಗ್ಲೀಷು ಮತ್ತು ವಿಟಮಿನ್ 'ಬಿ'

ವಿದ್ಯಾ ಎಸ್

ಡಾಕ್ಟರ್ ರಾಜ್ ಕುಮಾರ್ ಅವರ 'ಇಫ್ ಯೂ ಕಮ್ ಟುಡೇ, ಇಟ್ಸ್ ಟೂ ಅರ್ಲೀ... ಇಫ್ ಯೂ ಕಮ್ ಟುಮಾರೋ, ಇಟ್ಸ್ ಟೂ ಲೇಟ್...' ಹಾಡನ್ನು ಖುಷಿಯಿಂದ ಗುನುಗುತ್ತಾ ಶೇವ್ ಮಾಡಿಕೊಳ್ಳುತ್ತಿದ್ದ ದೇವ್ದಾಸ. ಅವನ ಖುಷಿಗೆ ಕಾರಣ ಅವನ ಗೆಳೆಯ ಶೇಷು ಹೇಳಿದ ಇಂಟರೆಸ್ಟಿಂಗ್ ವಿಷಯ.

ಅವರೆಲ್ಲಾ ಒಂದೊಮ್ಮೆ ಓದಿದ್ದ ಹೈಸ್ಕೂಲಿನ ಹೆಡ್ ಮಾಸ್ಟರ್ ವಾಮನ ಮೇಷ್ಟ್ರು ಈ ವರ್ಷ ನಿವೃತ್ತರಾಗುತ್ತಿದ್ದರಿಂದ ಶಾಲೆಯಲ್ಲಿ ಅವರಿಗೊಂದು ಸನ್ಮಾನ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರಂತೆ. ಇದಕ್ಕೆ ಶಾಲೆಯ ಎಲ್ಲಾ ಹಳೆ ವಿದ್ಯಾರ್ಥಿಗಳನ್ನು ಕರೆದು ವಿವಿಧ ಕಾರ್ಯಕ್ರಮಗಳನ್ನು ಕೊಡುವಂತೆ ಯೋಜಿಸಲಾಗಿದೆಯಂತೆ. ಕರೆ ಮಾಡಿದವರಿಗೆ ಶೇಷು ತನ್ನ ಫೋನ್ ನಂಬರನ್ನೂ ಕೊಟ್ಟಿದ್ದರಿಂದ ತನಗೂ ಕಾರ್ಯಕ್ರಮಕ್ಕೆ ಆಮಂತ್ರಣ ಬಂದೇ ಬರುತ್ತದೆಂಬ ಖಾತ್ರಿ ದೇವ್ದಾಸನಿಗಿದ್ದದ್ದೇ ಅವನ ಖುಷಿಗೆ ಕಾರಣ.

ಆಕ್ಸ್‌ಫರ್ಡ್ ಯೂನಿವರ್ಸಿಟಿ ಎಂಬುದರ ಶಾರ್ಟ್ ಫಾರ್ಮ್ ಓ.ಡಿ. ಎಂದೇ ಪ್ರಖ್ಯಾತರಾಗಿದ್ದ ವಾಮನ ಮೇಷ್ಟ್ರು ಎದುರು ಬರುತ್ತಿದ್ದುದನ್ನು ಕಂಡರೆ ಮಕ್ಕಳು ಓಡುತ್ತಿದ್ದುದೇ ಜಾಸ್ತಿ. ಇಂಗ್ಲೀಷ್ ವಿಷಯ ಪಾಠ ಮಾಡುತ್ತಿದ್ದ ಅವರ ಇಂಗ್ಲೀಷು ಇಂಟರ್ನ್ಯಾಷನಲ್ ಲೆವೆಲ್ಲಿಗಿತ್ತು. ಅವರ ಕೈಯಲ್ಲಿ ಸದಾ ಇಂಗ್ಲೀಷ್ ವಾರಪತ್ರಿಕೆಯೊಂದು ಇರುತ್ತಿದ್ದು, ಅದರಲ್ಲಿನ ಪ್ರಮುಖ ಸುದ್ದಿಗಳನ್ನು ತರಗತಿಯ ಮಕ್ಕಳಿಂದ ದಿನವೂ ಓದಿಸುತ್ತಿದ್ದರು. ಓದುವಾಗ ಪಾಸ್ಟ್ ಟೆನ್ಸ್, ಫ್ಯೂಚರ್ ಟೆನ್ಸ್ ಸ್ವಲ್ಪ ತಪ್ಪಾದರೆ ಸಾಕು, ಮಕ್ಕಳ ಫ್ಯೂಚರಿನ ನಗ್ನ ದರ್ಶನ ಮಾಡಿಸುತ್ತಿದ್ದರು. ಅವರು ಇಂಗ್ಲೀಷಿನಲ್ಲಿ ಬೈಯ್ಯುವ ಬೈಗುಳ ಅರ್ಥವಾಗದೆ ಕೆಲವು ಮಕ್ಕಳು ನಿರ್ಲಿಪ್ತರಾಗಿದ್ದರೆ, ಇನ್ನು ಕೆಲವು ಮಕ್ಕಳು ತಮಗೆ ತಿಳಿದ ಭಾಷೆಯ ಅತಿ ಕೆಟ್ಟ ಬೈಗುಳವನ್ನು ಊಹಿಸಿಕೊಂಡು 'ಹೋ' ಎಂದು ಅಳುತ್ತಿದ್ದರು. ಅಂತೂ ತನ್ನ ಇಡೀ ಸರ್ವೀಸಿನಲ್ಲಿ ಒಬ್ಬನೇ ಒಬ್ಬ ವಿದ್ಯಾರ್ಥಿಗೂ ಹೊಡೆಯದೇ ತಮ್ಮ ಉರಿಗಣ್ಣಿನ ನೋಟ ಮತ್ತು ವಿಟಮಿನ್ 'ಬಿ' ಅಂದರೆ ಇಂಗ್ಲೀಷಿನ ತರಹೇವಾರಿ 'ಬೈಗುಳ'ಗಳಿಂದ ಮಕ್ಕಳನ್ನು ಹದ್ದುಬಸ್ತಿನಲ್ಲಿಟ್ಟ ಕೀರ್ತಿ ಅವರದ್ದು!

ಇಂಗ್ಲೀಷಿನಲ್ಲಿ ಜಸ್ಟ್ ಪಾಸ್ ಆಗಲೂ ಹೆಣಗುತ್ತಿದ್ದ ದೇವ್ದಾಸ ತಿಂದಷ್ಟು ವಿಟಮಿನ್ 'ಬಿ' ಮತ್ತ್ಯಾರೂ ತಿಂದಿರಲಿಕ್ಕಿಲ್ಲ ಎಂದು ಅವನ ಅನಿಸಿಕೆ. ಪ್ರತೀ ಬಾರಿ ಪಾಠ ಓದುವಾಗಲೂ, 'ಏನೋ ದೇವ್ದಾಸ, ವಿಟಮಿನ್ 'ಬಿ' ಕಮ್ಮಿ ಆಗಿದ್ಯೇನೋ?' ಎಂದು ಕಂಚಿನ ಕಂಠದಲ್ಲಿ ಮೇಷ್ಟ್ರು ದನಿ ಏರಿಸಿದಾಗ, ಮೆದುಳಿಗೂ ನಾಲಿಗೆಗೂ ಕನೆಕ್ಷನ್ ತಪ್ಪಿ ಏನೇನೋ ಬಡಬಡಿಸುವಂತಾಗುತ್ತಿತ್ತು. 'ಇರಲಿ! ಮುಂದೆ ಒಂದಲ್ಲ ಒಂದು ದಿನ ಇಂಗ್ಲೀಷ್ ಕಲಿತು ಇದೇ ವಾಮನ ಮೇಷ್ಟ್ರ ಮುಂದೆ ನಿಂತು ಇಂಗ್ಲೀಷಿನಲ್ಲೇ ಮಾತನಾಡುತ್ತೇನೆ' ಎಂದು ತನ್ನಷ್ಟಕ್ಕೇ ತಾನೇ ಭೀಷಣ ಪ್ರತಿಜ್ಞೆಯನ್ನೂ ಅವನು ಮಾಡಿದ್ದ. ತಾನು ಇಂಗ್ಲೀ?ಷ್ ಕಲಿಯುವ ಬಗ್ಗೆ ತನ್ನಲ್ಲೇ ಇದ್ದ ಸಣ್ಣ ಅನುಮಾನ ಅವನು ಇತರರ ಮುಂದೆ ಪ್ರತಿಜ್ಞೆ ಮಾಡಲು ತಡೆಯೊಡ್ಡಿತ್ತು ಎಂದು ಬೇರೆ ಹೇಳಬೇಕಿಲ್ಲ ಬಿಡಿ!

ತಲೆಗೆ ಓದು ಹತ್ತದ ದೇವ್ದಾಸ ಹೊಟ್ಟೆಪಾಡಿಗಾಗಿ ಬೆಂಗಳೂರು ಸೇರಿದ್ದ. ದೊಡ್ಡ ಮಲ್ಟಿನ್ಯಾಷನಲ್ ಕಂಪನಿಯ ಎದುರು ಚಹಾ, ಸಿಗರೇಟಿನ ಅಂಗಡಿ ಇಟ್ಟು ಐಟಿ ಸಂಬಳಕ್ಕೆ ಸಡ್ಡು ಹೊಡೆದು ದುಡಿಯತೊಡಗಿದ್ದ. ಕೆಲಸಕ್ಕಾಗಿ ಯಾವ್ಯಾವುದೋ ರಾಜ್ಯ, ಊರುಗಳಿಂದ ಬಂದು ಕನ್ನಡ ಮಾತನಾಡಲು ಬಿಕ್ಕುವ ಜನರೊಂದಿಗೆ ತಪ್ಪು ತಪ್ಪಾಗಿ

ಇಂಗ್ಲೀಷ್, ಹಿಂದಿ ಮಾತನಾಡುತ್ತಾ ತಕ್ಕ ಮಟ್ಟಿಗಿನ ಕಾನ್ಫಿಡೆನ್ಸ್ ಬೆಳೆಸಿಕೊಂಡ ದೇವ್ದಾಸ ವಾಮನ ಮೇಷ್ಟ್ರನ್ನು ನನೆಯದ ದಿನವಿಲ್ಲ!

'ಶಾಲೆಯಿಂದ ಕರೆ ಬರಲಿ, ಒಂದೊಳ್ಳೆ ಭಾಷಣ ಇಂಗ್ಲೀ?ಷಿನಲ್ಲೇ ಮಾಡಿ ಜನರ, ಮೇಷ್ಟ್ರ ಚಪ್ಪಾಳೆ ಗಿಟ್ಟಿಸುತ್ತೇನೆ' ಎಂದು ದೇವ್ದಾಸ ಕನಸು ಕಾಣತೊಡಗಿದ.

'ಟ್ರಿಣ್ ಟ್ರಿಣ್...' ಫೋನು ರಿಂಗಾಗತೊಡಗಿದಾಗ ಒಂದೇ ನೆಗೆತಕ್ಕೆ ಕರೆ ಸ್ವೀಕರಿಸಿದ ದೇವ್ದಾಸ. ನಿರೀಕ್ಷೆಯಂತೆ ಶಾಲೆಯಿಂದಲೇ ಬಂದ ಕರೆ ಅದಾಗಿತ್ತು. ಹಳೆವಿದ್ಯಾರ್ಥಿಯ ಠೀವಿಯಲ್ಲೇ ಮಾತನಾಡಿದ ದೇವ್ದಾಸ, ತಮ್ಮ ಇಂಗ್ಲೀಷ್ ಮೇಷ್ಟ್ರ ನಿವೃತ್ತಿ ಕಾರ್ಯಕ್ರಮಕ್ಕೆ ಅವರ ಬಗ್ಗೆ ಇಂಗ್ಲೀಷಿನಲ್ಲೇ ಮಾತನಾಡಿ ಅವರಿಗೆ ಗೌರವ ಸಲ್ಲಿಸುವ ತನ್ನ ಯೋಜನೆಯನ್ನು ತಿಳಿಸಿ ತನ್ನ ಹೆಸರನ್ನು ನೋಂದಾಯಿಸಿಕೊಂಡ. ಊರಿಗೆ ಹೋದಾಗ ಒಮ್ಮೆ ವಾಮನ ಮೇಷ್ಟ್ರನ್ನು ಭೇಟಿಯಾಗಿ ಇಂಗ್ಲೀಷಿನಲ್ಲೇ ಮಾತನಾಡಿಸಬೇಕೆಂದಿದ್ದ ಅವನಿಗೆ ಈ ಅವಕಾಶ, ಹುಡುಕುತ್ತಿದ್ದ ಬಳ್ಳಿ ಕಾಲಿಗೆ ತೊಡರಿದಂತಾಗಿತ್ತು.

ಕಾರ್ಯಕ್ರಮದ ದಿನ ಓಡೋಡಿ ಬಂದಿತು. ಬೇರೆ ಬೇರೆ ಬ್ಯಾಚಿನ ಅನೇಕ ಹಳೆವಿದ್ಯಾರ್ಥಿಗಳೂ ಅಲ್ಲಿ ಹಾಜರಿದ್ದರು. ಕೆಲವರು ಗ್ರೂಪ್ ಪ್ರೋಗ್ರಾಂಗಳನ್ನು ಕೊಟ್ಟರೆ, ಇನ್ನು ಕೆಲವರು ವೈಯುಕ್ತಿಕ ಕಾರ್ಯಕ್ರಮವನ್ನು ಕೊಡುವವರಿದ್ದರು. ಕಾರ್ಯಕ್ರಮದ ಆಯೋಜಕರು ವಾಮನ ಮೇಷ್ಟ್ರ ಸನ್ಮಾನದ ತರುವಾಯ ದೇವ್ದಾಸ ಭಾಷಣ ನೀಡುವುದು ಸೂಕ್ತವಾಗಿರುತ್ತದೆಂದು ಅಂದಾಜಿಸಿ ಅವನ ಕಾರ್ಯಕ್ರಮದ ನಂಬರನ್ನು ಅವನಿಗೆ ಈ ಮೊದಲೇ ತಿಳಿಸಿದ್ದರು. ಮೇಷ್ಟ್ರ ಸನ್ಮಾನ ಮುಗಿಯುತ್ತಿದ್ದಂತೆ ದೇವ್ದಾಸನ ಭಾಷಣದ ಬಗ್ಗೆ ಅನೌನ್ಸ್ ಮಾಡಲಾಯಿತು. ಹಲವು ವರ್ಷಗಳ ಕನಸು ನನಸಾಗುವ ಖುಷಿಯಲ್ಲಿ ಮೇಷ್ಟ್ರ ಕುರಿತು ಇಂಗ್ಲೀಷಿನಲ್ಲಿ ಮಾತನಾಡಲು ದೇವ್ದಾಸ ಸ್ಟೇಜಿನ ಮೇಲೆ ಠೀವಿಯಿಂದ ಬಂದನು.

ಇಂಗ್ಲೀಷಿನಲ್ಲಿ ಭಾಷಣ ಮಾಡಲು ಶುರುವಿಡುತ್ತಿದ್ದಂತೇ ತನ್ನನ್ನೇ ನೋಡುತ್ತಿದ್ದ ಮೇಷ್ಟ್ರ ಅದೇ ತೀಕ್ಷ್ಣ ಕಣ್ಣುಗಳು ದೇವ್ದಾಸನನ್ನು ಮತ್ತೆ ಹೈಸ್ಕೂಲಿನ ತರಗತಿಗೆ ಕರೆದೊಯ್ದಿತು. ಮೆದುಳಿನ ಮತ್ತು ನಾಲಿಗೆಯ ಕನೆಕ್ಷನ್ ತಪ್ಪಿ, ವಾಕ್ಯಗಳು ಒಂದಕ್ಕೊಂದು ಸಂಬಂಧವಿಲ್ಲದಂತೆ ತಾಳ ತಪ್ಪಿದವು. ಹೇಳುವ ಮಾತುಗಳೆಲ್ಲವೂ ಮರೆತು ಹೋಗಿ ಬಾಯಿ ತೊದಲತೊಡಗಿತು.

'ಏನೋ ದೇವ್ದಾಸ, ವಿಟಮಿನ್ 'ಬಿ' ಮತ್ತೆ ಕಮ್ಮಿ ಆಗಿದ್ಯೇನೋ?!' ಮೇಷ್ಟ್ರು ಸ್ಟೇಜಿನ ಮೇಲಿಂದಲೇ ನಕ್ಕು ಉಲಿದಾಗ, ಒಸರುವ ಬೆವರನ್ನು ಒರೆಸಲು ಕರ್ಚೀಫಿಗಾಗಿ ಪ್ಯಾಂಟ್ ಜೇಬಿಗೆ ಕೈ ಹಾಕಿದನು ದೇವ್ದಾಸ. ಅಲ್ಲಿ ತಾನು ಬರೆದ ಭಾಷಣವಿರುವ ಕಾಗದ ಸಿಕ್ಕಿ, ಹೋದ ಜೀವ ಬಂದಂತಾಯಿತು. ಕಾಗದವನ್ನು ತೆರೆದು ಅದರಲ್ಲಿ ಬರೆದಿದ್ದನ್ನು ಉರು ಹೊಡೆದಂತೆ ಹೇಳಿ ಬಡಬಡನೇ ವೇದಿಕೆಯಿಂದ ಇಳಿದನು. ಕಾರ್ಯಕ್ರಮ ಮುಗಿದ ಮೇಲೆ ವಾಮನ ಮೇಷ್ಟ್ರು ಕೊಡುವ ವಿಟಮಿನ್ 'ಬಿ'ಯನ್ನು ಜೀರ್ಣಿಸುವ ತನ್ನ ಸಾಮರ್ಥ್ಯದ ಮೇಲೆ ಅನುಮಾನವಿದ್ದ ದೇವ್ದಾಸ ಅಲ್ಲಿಂದ ಬೇಗ ಕಾಲ್ಕಿತ್ತನು.

'ಕಲಿಯೋಕೆ ಕೋಟಿ ಭಾಷೆ, ಆಡೋಕೆ ಒಂದೇ ಭಾಷೆ – ಕನ್ನಡ! ಕನ್ನಡ!' ಎಂದು ಡಾಕ್ಟರ್ ರಾಜ್ ಕುಮಾರ್ ಅವರು ಹಾಡಿದ ಹಾಡು ಅವನಿಗೆ ನೆನಪಾಯಿತು. ಇನ್ನು ತನ್ನ ಅಂಗಡಿಗೆ ಬರುವ ಕನ್ನಡ ಬರದ ಗಿರಾಕಿಗಳಿಗೆಲ್ಲಾ ಕನ್ನಡ ಬಾಷೆಯನ್ನು ಕಲಿಸುವ ಪಣವನ್ನು ತೊಟ್ಟು ಬೆಂಗಳೂರಿಗೆ ಹೊರಡುವ ತಯಾರಿ ಮಾಡಿದನು ದೇವ್ದಾಸ. ■

# ಮನ್ವಂತರದ ಹಕೀಕತ್ತು

✍ ಜಯಶ್ರೀ ದೇಶಪಾಂಡೆ

ಈ ವರ್ಷ ಎಲ್ಲ ಕಡೇನೂ ಅಧಿಕಾಧಿಕ ಮಳೀ ಸುರಿದೇಬಿಡ್ತೇನಿ ಅಂತ ಬಂದ ಶ್ರಾವಣಮಾಸಕ್ಕೂ ಆಕಾಶದಿಂದ ನೀರುಗ್ಗಿ ಉಗ್ಗಿ ಕಡೆಕೂ ಒಮ್ಮೆ ಸಾಕಾಯ್ತೋ ಏನೋ ಬೇಸತ್ತು..ಸಡನ್ ಸಪ್ಪಗಾಗಿಬಿಟ್ಟತು.

ಎಷ್ಟೋ ಮಂದೀ ಮನಿಯೊಳಗ ಇನ್ನೇನು ಬಂತು ಬಂತು ಚಾತುರ್ಮಾಸ್ಯ ಅಂದರೆ ನೆನೆದುಕೊಂಡೇ ಹೋಳಿಗೆ ಎಬ್ಬಿಸುವ ಹುರುಪು. ಬ್ಯಾಳಿ ಚೀಲ, ಬೆಲ್ಲದ ಪೆಂಟಿ, ತುಪ್ಪದ ತಪ್ಪೇಲಿಗೂ ಹೊಸಾ ಮೆರುಗು. ಒಂದು ತುಪ್ಪದ ಭರಣಿ ಖಾಲಿ ಆಗುವುದರೊಳಗಾಗಿ ಬೆಣ್ಣೆ ಕಡೆದು ತುಪ್ಪ ಕಾಯಿಸಿ ಇನ್ನೊಂದನ್ನು ತುಂಬಿಡದಿದ್ದರೆ ಅದಕ್ಕೆ ಚಾತುರ್ಮಾಸ್ಯದ ಕಳೆಯೇ ಇಲ್ಲ!

"ಕೃಷ್ಣವ್ವಾ ರಾಯರು ಎದ್ರು ಇನ್ನ ತಾ" ಅಂತ ಹೋಳಿಗೀ ಪರಾತದ ಕಡೆ ದಿಟ್ಟಿಸಿ ಕಣ್ಣೊಳಗೇ ಎಷ್ಟು ಹೋಳಿಗೆ ಅದರೊಳಗೆ ತಯಾರಾಗಿ ಕೂತಾವ ಅನ್ನುವ ಲೆಕ್ಕವನ್ನ ಠಾಕೋಠೀಕ್ ಅಂದಾಜು ಮಾಡುವ ಕೇಶವಾಚಾರರಿಗೆ ಹಿತ್ತಾಳಿಯ ಬಿಲ್ಲೆ ಬಡದಿದ್ದ ಆ ಮೂರೂವರಿ ಫೂಟಗಲದ ಮಣೆ ಸಾಕಾಗ್ತಿರಲಿಲ್ಲ. ಅವರು ಉದ್ದಂಡ ಪೃಷ್ಠದ ಇಸಮು!

ಮುಂಜಾನೆ ಸುರೂ ಆದ ನಿರ್ಮಾಲ್ಯ ವಿಸರ್ಜನದಿಂದ ಮೊದಲ್ಗೊಂಡು ಅಷ್ಟಕ, ಅಷ್ಟೋತ್ತರ, ಪಾರಾಯಣ, ಶೋಡಷೋಪಚಾರ, ಮಧ್ಯೇ ಮಧ್ಯೇ ಮಂಗಳಾರತಿ ಸಾಲುಗಟ್ಟಿಕೊಂಡು ಸುರುವಾದ ಪೂಜೆ ಸಂಪುಷ್ಪಕ್ಕ ಬಂದು 'ಧೀಯೋಯೋನ: ಪ್ರಚೋದಯಾತ್, ತನ್ನೋ ವಿಷ್ಣು ಪ್ರಚೋದಯಾತ್.. ಅಥವಾ ಅಂದಿನ ಪೂಜೆಯ ಹಕ್ ದಾರ ದೇವನ ಹೆಸರಲ್ಲಿ ಮಂತ್ರ ಪುಷ್ಪ ಉಗ್ಗಡಿಸಿ ಅದೂ ಜಾಗಟೆ ಹೊಡೆದಂಥಾ ಉಚ್ಚ ದನಿಯ ಮಂತ್ರೋಚ್ಚರಣ ದೊಡ್ಡಮನಿಯ ನಾಲ್ದಿಕ್ಕಿಗೂ ಚಿಮ್ಮಿ ಚೆಲ್ಲಿ ಕೊಟ್ಟಿಗೆ ಕರುಗಳು ಬೆದರಿ ಕಿವಿ ಝಾಡಿಸಿ ಬೇಂವ್... ಬೇಂವ್ ಅನ್ನುವಷ್ಟರ ಮಟ್ಟದಲ್ಲಿ ಅನುರಣನ!

ಮುಂದೆ ಹತ್ತು ಮಿನಿಟಿನಲ್ಲಿ ದೇವರ ನೈವೇದ್ಯ ಅಂತ ಹದಿನಾರಿಂಚಿನ ವ್ಯಾಸತ್ರಿಜ್ಯದ ಫಳಫಳ ಅನ್ನುವ ಬೆಳ್ಳಿ ತಾಟಿನೊಳಗೆ ಚಂದಾಗಿ ಬಂದು ಕೂತ ಪಂಚಪಕ್ವಾನ್ನದಲ್ಲಿ ನಟ್ಟ ನಡುವೆ ಘಂ ಅನ್ನುತ್ತ ಎದ್ದು ಬಂಗಾರಬಣ್ಣದಲ್ಲಿ ಹೊಳೆದ ಹೂರಣದ ಹೋಳಿಗಿಯ ಗತ್ತೇ ಬ್ಯಾರೆ. ಯಾಕಂದ್ರೆ ಆ ಹೋಳಿಗೆ ಮಾಡಿದವಳು ಇನ್ಯಾರೂ ಅಲ್ಲ ಕೃಷ್ಣವ್ವ.. ಅಕೀ ಬೆರಳಿನೊಳಗ ಹೋಳಿಗೀ ತೀಡುವ ಇನ್ನೊಂದು ಸ್ಪೆಶಲ್ ಅಂಗದ ಜಾದೂ ಅಟ್ಯಾಚ್ ಆಗಿದ್ದಿತ್ತು, ಅದಕ್ಕೇ ಕೃಷ್ಣವ್ವನ ಹೋಳಿಗಿ ಅಂದ್ರ ಅವೊತ್ತು ಯಾವುದೋ ಕಾರಣಕ್ಕ ನಿಶ್ಚಕ್ರ ಉಪವಾಸದ ಠರಾವು ಮಾಡಿದವರೂ ಕ್ಯಾನ್ಸಲ್ ಮಾಡದಿದ್ರ ಕೇಳ್ರಿ. ಅಂಥಾ ಅಪ್ಪಟ ಮೈಸೂರು ಸಿಲ್ಕ್ ರೇಶ್ಮಿಯಂಥಾ ಹೋಳಿಗೆ ಅಕಿ ಕೈಲೆ ಪಟಾ ಪಟಾ ಹಂಚಿನಿಂದ ಇಳೀತಿದ್ದುವು...ಅಷ್ಟು ಮೆತ್ತಗೆ, ಅಷ್ಟು ಫಕ್ಕಡ ಸಿಹಿ, ಮಡಚಿದರೆ ಒಂದೇ ಮುಷ್ಠಿಯೊಳಗ ಅಡಗಿಕೊಂಡು ಕೂತುಕೊಳ್ಳುವಂಥಾ ಹೋಳಿಗಿ! ಅಷ್ಟಲ್ಲದೇ ಅವರಿಗೆ ಹೋಳಿಗಿ ಕೃಷ್ಣವ್ವ ಅನ್ನುವ ಅನ್ವರ್ಥನಾಮ ಬಂದಿತ್ತು ಸುಳ್ಳಲ್ಲ.

ಕೇಶವಾಚಾರು ಲಾಗಾಯ್ತಿನಿಂದ ಮನಿ ಪುರೋಹಿತರಾಗಿ ದೊಡ್ಮನಿ ಸಕಲ ಶುಭಾಶುಭ, ಸನ್ಮಂಗಳದೊಳಗೆ ಮುಖ್ಯ ಅಧ್ವೈರ್ಯುನೇ ಇದ್ರು. ಕೂಸು ಹುಟ್ಟಿ, ತೊಟ್ಲುಗಳು ಅಟ್ಟ ಬಿಟ್ಟಿಳಿದು ತೂಗಾಡಿದ ಹೊಸಾ ಎಂಟ್ರೀಯಿಂದ ಹಿಡಿದು ಜಾವಳ, ಚಂಡಿಕಿ, ಮುಂಜಿವಿ, ಸೋಡಮುಂಜಿವಿ, ಶೋಭನ ಎಲ್ಲಾದಕ್ಕೂ ಕರ್ತೃಗಳಿಂದ 'ಮಮ' ಅನಿಸುತ್ತ,

ವೈಕುಂಠಕ್ಕ ವಿಮಾನ ಏರಿದ ತೊಂಬತ್ತರ ನರೆತಲೆಗಳ ಜರಾಮರಣದ ಹೊತ್ತಿನ ಸಮಗ್ರ ಶಾಸ್ತ್ರಗಳನ್ನೂ ನೆರವೇರಿಸುವವರು.

ಅದೆಲ್ಲಾ ಹೌದು ಖರೆ ಅವರಿಗೊಂದೇ ಇತ್ತು ಜೀವನದ ಗುರಿ. ಅದು ಹೋಳಿಗೆ ತಿನ್ನೂದು.. ಮತ್ತ ಹೋಳಿಗಿ ತಿನ್ನೂದೊಂದೇ!

ಅದನ್ನ ಅತೋನಾತ್ ಪೂರೈಸುವ ತಾಕತ್ ಇದ್ದಾಕಿ ಕೃಷ್ಣವ್ವ ಮತ್ತ ಕೃಷ್ಣವ್ವ ಒಬ್ಬಾಕಿಗೇನೇ.

ದೊಡ್ಮನೀ ಹಿರಿಜೀವ ಚಿಂತಾಮಣಿರಾಯರಿಗೆ ಕಚೇರಿಗೆ ಹೋಗುವ ಅವಸರ. ಹತ್ತಕ್ಕೆ ಕೋರ್ಟಿನ ಮೆಟ್ಟಿಲೇರಬೇಕಾದರೆ ಒಂಬತ್ತೂ ಮುಕ್ಕಲಿಗಾದರೂ ಅವರುತಲೆಬಾಗಿಲ ಬಿಟ್ಟು ಹೊರಗಿಳಿಯಬೇಕು. ಅದೇ ಕಾರಣಕ್ಕೆ ಕೃಷ್ಣವ್ವ ನಸುಕಿನ ಐದೂವರೆಗೇ ಬೇಳೆ ಕುದಿಯಲಿಕ್ಕೆ ಒಲೆ ಮ್ಯಾಲೆ ತಪ್ಪೇಲಿ ಏರಿಸುವುದಿತ್ತು.

ಇಂಥಾದ್ದರಲ್ಲಿ ಶ್ರಾವಣ, ಭಾದ್ರಪದ ಧೀಂ ಅಂತ ಬಂದು ಸಾಲು ಸಾಲು ಹಬ್ಬ.

"ನಾ ಬರ್ಲ್ಯಾ ಆಚಾರ.. ಕಚೇರಿಗೆ ಹೊತ್ತಾತು..ನಿಮ್ಮದು ಸಾವಕಾಶ ಆಗಲಿ. ನನಗ ಅಪ್ಪಣಿ ಕೊಡ್ರಿ" ಅಂತಂದು ಅವರು ಕೋಟು ಏರಿಸಿ ಹೊರಬಿದ್ರೋ.. ಇಡೀ ವಾತಾವರಣನೇ 'ಟ್ಯಾಂ ಟಡಾಂ..'ಅಂತ ಚೇಂಜ್! ಫುಗ್ಗಾ (ಬಲೂನು) ಒಡೆದು ಅದರೊಳಗಿಂದ ಹೂವಿನ ಪಕಳೆಗಳು ಇಳಿದ ಹಂಗ!

ಹಿತ್ತಾಳೀ ಹೂ ಹಚ್ಚಿದ ಮಣಿ ಒಪ್ಪಾರಲೆ ಸರಿಸಿ ತಮ್ಮ ಉದ್ದಂಡ ಪೃಷ್ಠಕ್ಕೆ ಸ್ಥಳಾವಕಾಶ ಮಾಡಿ ತಾಮ್ರದ ತಂಬಿಗೀ ಎತ್ತಿ ನೀರು ಕುಡಿದು ಕೇಶವಾಚಾರು ಹೋಳಿಗೀ ಮುರದು ಕಟ್ಟೀ ಕಟ್ಟಿದರ ಅದರ ತುಂಬ ತುಂಬೂವಂಗ ಹಾಲು ಸುರಿದು ತುಪ್ಪದ ಗಿಳಲು ಬಗ್ಗಿಸುವವರು ಮನೀ ಸೊಸೆಯರು.

"ಕೃಷ್ಣವ್ವಾ ನಿನ್ನ ಕೈಗೆ ಭಂಗಾರದ ಖಡೆ ಬಿದ್ದರ ಈ ಹೋಳಿಗೀ ಋಣಾ ತೀರತದ ನೋಡು"

ಅಂತ ಜೋಕು ಸಿಡಿಸಿ ಗಿಂಡಿ ತುಪ್ಪಕ್ಕೂ, ಎಮ್ಮೆ ಹಾಲಿಗೂ, ಸಾಲು ಸಾಲು ಬಿಸಿ ಹಂಚಿನ ಹೊಸಾ ಹೋಳಿಗೆಗೂ ನ್ಯಾಯ ಒದಗಿಸುವ ಕೇಶವಾಚಾರು ಎಷ್ಟು ತಿಂದರು ಅಂತ ಲೆಕ್ಕ ಇಡೋದೇ ತಪ್ಪು!

ಇದಾಗಿ ಹಿತ್ತಲಪಡಸಾಲಿಯ ತುಂಬ ಸಾಲು ಬಿದ್ದ ಬಾಳೆಯೆಲೆ ಯಾ ಪತ್ರೋಳಿಗಳಿಗೆ ಒಂದೆಳೆ ರಂಗೋಲಿ ಹಾಕಿಸಿಕೊಂಡು ಊಟಕ್ಕೆ ಕೂತಿದ್ದ ವಾರದ ಹುಡುಗರು ವಾರದ ಹುಡುಗರಿಗೂ ಕೃಷ್ಣವ್ವನ ಅಡಿಗೆಯ ರುಚಿ ಎಷ್ಟು ಕಾಡುತ್ತಿತ್ತಂದರೆ ಅವತ್ತೇನಾದರೂ ಮೈಯಲ್ಲಿ ಜ್ವರ ಇದ್ದರೂ ಅಕಿಯ ಕೈಯ ಕೋಸಂಬ್ರಿ, ಚಿತ್ರಾನ್ನ, ಕಾಯಿರಸ,ಕಡುಬು ನೆನೆದುಕೊಂಡು ಬಾಯಿ ನೀರುತುಂಬಿ ಊಟಕ್ಕೆ ತಪ್ಪಿಸುವ ಮಾತೇ ಇಲ್ಲ! ಆದರೂ ಶ್ರಾವಣದ ಹೋಳಿಗೆಗಳ ರುಚಿವಿಶೇಷ ಉಂಡು ಕೇಶ್ವಾಚಾರರ ರಸನೇಂದ್ರಿಯಕ್ಕೆ ಅಷ್ಟು ಚಾಷ್ಟೀ ಮಾಡದಿದ್ದರೆ ಅವರು ಹುಡುಗರಾದಾರೇನು?

"ಕೇಶವಾಚಾರ್ ಇವತ್ತ ಸಿಲ್ವರ್ ಜುಬಿಲೀ ಹೊಡದರಲೋ ಶೀನ್ಯಾ..."

ಅಂತಲೋ. 'ಇನ್ನಾ ಔಟಾಗೂ ಲಕ್ಷಣ ಇಲ್ ಬಿಡೋ' ಅಂತ ಆ ಶೀನ್ಯಾನೂ ಮುಸಿ ಮುಸಿ ನಕ್ಕರೆ.ಕೃಷ್ಣವ್ವನೇ ಬೈತಿದ್ಲು.." "ನಿಮಗ ತಾಕತ್ತಿದ್ರ ತಿಂದ್ ತೋರಸರೋ..ಅವರನ್ ಯಾಕ್ ಆಡಕೋತೀರಿ'

"ಅದ್ಯಾಕ ಕೃಷ್ಣಕ್ಕಾ ಮಾಡಿ ಮಾಡಿ ಹಾಕ್ತಿ ನೀವು..ನಾಳೆ ಅವರ ಢಾಂ...ಡೂಂ..ಡಸ್ ಪುಸ್ ಎಲ್ಲಾ ನಿಮಗೇ"

ಅಂತ ಅವು ಇನ್ನಷ್ಟು ಕಿಸಿ ಕಿಸಿದು "ಹುಚ್ಚಪ್ಯಾಲಿಗೋಳ್ರ್ಯಾ..." ಅಂತ ಅವಳೂ ನಕ್ಕು ಒಳಗ ಹೋಗಿ ವಪಸ್ ಕೇಶವಾಚಾರ ಎಲಿಗೆ ಇನ್ನೊಂದು ಹೋಳಿಗಿ!

ಈ ಸಡಗರ ನಡದಿದ್ದು ಒಂದೆರಡು ದಿನ, ತಿಂಗಳು, ವರ್ಷ ಅಲ್ಲ. ಅಖಂಡ ಇಪ್ಪತ್ತು ವರ್ಷದ ಸಮಾಚಾರ ಇದು. ಆದರ ಸುಖಕ್ಕೆ ಬೀಳುವ ಬರೆ ಕಾಣಲಾರ್ದೇ ಬರುವ ಬೆಂಕಿ. ಕಾಶೀ, ಬದರೀ ಯಾತ್ರಾ ಅಂತ ಹೋಗಿದ್ದ ಕೇಶವಾಚಾರರು ಬದರಿಯೊಳಗೇ ಅಸ್ತಂಗತ ಆದರು! ಅಲ್ಲಿ ವಿಷ್ಣು ಸಹಸ್ರನಾಮ ಹೇಳುತ್ತಲೇ ವೈಕುಂಠಕ್ಕೆ ಸಂದರು.

ಮುಂದೆ ಮೂರೇ ವರ್ಷಕ್ಕೆ ಕೃಷ್ಣವ್ವನ್ನ ಕ್ಯಾನ್ಸರ್ ತಿಂದಿತು...

ಈಗ ಕೇಶವಾಚಾರೂ ಇಲ್ಲ. ಕೃಷ್ಣವ್ವ ಇಲ್ಲ. ಹೋಳಿಗೀ ಹಂಚು ಮಕಾಡೆ ಮಲಗಿತು. ಇಧ್ಲಿ ಒಲಿ ಗ್ಯಾಸಿನ ಬುಡಕ ಅಡಗಿ, ಕೊಟ್ಟಿಗೆಯೊಳಗಿನ ಸಾಲು ಸಾಲು ಆಕಳು, ಎಮ್ಮೆ, ಕರು ಜಾಗಾ ಖಾಲೀ ಮಾಡಿ, ಹಾಲು ತುಪ್ಪಕ್ಕ ಜಿಡ್ಡೇ ಕರಗಿಹೋದಾಗ ಶತಮಾನಕ್ಕೆ ಆಯುಸ್ಸೆಷ್ಟು ಅಂತ ಲೆಕ್ಕ ಮಾಡಿ ಸೋತು ಸಪ್ಪಿಗಿನ ಮಾರೀಲೆ ಮನಿತುಂಬ ಭೈರವೀ ಆಲಾಪನೆ ಅಷ್ಟೇ!

ಕಾಲಾಯ ತಸ್ಮೈ ನಮ: ■



**ಆತ್ಮೀಯ ಓದುಗರೇ / ಚಂದಾದಾರರೇ**

**ನಿಮಗೆಲ್ಲಾ ತಿಳಿದಿರುವಂತೆ ಪ್ರತೀವರ್ಷ ಅಪರಂಜಿ ಅಕ್ಟೋಬರ್ ಸಂಚಿಕೆ ವಿಶೇಷ ಸಂಚಿಕೆಯಾಗಿ ಹೊರಹೊಮ್ಮುತಿದೆ 2025ರ ಅಕ್ಟೋಬರ್ ಸಂಚಿಕೆಗೆ ನಿಮ್ಮ ವಿಶೇಷ ಲೇಖನಗಳನ್ನು 15ನೇ ಸೆಪ್ಟೆಂಬರ್ 2025 ರ ಒಳಗಾಗಿ ತಲುಪುವಂತೆ ಕಳಿಸಲು ಕೋರಿದೆ. ಲೇಖನಗಳು ತುಂಬಾ ವಿಶೇಷವಾಗಿ ಮುದ ಕೊಡುವಂತೆ ಮತ್ತು ಹೊಸತನದಿಂದ ಕೂಡಿರಲಿ. ನಿಮ್ಮ ಲೇಖನಗಳು ಅಪರಂಜಿ ಪುಟದ ಅಳತೆಯಲ್ಲಿ ಮೂರರಿಂದ ನಾಲ್ಕು ಪುಟಗಳಿದ್ದರೆ ಸಾಕು.**

# ಕನ್ನಡದ ಕಂಪನ್ನು ಎಲ್ಲೆಡೆ ಪಸರಿಸಿದ ನಗೆಗಾರ, ಸಮಾಜ ಸೇವಕ

ಸೌಮ್ಯ ಮಿತ್ರ

'ನಾರಿ ಮುನಿದರೆ ಮಾರಿ' – ಈ ಗಾದೆಯನ್ನು ಕೇಳದವರು ಯಾರಾದರೂ ಇದ್ದಾರೆಯೇ? ಆದರೆ, ಒಬ್ಬ ಮಹನೀಯರು ಈ ಗಾದೆಯನ್ನು ಕಂಡ ರೀತಿ ಇದು...'ಮಾರಲು ನಾನೇನೋ ತಯಾರಿದ್ದೇನೆ. ಆದರೆ ಮುನಿದ ನಾರಿಯನ್ನು ಕೊಳ್ಳುವವರು ಯಾರು?

ಈ ಮಾತನ್ನು ಹೇಳಿದವರು ಒಬ್ಬ ಹಾಸ್ಯಗಾರರು ಎಂದರೆ ನಿಮಗೆ ಆಶ್ಚರ್ಯವಾಗುವುದಿಲ್ಲ. ಆದರೆ ಈ ಮಾತನ್ನು ಉದ್ಧರಿಸಿದ ಮಹನೀಯರು ಒಂದು ಕಾಲದಲ್ಲಿ ಕನ್ನಡ ಭಾಷೆಯ ಗಂಧ ಗಾಳಿಯನ್ನೇ ತಿಳಿಯದವರು, ಮೂಲತಃ ಮಲಯಾಳಂ ಮಾತನಾಡುವವರು ಎಂದರೆ ನಿಮಗೆ ಆಶ್ಚರ್ಯ ಆಗದೆ ಇರಲಾರದು. ಹೌದು, ಇವರೇ ಪ್ರಸಿದ್ಧ ಹಾಸ್ಯಗಾರರಾದ ಶ್ರೀ ನಾ.ಕಸ್ತೂರಿ.

ಕನ್ನಡ ಮಾತೃಭಾಷೆಯಲ್ಲದ. ಆದರೆ ಕನ್ನಡ ನಾಡನ್ನು ಬೆಳಗಿದ, ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದ ಅನೇಕ ಮಹನೀಯರಲ್ಲಿ ನಾ.ಕಸ್ತೂರಿಯವರೂ ಒಬ್ಬರು. ಕನ್ನಡದ ಆಸ್ತಿ ಎಂದೇ ಪ್ರಸಿದ್ಧರಾದ ಜ್ಞಾನಪೀಠ ಪುರಸ್ಕೃತ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕನ್ನಡದಲ್ಲಿ ಅನೇಕ ಗ್ರಂಥಗಳನ್ನು ಬರೆದು, ಪರ್ಪಂಚ್ ಇರೋ ವರ್ಗೂ ಕನ್ನಡ್ ಪದಗೋಳ್ ನುಗ್ಗಿ' ಎಂದು ಕನ್ನಡ ಭಾಷಾಭಿಮಾನ ಮೆರೆದ ಎಂಡಕುಡುಕ ರತ್ನನನ್ನು ಕನ್ನಡದ ಜನತೆಗೆ ಪರಿಚಯಿಸಿದ್ದಲ್ಲದೇ, ಅನೇಕ ಶಿಶು ಗೀತೆಗಳನ್ನು ಬರೆದು ನಾಯಿ ಮರಿ ತಾತ' ಎಂದು ಪ್ರಸಿದ್ಧರಾಗಿದ್ದ, ಶ್ರೀ ರಾಜರತ್ನಂ, ತಮ್ಮ ನಾಟಕಗಳಿಂದ ಕನ್ನಡ ನಾಡಿನಲ್ಲೆಲ್ಲ ಹೆಸರುವಾಸಿಯಾದ, 'ಕನ್ನಡ ನಾಟಕದ ಪ್ರಪಿತಾಮಹ' ಎನಿಸಿರುವ, 'ಕನ್ನಡಕ್ಕೊಬ್ಬನೇ ಕೈಲಾಸಂ' ಎನ್ನುವಷ್ಟರ ಮಟ್ಟಿಗೆ ಕನ್ನಡಿಗರ ಪ್ರೀತಿಯನ್ನು ಸಂಪಾದಿಸಿರುವ ಟಿ.ಪಿ.ಕೈಲಾಸಂ. ಇವರೆಲ್ಲರ ಮನೆಮಾತು ತಮಿಳು ಎಂದರೆ ನಂಬಲಾದೀತೆ?! ಇಂತಹ ಅನೇಕ ಮಹನೀಯರನ್ನು ಕನ್ನಡ ನಾಡು ಪ್ರೀತಿಯಿಂದ ಬರಮಾಡಿಕೊಂಡಿದ್ದು, ಆ ಮಹನೀಯರು ಕನ್ನಡಾಂಬೆಯ ಸೇವೆ ಮಾಡಿದ್ದು ಇಂದಿಗೆ ಇತಿಹಾಸ.

ನನಗೆ ನಾ.ಕಸ್ತೂರಿ ಅವರ ವ್ಯಕ್ತಿತ್ವದ ಪರಿಚಯ ಅದದ್ದು ಮುಖ್ಯವಾಗಿ ನನ್ನ ತಂದೆ ಅ.ರಾ.ಮಿತ್ರ (ನಾನು ಅವರನ್ನು ಅಣ್ಣ ಎಂದು ಕರೆಯುತ್ತೇನೆ) ಅವರಿಂದ. ಅಣ್ಣನ ಭಾಷಣಗಳಲ್ಲಿ ಆಗಾಗ ಕೇಳುತ್ತಿದ್ದ ಹೆಸರು ನಾ.ಕಸ್ತೂರಿ ಅವರದ್ದು. ಅಲ್ಲದೆ, ಡಾ. ಎಚ್.ಕೆ.ರಂಗನಾಥ್, ಅಣ್ಣನ ಗುರುಗಳಾದ (ಹಾಗೂ ನಾ.ಕಸ್ತೂರಿ ಅವರ ಶಿಷ್ಯರಾದ) ಡಾ.ಪ್ರಭುಶಂಕರ, ನಮ್ಮ ಮನೆಯಲ್ಲಿ ಕೆಲವು ದಿನಗಳ ಕಾಲ ಇದ್ದ. ನಾ.ಕಸ್ತೂರಿ ಅವರ ಸಮಕಾಲೀನರಾದ ಪ್ರೊ.ಎ.ಎನ್. ಮೂರ್ತಿರಾವ್ ಅವರುಗಳಿಂದ.

ಈ ಮೇಲ್ಕಂಡ ಮಹನೀಯರಿಂದ ನಾನು ನಾ.ಕಸ್ತೂರಿ ಅವರ ಬಗ್ಗೆ ತಿಳಿದ ಕೆಲವು ಅಂಶಗಳು:

ಅವರು ಮೂಲತಃ ಮಲಯಾಳ ದೇಶದವರು.

ಅವರು ಮೈಸೂರಿನ ಬನುಮಯ್ಯ ಸಂಸ್ಥೆಗೆ ಇತಿಹಾಸ ಪ್ರಾಧ್ಯಾಪಕರಾಗಿ ಸೇರಿಕೊಂಡು, ನಂತರದ ದಿನಗಳಲ್ಲಿ ಮಹಾರಾಜಾ ಕಾಲೇಜಿನ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದರು.

ಕನ್ನಡದ ಖ್ಯಾತ ಹಾಸ್ಯಗಾರರಾದ ಡಾ.ಶಿವರಾಂ(ರಾಶಿ) ಅವರು ಕೊರವಂಜಿ

ಪತ್ರಿಕೆ ಆರಂಭಿಸಿದಾಗ ಇವರೂ ಜೊತೆಯಾಗಿ, ಅನೇಕ ಹಾಸ್ಯ ಲೇಖನಗಳನ್ನು ಕೊರವಂಜಿ ಪತ್ರಿಕೆಗೆ ಬರೆದರು. ನಂತರದ ದಿನಗಳಲ್ಲಿ ಬಹಳಷ್ಟು ಹಾಸ್ಯ ಪುಸ್ತಕಗಳನ್ನು ಬರೆದಿದ್ದಾರೆ.

ಉತ್ತಮ ಅಧ್ಯಾಪಕರಾಗಿ ಹೆಸರುಗಳಿಸಿದ್ದಷ್ಟೇ ಅಲ್ಲದೆ, ಅಂದಿನ ಕಾಲದಲ್ಲೇ ಅನೇಕ ಸಾಮಾಜಿಕ ಕಾರ್ಯಗಳನ್ನು ಕೈಗೆತ್ತಿಕೊಂಡು ಎಲ್ಲರಿಗೂ ಸ್ಫೂರ್ತಿಯಾದ ಅಪರೂಪದ ವ್ಯಕ್ತಿ ನಾ.ಕಸ್ತೂರಿ.

ಜೀವನದಲ್ಲಿ ನೋವುಂಡು, ಅಧ್ಯಾತ್ಮದಲ್ಲಿ ಸಮಾಧಾನ ಪಡೆದ ನಾ.ಕಸ್ತೂರಿ ಅವರು ಪುಟ್ಟಪರ್ತಿಯ ಸಾಯಿಬಾಬಾ ಅವರ ಆಶ್ರಮದಲ್ಲಿ ಜೀವನವನ್ನು ಕಳೆದರು. ನಾ.ಕಸ್ತೂರಿ ಅವರ 'ಸತ್ಯಂ ಶಿವಂ ಸುಂದರಂ', 'ದೇವನೊಲಿದ ಜೀವ' (ಆತ್ಮಚರಿತ್ರೆ), ಮುಂತಾದ ಪುಸ್ತಕಗಳು ಇಂದಿಗೂ ಜನಪ್ರಿಯವಾಗಿದ್ದು, ಅವರ ಆಧ್ಯಾತ್ಮಿಕ ಸಾಧನೆಯನ್ನು ಬಿಂಬಿಸುತ್ತವೆ.

ನಾ. ಕಸ್ತೂರಿ ಮತ್ತು ಅಕಾಶವಾಣಿಯ ನಡುವೆ ಒಂದು ದೊಡ್ಡ ನಂಟಿದೆ. ಡಾ.ಎಚ್.ಕೆ.ರಂಗನಾಥ್ ಅವರಿಂದ ನನಗೆ ನಾ.ಕಸ್ತೂರಿ ಅವರ ಅಕಾಶವಾಣಿಯೊಂದಿಗಿನ ಒಡನಾಟದ ಬಗ್ಗೆ ತಿಳಿಯಿತು. ಅಂದಿನ ದಿನಗಳಲ್ಲಿ ಅದಕ್ಕೆ ಮೈಸೂರು ರೇಡಿಯೋ ಎಂಬ ಹೆಸರಿತ್ತು. ಡಾ.ಎಚ್.ಕೆ.ರಂಗನಾಥ್ ಅವರು ಹೇಳುತ್ತಾರೆ. 'ನಾ.ಕಸ್ತೂರಿ ಅವರು ಅಕಾಶವಾಣಿಯಲ್ಲಿ ಮಾಡಿದ ಕೆಲಸ ಮಹತ್ತರವಾದದ್ದು. ಅವರು ಆಡಿಸಿದ ನಾಟಕಗಳೆಷ್ಟೋ, ಬರೆದ ಅಣಕವಾಡುಗಳೆಷ್ಟೋ, ನಡೆಸಿದ ಕಾರ್ಯಕ್ರಮಗಳೆಷ್ಟೋ! ತಂತ್ರಜ್ಞಾನ ಹೆಚ್ಚು ಮುಂದುವರೆಯದಿದ್ದ ಅಂದಿನ ದಿನಗಳಲ್ಲಿ ಅವರು ನಾಟಕಗಳಲ್ಲಿ ಮಾಡಿದ ಪ್ರಯೋಗಗಳನ್ನು ನಾವು ಇಂದು ಎಲ್ಲ ರೀತಿಯ ತಂತ್ರಜ್ಞಾನ ಬಳಸಿ ಕೂಡ ಮಾಡಲಾಗುತ್ತಿಲ್ಲ. ಅಷ್ಟೇ ಅಲ್ಲ, ಮೈಸೂರು ರೇಡಿಯೋಗೆ ಆಕಾಶವಾಣಿ ಎಂಬ ಹೆಸರು ಸೂಚಿಸಿದ್ದು ಕೂಡ ನಾ.ಕಸ್ತೂರಿಯವರೇ! 'ಮೈಸೂರು ರೇಡಿಯೋ ಎಂದು ಎಷ್ಟು ದಿನ ಕರೆಯಲು ಸಾಧ್ಯ!? ಬೇರೆ ಹೆಸರು ಹುಡುಕೋಣ' ಎಂಬ ಬೇಡಿಕೆ ಹೆಚ್ಚಾಗಿ, ಸೂಕ್ತ ಹೆಸರಿಗಾಗಿ ಅನ್ವೇಷಣೆ ನಡೆಯುತ್ತಿದ್ದ ಸಮಯ. ಒಮ್ಮೆ ನಾನು ನಾ.ಕಸ್ತೂರಿ ಅವರ ಮನೆಗೆ ಹೋಗಿದ್ದೆ. ಬಾನುಲಿ' 'ಅಶರೀರವಾಣಿ' ಮುಂತಾದ ಹೆಸರುಗಳಲ್ಲಿ ಯಾವುದು ಸೂಕ್ತ ಎಂಬ ಚರ್ಚೆ ನಡೆಯುತ್ತಿತ್ತು. ಅಡುಗೆ ಮನೆಯಿಂದ ಹೊರಬಂದ ನಾ.ಕಸ್ತೂರಿ ಅವರ ತಾಯಿ, 'ಆಕಾಶವಾಣಿ' ಎಂಬ ಹೆಸರು ಸೂಚಿಸಿ ಮತ್ತೆ ಅಡುಗೆಮನೆಗೆ ಹಿಂದಿರುಗಿದರು. ನಾ. ಕಸ್ತೂರಿ ಅವರು ಮೊದಲಿಗೆ ಈ ಹೆಸರನ್ನು ಅನುಮೋದಿಸಲಿಲ್ಲ. 'ಆಕಾಶವಾಣಿ ಎಂಬ ಹೆಸರು ಪೌರಾಣಿಕ ಹಿನ್ನೆಲೆಯನ್ನು ಹೊಂದಿರುವ ಪದ. ಯಾವುದೋ ಎಚ್ಚರಿಕೆ ಕೊಡಲು ಬಳಸುವಂತಹದ್ದು' ಎಂದು ಮೊದಲು ಅಭಿಪ್ರಾಯಪಟ್ಟರೂ. ಕೆಲ ಸಮಯ ಆಲೋಚಿಸಿದ ನಂತರ. 'ಕೆಲವೊಮ್ಮೆ ಎಚ್ಚರಿಕೆ ಕೊಡಲೂ ಸಹ ರೇಡಿಯೋ ಬಳಕೆಯಾಗಬಹುದು' ಎಂದು ಉದ್ಧರಿಸಿ ನಂತರ ಇದೇ ಹೆಸರನ್ನು ಅನುಮೋದಿಸಿದರು. ಕೊನೆಗೆ ಈ ಹೆಸರೇ ಆಯ್ಕೆಯಾಯಿತು.'

ನಾ.ಕಸ್ತೂರಿ ಅವರ ಕೆಲವು ಹಾಸ್ಯ ಪ್ರಸಂಗಗಳನ್ನು ನಾನು, ಅಣ್ಣ, ಡಾ.ಪ್ರಭುಶಂಕರ್, ಡಾ.ಎಚ್.ಕೆ.ರಂಗನಾಥ್, ಎ.ಎನ್.ಮೂರ್ತಿರಾವ್ ಅವರಿಂದ ಕೇಳಿದ್ದೇನೆ. ಅವುಗಳು ಹೀಗಿವೆ:

ನಾ.ಕಸ್ತೂರಿ ಮತ್ತು ಅವರ ಅಧ್ಯಾಪಕ ಮಿತ್ರರ ನಡುವೆ ಒಮ್ಮೆ ಒಂದು ಪಂದ್ಯ ಏರ್ಪಾಡಾಯಿತಂತೆ. ನಾನು ಮಾಡುವುದನ್ನು ಬೇರೆ ಯಾರೂ ಮಾಡಲು ಸಾಧ್ಯವಿಲ್ಲ ಎಂದು ನಾ.ಕಸ್ತೂರಿ ಅಂದರಂತೆ. ಇಲ್ಲ, ನೀವು ಮಾಡುವ ಯಾವುದೇ ಕೆಲಸವನ್ನು

ನಾವು ಸುಲಭವಾಗಿ ಮಾಡುತ್ತೇವೆ ಎಂದು ಉಳಿದ ಅಧ್ಯಾಪಕರು ವಾದಿಸಿದರಂತೆ.

ನಾ.ಕಸ್ತೂರಿ ಅವರು ತಕ್ಷಣ ತಮ್ಮ ಹಲ್ಲಿನ ಸೆಟ್ ಅನ್ನು ತೆಗೆದು ಟೇಬಲ್ ಮೇಲಿಟ್ಟು, 'ನೌ, ಕಮ್ ಆನ್' ಎಂದರಂತೆ.

ನಾ.ಕಸ್ತೂರಿ ಅವರು ಒಮ್ಮೆ ಕಾಲೇಜಿಗೆ ತಡವಾಗಿ ಬಂದರಂತೆ. ತಡವಾಗಿ ಬಂದಾಗ ಪ್ರಿನ್ಸಿಪಾಲರನ್ನು ಕಂಡು ಹಲ್ಲುಕಿರಿದು, ಸಬೂಬು ಹೇಳುವುದು ವಾಡಿಕೆ ತಾನೇ? ಅವರು, ಹಲ್ಲಿನ ಸೆಟ್ ಅನ್ನು ಮೇಜಿನ ಮೇಲಿಟ್ಟು, ತಮ್ಮ ಸಹ ಅಧ್ಯಾಪಕರಿಗೆ, ಇದನ್ನು ತೋರಿಸಿ ಕಸ್ತೂರಿ ಬಂದಿದ್ದಾನೆ ಎಂದು ತಿಳಿಸಿ. ನಾನು ಅಮೇಲೆ ಹೋಗಿ ಅವರಿಗೆ ಸಮಜಾಯಿಷಿ ಹೇಳುತ್ತೇನೆ ಎಂದರಂತೆ.

ನಾ.ಕಸ್ತೂರಿ ಅವರಿಗೆ ಒಮ್ಮೆ ಆರೋಗ್ಯ ಕೆಟ್ಟಿತಂತೆ. ವೈದ್ಯರ ಬಳಿ ಹೋದಾಗ ಅವರು ಕೆಲವು ಪರೀಕ್ಷೆಗಳನ್ನು ಮಾಡಿಸಲು ಸೂಚಿಸಿದರಂತೆ. ಅದರಲ್ಲಿ ಸೂಚಿಸಿದ್ದ ಮಲ ಪರೀಕ್ಷೆಗಾಗಿ ಒಂದು ಡಬ್ಬಿಯಲ್ಲಿ ಸ್ಯಾಂಪಲ್ ಹಿಡಿದು ಹೊರಟಿದ್ದಾಗ ಸಿಕ್ಕ ಸ್ನೇಹಿತರೊಬ್ಬರಿಗೆ ವಿಷಯ ತಿಳಿಸಿ, 'ಅಲ್ಲ ಕಣಯ್ಯಾ, ನಾನು ಏನು ಮಾಡಲಿ ಹೇಳು, ಈ ಡಬ್ಬಿಯ ಮೇಲೆ ನಾನು ಕಸ್ತೂರಿ ಎಂದೇ ಬರೆಯಬೇಕು (ಕಸ್ತೂರಿ ಎಂದರೆ ಒಂದು ಸುಗಂಧ ದ್ರವ್ಯ), ಕಸ್ತೂರಿ ಎನ್ನುವ ಹೆಸರಿರುವ ಈ ಹಾಳು ಡಬ್ಬಿಯನ್ನು ಪರೀಕ್ಷಿಸುತ್ತಾನೆ ನೋಡು, ಅವನ ಹಣೆಯಬರಹಕ್ಕೆ ಏನು ಹೇಳೋಣ?' ಎಂದರಂತೆ.

ಡಾ. ಪ್ರಭುಶಂಕರ್ ಅವರು ವಿದ್ಯಾರ್ಥಿಯಾಗಿದ್ದಾಗ ನಾ.ಕಸ್ತೂರಿ ಅವರು ಪ್ರಾಧ್ಯಾಪಕರಾಗಿದ್ದರಂತೆ. ಒಮ್ಮೆ, ಚೆನ್ನೈಗೆ ಮಹಾತ್ಮಾ ಗಾಂಧೀಜಿ ಅವರು ಬರುವವರಿದ್ದರಂತೆ. ನಾ.ಕಸ್ತೂರಿ ಅವರು ಗಾಂಧೀಜಿಯವರರನ್ನು ತೋರಿಸಲು ಹುಡುಗರನ್ನೆಲ್ಲ ಕರೆದುಕೊಂಡುಹೋದರಂತೆ. ಅಲ್ಲಿ ಗಾಂಧೀಜಿಗಾಗಿ ಬಹಳ ಹೊತ್ತು ಕಾಯಬೇಕಾಯಿತಂತೆ. ಸಿಕ್ಕಾಪಟ್ಟೆ ಬಿಸಿಲು, ಎಲ್ಲರಿಗೂ ಬಾಯಾರಿಕೆ. ನಾ.ಕಸ್ತೂರಿ ಅವರು ಶಿಷ್ಯರೆಲ್ಲರಿಗೂ ಐಸ್ ಕ್ರೀಮ್ ಕೊಡಿಸಿದರಂತೆ. ಐಸ್ ಕ್ರೀಮ್ ತಿಂದು ಕೈ ತೊಳೆದುಕೊಳ್ಳಲು ಮೇಲೇಳುತ್ತಿದ್ದ ಪ್ರಭುಶಂಕರ್ ಅವರನ್ನು ತಡೆದ ನಾ.ಕಸ್ತೂರಿ. 'ಎಲ್ಲಿಗೆ ಹೊರಟೆ?' ಎಂದರಂತೆ. ಪ್ರಭುಶಂಕರ ಅವರು, ಕೈ ತೊಳೆಯಲು' ಎಂದರಂತೆ. ಆಗ ನಾ.ಕಸ್ತೂರಿ ಅವರು, 'ಅದಕ್ಕೆ ಎದ್ದು ಹೋಗಬೇಕೇ? ನಿನ್ನ ಮುಂದೆ ಕುಳಿತಿರುವ ಹುಡುಗನ ಶರ್ಟ್ ಗೆ ಒರೆಸು' ಎಂದರಂತೆ. ಪ್ರಭುಶಂಕರ್ ಸಂಕೋಚದಿಂದ ಮತ್ತು ಗಾಬರಿಯಿಂದ, 'ಅವನಿಗೆ ಗೊತ್ತಾಗಿ ಬಯ್ದರೆ?' ಎಂದರಂತೆ. ಆಗ ನಾ.ಕಸ್ತೂರಿ, 'ಅವನಿಗೆ ಏನೂ ಗೊತ್ತಾಗುವುದಿಲ್ಲ ಕಣಯ್ಯಾ! ಈಗ ನಾನು ನಿನ್ನ ಶರ್ಟ್ ಒರೆಸಿಲ್ಲವೇ? ನಿನಗೇನಾದರೂ ತಿಳಿಯಿತೇ?!' ಎಂದರಂತೆ.

ಒಮ್ಮೆ ನಾ. ಕಸ್ತೂರಿ ಅವರು ಶಾಲೆಯಲ್ಲಿ ಪಾಠ ಮಾಡಲು ಬಳಸುತ್ತಿದ್ದ ನೋಟ್ಸ್ ಪುಸ್ತಕ ಕಳುವಾಯಿತಂತೆ. ನೋಟ್ಸ್ ಕಳುವಾದರೆ ಅಧ್ಯಾಪಕರಿಗೆ ಗಾಬರಿ ಆಗುವುದು ಸಹಜ. ಆದರೆ ನಾ. ಕಸ್ತೂರಿ ಅವರು ಮಾತ್ರ ಗಲಿಬಿಲಿ ಗೊಳ್ಳದೆ ಅರಾಮಾಗಿದ್ದರಂತೆ. ನಡೆದ ವೃತ್ತಾಂತವನ್ನು ತಿಳಿದು ಅನುಕಂಪ ಸೂಚಿಸಿದ ಸಹ ಪ್ರಾಧ್ಯಾಪಕರಿಗೆ, 'ನನಗೆ ಅದರ ಬಗ್ಗೆ ಯೋಚನೆ ಇಲ್ಲ ಕಣಯ್ಯಾ. ಅದನ್ನು ತೆಗೆದುಕೊಂಡವನು ನಾಳೆಯೇ ಅದನ್ನು ವಾಪಸ್ಸು ತಂದಿಡುತ್ತಾನೆ, ನೋಡುತ್ತಿರು' ಎಂದರಂತೆ. ಮಾರನೆಯ ದಿನ, ನಾ. ಕಸ್ತೂರಿ ಅವರು ಹೇಳಿದಂತೆಯೇ, ಕಳೆದುಹೋಗಿದ್ದ ಪುಸ್ತಕ ಇದ್ದಕ್ಕಿದ್ದಂತೆ ಕ್ಲಾಸ್ ರೂಮ್ ನಲ್ಲಿ ಪ್ರತ್ಯಕ್ಷವಾಯಿತಂತೆ. ವಿಷಯ ಇಷ್ಟೇ– ನಾ. ಕಸ್ತೂರಿ ಅವರು ನೋಟ್ಸ್ ಅನ್ನು ಮಲಯಾಳಂ ಭಾಷೆಯಲ್ಲಿ ಬರೆದುಕೊಂಡಿದ್ದರಂತೆ.

ಒಮ್ಮೆ ನಾ. ಕಸ್ತೂರಿ ಅವರು ತಮ್ಮ ಹಳೆಯ ಶಿಷ್ಯನೊಬ್ಬನ ಮನೆಗೆ ಡಾ.

ಪ್ರಭುಶಂಕರ್ ಅವರನ್ನು ಕರೆದುಕೊಂಡು ಹೋದರಂತೆ. ಅಲ್ಲಿ ಅವರ ಮನೆಯವರೆಲ್ಲ ಬಹಳ ಪ್ರೀತಿಯಿಂದ ನಾ. ಕಸ್ತೂರಿ ಮತ್ತು ಪ್ರಭುಶಂಕರ್ ಅವರನ್ನು ಬರಮಾಡಿಕೊಂಡರಂತೆ. ಊಟದ ಹೊತ್ತಾಯಿತು. ಎಲ್ಲರಿಗೂ ಹಸಿವು. ಆದರೆ ಮನೆಯೊಡೆಯ ಇನ್ನೂ ಕಚೇರಿಯಿಂದ ಬಂದಿರಲಿಲ್ಲವಂತೆ. ಆತ ಬರದೆ ಊಟ ಮಾಡುವಂತಿಲ್ಲ. ಸ್ವಲ್ಪ ಹೊತ್ತಿನ ನಂತರ ಹೊರಗಡೆ ಕಾರಿನ ಶಬ್ದ ಆಯಿತಂತೆ. ನಾ. ಕಸ್ತೂರಿ ಅವರು ತಕ್ಷಣ ಪ್ರಭುಶಂಕರರಿಗೆ. 'ನಾನು ಸತ್ತವನಂತೆ ನಟಿಸುತ್ತೇನೆ. ನೀನು ನನ್ನ ಶಿಷ್ಯನಿಗೆ 'ಇಷ್ಟು ಹೊತ್ತು ಕಾದಿದ್ದರು. ಅವರಿಗೆ ತುಂಬ ಹಸಿವಾಗಿತ್ತು. ಪಾಪ ಈಗತಾನೇ ಹೋಗಿಬಿಟ್ಟರು ಎಂದು ಹೇಳು' ಎಂದರಂತೆ. ಪ್ರಭುಶಂಕರರಿಗೆ ತಬ್ಬಿಬ್ಬಾದರೂ, ಹೆಂಡತಿಗೆ ತಟ್ಟೆ ಹಾಕಲು ಹೇಳಿ ಗುರುಗಳನ್ನು ಕಾಣಲು ಬಂದ ಮನೆಯೊಡೆಯನಿಗೆ ನಾ. ಕಸ್ತೂರಿ ಅವರು ಸೂಚಿಸಿದ್ದಂತೆ ಹೇಳಿದರಂತೆ. ನಾ. ಕಸ್ತೂರಿ ಅವರ ತಮಾಷೆ ಸ್ವಭಾವವನ್ನು ಬಲ್ಲ ಅವರ ಶಿಷ್ಯ ತನ್ನ ಹೆಂಡತಿಗೆ 'ನೋಡು, ಎರಡು ತಟ್ಟೆ ಹಾಕು ಸಾಕು. ಪಾಪ ಗುರುಗಳು ಹೋಗಿಬಿಟ್ಟಿದ್ದಾರೆ. ಇನ್ನು ಮುಂದಿನ ಕೆಲಸ ಮುಗಿಯಲು ಬಹಳ ಹೊತ್ತಾಗುತ್ತದೆ. ಅಷ್ಟು ಹೊತ್ತು ಹಸಿದುಕೊಂಡು ಇರಲು ಸಾಧ್ಯವಿಲ್ಲ. ನಾನು ಪ್ರಭುಶಂಕರ್ ಊಟ ಮಾಡಿ ಆಮೇಲೆ ಮುಂದಿನ ಕಾರ್ಯದ ಬಗ್ಗೆ ಗಮನ ಹರಿಸುತ್ತೇವೆ' ಎಂದರಂತೆ. ತಕ್ಷಣ, ಸತ್ತವರಂತೆ ಇದ್ದ ನಾ. ಕಸ್ತೂರಿ ಅವರು, 'ಇಲ್ಲಮ್ಮಾ, ನನಗೂ ತಟ್ಟೆ ಹಾಕು, ನಾನು ಸತ್ತಿಲ್ಲ' ಎಂದರಂತೆ.

ಇಂದಿಗೂ ಜನಮಾನಸದಲ್ಲಿ ನೆಲೆಸಿರುವ, ಎಲ್ಲರನ್ನೂ ಪ್ರಚೋದಿಸುತ್ತಿರುವ ನಾ. ಕಸ್ತೂರಿಯಂತಹ ಪೂಜ್ಯರು ಅಜರಾಮರರು, ಅವರಿಗೆ ಸಾವೇ ಇಲ್ಲ. ಇಂತಹ ಹಿರಿಯ ಚೇತನಗಳ ಬರವಣಿಗೆಯನ್ನು ಮುಂದಿನ ಪೀಳಿಗೆಯವರಿಗೆ ಪರಿಚಯ ಮಾಡಿಸುವುದು ನಮ್ಮೆಲ್ಲರ ಜವಾಬ್ದಾರಿ. ಇಂತಹವರ ಆದರ್ಶ ಜೀವನ ಮುಂದಿನ ಎಷ್ಟೋ ಕಸ್ತೂರಿ, ಕೈಲಾಸಂ, ಮಾಸ್ತಿ, ಪು ತಿ ನರಸಿಂಹಾಚಾರ್, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರಿಗೆ ಪ್ರೇರಣೆ ನೀಡಬಹುದು.

ಕೊನೆಗೆ, ನಾ.ಕಸ್ತೂರಿ ಅವರ ಅನರ್ಥಕೋಶ ಪುಸ್ತಕದಿಂದ ಆಯ್ದ ಕೆಲವು ಶಬ್ದಗಳ ಅರ್ಥಗಳನ್ನು ಕೊಟ್ಟು ಕನ್ನಡದ ಜನತೆಯನ್ನು ನಕ್ಕು ನಲಿಸುತ್ತಿರುವ ಈ ಮಹನೀಯರಿಗೆ ನನ್ನ ಗೌರವಾದರಗಳನ್ನು ಸಮರ್ಪಿಸುತ್ತೇನೆ.

ಪತಿ ಎಂದರೆ ಯಾರು? ದಂಪತಿ' ಗಳಲ್ಲಿ 'ದಂ' ಕಳೆದುಕೊಂಡವನು.

ಪಾಲಿಗೆ ಬಂದಿದ್ದು .....? ಪಂಚಾಮೃತ ಎನ್ನುವುದು ವಾಡಿಕೆ. ನಾ ಕಸ್ತೂರಿ ಅವರ ಪ್ರಕಾರ ಪಾಲಿಗೆ ಬಂದಿದ್ದು ಕೊಂಚಾಮೃತ.

ಐಸ್? ಇತ್ತೀಚಿನ ಕವಿತೆಗಳನ್ನು ಓದಬೇಕಾದರೆ ಓದುಗ ತನ್ನ ತಲೆಯ ಮೇಲೆ ಇಟ್ಟುಕೊಳ್ಳಬೇಕಾದ ವಸ್ತು.

ನಾ. ಕಸ್ತೂರಿ ಅವರ ಕಂಪು ಅನೇಕ ವರ್ಷಗಳ ಕಾಲ ಕನ್ನಡ ನಾಡಿನಲ್ಲೆಲ್ಲ ತುಂಬಲಿ ಎಂಬ ಅಪೇಕ್ಷೆಯುಳ್ಳ ಕನ್ನಡಿಗರೆಲ್ಲರೂ ಅವರ ಪುಸ್ತಕಗಳನ್ನು ಕೊಂಡು ಓದಿ, ಅವರ ಕಾರ್ಯಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪಸರಿಸಿ. ಇಂದಿನ ಯುವಕರಿಗೆ ತಲುಪುವಂತೆ ಮಾಡಬೇಕು. ಇದು, ಹೊರನಾಡಿನಿಂದ ಬಂದು ನಮ್ಮ ನಾಡನ್ನು ಭಾಷೆಯನ್ನು ಶ್ರೀಮಂತಗೊಳಿಸಿದ ವ್ಯಕ್ತಿಗೆ ನಾವು ಸಲ್ಲಿಸಬಹುದಾದ ಅತ್ಯಲ್ಪ ಕಾಣಿಕೆ. ■

## ಕ್ಯಾ 'ಸೀನ್' ಹೈ

ಕೆ.ಎಸ್.ಸೋಮೇಶ್ವರ

ತೊಂಭತ್ತರ ದಶಕದಲ್ಲಿ ಅದೊಂದು ಹಿಂದಿ ಟಿವಿ ವಾಹಿನಿಯಲ್ಲಿ 'ವಾಹ್ ಕ್ಯಾ ಸೀನ್ ಹೈ:' ಎಂಬೊಂದು ರಸ ಮಯ ಕಾರ್ಯಕ್ರಮ ಪ್ರಸಾರವಾಗುತ್ತಿತ್ತು. ನಮ್ಮಂತಹ ವೀಕ್ಷಕರಿಗೆ ಅಕ್ಷೀ ಎನ್ನಲೂ ಬಿಡದೆ ಅದು ನಮಗಳ ಮುಂದೆ ಕುಣಿಯುತ್ತಿತ್ತು.. ನಮ್ಮ ಕಸ್ತೂರಿ ಕನ್ನಡದಲ್ಲಿ ಈ ಸೀನ್‌ಗೆ ಬಹಳ ಗುರುತರ ಮರ್ಯಾದೆ ಇದೆ. ನಮ್ಮ ಏಳು ಕೊಂಡಲವಾಸಿ ಶ್ರೀಮನ್ನಾರಾಯಣ ಅದೇ ಶ್ರೀನಿವಾಸ ಅಲ್ಲವೇ. ಅವನ ಹೆಸರು ಮನೆಮಾತಾಗಿರಲು ನಾವುಗಳು ನಮಗಳ ನಾಮಧೇಯದಲ್ಲೇ ಅವನನ್ನೇ ಆಹ್ವಾನಿಸಿಕೊಂಡು ಬಿಡುತ್ತೇವೆ. ಈ ಶ್ರೀನಿವಾಸ ಕೆಲವೊಮ್ಮೆ ಮುದ್ದಿನಿಂದ ಶೀನ ಅಥವಾ ಸೀನ ಮತ್ತು ಸೀನಿಯೂ ಅಗಬಹುದು. ಇನ್ನು ಕೆಲವೆಡೆ ಶೀನ್ಯಾನೂ ಸರಿಯೇ. ಆ ಹೆಸರು ಹೊತ್ತವರಿಗೆ ಗೌರವ ಸೂಚಿಸಲು ಸೀನಪ್ಪ ಅಥವಾ ಶೀನಪ್ಪ ಅಂತಲೂ ಹೇಳುತ್ತೇವೆ. ನಮ್ಮ ಅಂದಿನ ರೇಡಿಯೋ ನಿರೂಪಕಿಯೊಬ್ಬರು ಸಂಗೀತದ ವಾದ್ಯ ವೃಂದದವರ ಪರಿಚಯ ಮಾಡುವಾಗ ಅವರೊಬ್ಬ ತಬಲ ವಾದಕರನ್ನು ಅವರದೇ ನಿರ್ವಿಕಾರ ದನಿಯಲ್ಲಿ ಡಿ.ಸೀನಪ್ಪ ತಬಲ ಎನ್ನುತ್ತಿದ್ದರು.

ಇದೆಲ್ಲ ಶ್ರೀನಿವಾಸ ಸೀನನಾದ ಕಥೆಗಳಾಯಿತು. ಆದರೆ, ನಮ್ಮ ಸೀನ್ ಗೆ ಅದೇನು ಇಷ್ಟೊಂದು ಸಿನಿಕತನ ಎಂದು ಯೋಚಿಸಬೇಕಾಗುತ್ತದೆ ಅಲ್ವೇ. ಇದೇ ಪದದ ಆಂಗ್ಲ ಸೀನ್ ಆದರೆ ಅದು ಚಲನ ಚಿತ್ರಗಳಲ್ಲಿ ಬರುವ ಒಂದೊಂದು ಸೀನ್‌ಗಳು. ಅದೂ ನವರಸ ಭರಿತ ವಾಗಿ ನೋಡುಗರ ಕಣ್ಗಳ ತಣಿಸುತ್ತಿರುತ್ತದೆ.

ನಮ್ಮಲ್ಲಿ ಮೂಗಿರುವ ತನಕ ನೆಗಡಿ ಬರದಿರುತ್ತದೆಯೇ ಎಂಬ ಆಡು ಮಾತಿದೆ.. ಅದೇ ರೀತಿ ನೆಗಡಿ ಬಂದರೆ ಮೂಗು ಅದರ ದಿವ್ಯಾಂಗ ಸುಮ್ಮನೆ ಮೂಗು ಮುಚ್ಚಿ ಕುಳಿತಿರಲಾಗುತ್ತದೆಯೇ. ಅದರ ಎರಡು ದ್ವಾರಗಳಿಂದ ಸೊರ ಬರದ ಜೊತೆಗೇ "ಆಕ್ಷೀ" ಎನ್ನುವ ಸೀನಿನರವ ಬರಲೇ ಬೇಕಲ್ಲವೇ. ಅದಿಲ್ಲದಿದ್ದರೆ ಆ ನಾಸಿಕ ಮತ್ತದರ ದ್ವಾರದಿಂದ ಹೊರ ಬರುವ ನೆಗಡಿಗೆ ಅದೇನು ಬೆಲೆ ಇರುತ್ತದೆ ಅಲ್ಲವೇ. ಹಾಗಾಗಿ ಈ ನೆಗಡಿಗೆ ಅದೇನು ಔಷಧಿ ಇದೆಯೋ ಇಲ್ಲವೋ ತಿಳಿಯದು ಈ ಸೀನಾಟಕ್ಕಂತೂ ಬೆಲೆ ಕೊಡಲೇ ಬೇಕು. ಅದೊಬ್ಬ ಆಯುರ್ವೇದ ಪಂಡಿತರು ಹೇಳಿದಂತೆ ನೆಗಡಿಗೂ ಔಷಧ ಇದೆಯಂತೆ. ಅದೇನೆಂದರೆ ಬೆಟ್ಟದ ನೆಲ್ಲಿ ಕಾಯಿಗಳನ್ನು ಜೇನು ತುಪ್ಪದಲ್ಲಿ 21 ದಿವಸ ಮುಳುಗಿಸಿ ಇಡಬೇಕಂತೆ. ನಂತರ ಅವುಗಳನ್ನು ತೆಗೆದು ನೆಲ್ಲಿ ಮಿಶ್ರಿತ ಜೇನು ಸೇವನೆ ನಿಮಗೆ ನೆಗಡಿಯನ್ನು ಮೂಗು ಮುರಿಯುವಂತೆ ಮಾಡುತ್ತದಂತೆ.

ಮೇಲೆ ಹೇಳಿದಂತೆ ಮೂಗಿರುವವರೆಗೂ ನೆಗಡಿ ಇರಲೇ ಬೇಕು (ಮೂಗು ಕತ್ತರಿಸಿ ಪಕ್ಕದಲ್ಲಿಡಲು ನಾವೇನೂ ಶೂರ್ಪ ನಖ/ನಖಿಯರಲ್ಲವಲ್ಲ. ಲಕ್ಷ್ಮಣನಂತೂ ಇರಲು ಸಾಧ್ಯವೇ ಇಲ್ಲ) ಅದು ನಮಗೆ ನಮಗಳ ಕ್ರಿಯೇಟರ್ ನೀಡಿರುವ ಬ್ರಹ್ಮದತ್ತ ಕೊಡುಗೆ ಅಲ್ಲವೇ. ಇನ್ನು ಈ ಮೂಗುಗಳಲ್ಲಿ ವಿಧ ವಿಧ. ಮೊಂಡು ಮೂಗಿನಿಂದ ಚೂಪು ಮೂಗು, ಗಿಣಿ ಮೂಗು, ದೊಣ್ಣೆ ಮೂಗು ಹೀಗೆ ಅನೇಕಾನೇಕ ರೂಪದಲ್ಲಿ ಅವತರಿಸಿರುತ್ತದೆ. ಅದೊಬ್ಬ ಹಾಸ್ಯ ನಟರು ತಮ್ಮ ಮೂಗನ್ನೇ ತಮ್ಮ ಹೆಸರಿಗೆ ಕಿರೀಟ ಮಾಡಿಕೊಂಡು ಜನಪ್ರಿಯರಾಗಿದ್ದಾರೆ.

ಇಷ್ಟೊಂದು ಮೂಗಿನ ಕಥೆಯನ್ನು ನಮಗಳ ಮೂಗಿನ ನೇರಕ್ಕೇ ಹೇಳಿಕೊಂಡರೂ

ಅದರಿಂದ ಹೊರ ಬರುವ ನಿನಾದ ಮಾತ್ರ ಕರ್ಣಾನಂದವೇ ಸರಿ. ಅದು ನಮಗಳ ಮೂಗಿನ ಕೆಳಗೇ ಇರುವಂತಹುದಾಗಿರುತ್ತದೆ. ಅದರ ವಿವಿಧ ಸದ್ದು ತನ್ನದೇ ಆದ ರಮ್ಯತೆಯನ್ನು ಹೊಂದಿದೆ. ಬಹಳ ವರುಷಗಳ ಹಿಂದೆ ನಮ್ಮ ಮನೆಯ ಬಳಿ ಇದ್ದಾತ ಒಬ್ಬ ದಿನಾ ಬೆಳಿಗ್ಗೆ ಒಂಭತ್ತು ಘಂಟೆಗೆ ಸರಿಯಾಗಿ ನಮ್ಮ ಮನೆಯ ಮುಂದೆ ಬಂದಾಗ 'ಆಕ್ಷೀ' ಎಂದು ಸೀನುತ್ತಿದ್ದ. ಅಲ್ಲೇ ಸೀನ ಬೇಕೆಂದು ಅವನಿಗೆ ಅದಾವ ಪ್ರೊವೊಕೇಷನ್ನೋ ತಿಳಿಯದು. ನಮಗೆ ಸೀನಿನ ರವ ವಂತೂ ಗ್ಯಾರಂಟಿ. ಇನ್ನು ಈ ಶೀನಿನ ಸಿನಿಕತನವೆಂದರೆ ಅದೊಂದು ಸಾಂಕ್ರಾಮಿಕ. ಒಬ್ಬರು ತಮ್ಮ ಮೂಗಲ್ಲಿ ಆಕ್ಷಿಸಿ ಕ್ಯಾ ಸೀನ್ ಎಂದರೆ ಸಾಕು ಅದು ಸುತ್ತಲಿದ್ದವರೆನ್ನೆಲ್ಲಾ ಪ್ರಚೋದಿಸಿ ಎಲ್ಲರನ್ನೂ ಸೀನಪ್ಪಗಳನಾಗಿ ಮಾಡಿ ಬಿಡುತ್ತದೆ. ಇನ್ನು ನಾವುಗಳು ರಸ್ತೆಗಳಲ್ಲಿ ನಡೆದಾಡುವ ಗೊಂಬೆಗಳು. ಅಲ್ಲೇನಾದರೂ ಮಾರುತ ರಾಯ ಬೀಸಿ ಧೂಳೆಬ್ಬಿಸಿದರೆ ಅದು ನಾಸಿಕಕ್ಕೆ ಪ್ರಚೋದಿಸಿದಂತಾಗಿ ಸೀನು ಗ್ಯಾರಂಟಿ. ಇನ್ನು ಕೆಲವರು ತಮ್ಮ ದೇಹ ಪರಿಮಳವನ್ನು ಸೂಸಲು ಕೆಲವು ಸುಗಂಧ ದ್ರವ್ಯಗಳನ್ನು ಪೂಸಿಕೊಂಡಿರುತ್ತಾರೆ. ಅದರಲ್ಲಿರುವ ಆಲ್ಕೋಹಾಲು ಅವರ ಬಳಿ ಇರುವ ಕೆಲವರಿಗೆ ಮತ್ತೇರಿಸಿ ಅವರು ಅದನ್ನು ಮೂಗಿನ ಹೊಳ್ಳೆಗಳಿಂದ ಸದ್ದು ಮಾಡಿ ಹೊರ ಹಾಕುತ್ತಾರೆ. ಗುಂಡಿನ ಮತ್ತೇ ಗಮ್ಮತ್ತಲ್ಲವೇ....

ಅದೆಲ್ಲ ಬದಿಗೆ ಸರಿಸಿದರೆ ನಮಗಳ ಅಡುಗೆ ಮನಯಲ್ಲಿ ಈ ಸೀನನ ರಂಪಾಟ ಹೇಳ ತೀರದು. ರಸನ ತಣಿಸುವ ರುಚಿಕಟ್ಟಾದ ಪಾಕ ಮಾಡಲು ಮಸಾಲೆ ಪುಡಿ ಅತ್ಯವಶ್ಯಕ. ಅದರ ತಯಾರಿಗೆ ಬಾಣಲೆಯನ್ನು ಉರಿಯುವ ಒಲೆಯ ಮೇಲೆ ಬಿಸಿ ಮಾಡಿ ಅದರೊಳಗೆ ಮೆಣಸಿನಕಾಯಿ, ಧನಿಯ ಇನ್ನಿತರ ಸಂಬಾರ ಗಳನ್ನು ಹಾಕಿ ಅದು ಕಾವೇರಿದರೆ ಸಾಕು ಇಡೀ ಮನೆಯೆಲ್ಲ ಸೀನು ಮಯವೇ ಸರಿಯೇ. ಈಗ ಬಿಡಿ ಇಂತಹ ಮಸಾಲೆಗಳೆಲ್ಲ ಯಾರೋ ಅರೆದು ಪಾಕೀಟಿನಲ್ಲಿಟ್ಟು ರೆಡಿಮೇಡ್ ಆಗಿ ಅಮ್ಮಮ್ಮ ಮಾಡಿದ ಮನೆ ಮಸಾಲೆ ಅಂತ ಕುಣಿಸುತ್ತಾರೆ. ಆದರೇನು ಮೂಗಿರುವ ತನಕ ಹೇಗೆ ನೆಗಡಿ ಶಾಶ್ವತವೋ ಅದು ಈ ಸೀನಿಗೂ ಅನ್ವಯವಾಗುತ್ತದೆ. ಅದಕ್ಕೆ ಕಾರಣ ಹುಡುಕುವ ಗೋಜಿಗೆ ಹೋಗದೇ ಅದರ ದಿವ್ಯಾನಂದವನ್ನು ಅನುಭವಿಸಿ ಜೀವಿಸಿ.

ಈ ರೀತಿಯ ಸಾಂಕ್ರಾಮಿಕಕ್ಕೆ ಅದೇನಾದರೂ ಲೇಹ್ಯ, ಚೂರ್ಣ ಸಿಗುತ್ತದೆಯೇ? ಆ ಆಶ್ವಿನಿ ದೇವತೆಗಳಿಗೆ ಮತ್ತು ಧನ್ವಂತರಿಗಳಿಗೇ ಇದಕ್ಕೆ ಮದ್ದು ಅರೆಯಲು ಸಾಧ್ಯವಾಗದಿರುವಾಗ ನಾವು ಹುಲು ಮಾನವರೇನು ಮಾಡಲು ಸಾಧ್ಯ.. ಇತ್ತೀಚೆಗೆ ಮನೆಯ ಬಳಿಯಲ್ಲಿ ಅದೊಬ್ಬ ಮೋಟಾರ್ ಸೈಕಲ್ ಸವಾರ ಸುಮಾರು ಅರ್ಧ ಕಿಲೋ ಮೀಟರ್ ತನಕವೂ ಆಕ್ಷಿ ಎನ್ನುತ್ತಲೇ ರೈಡಿಂಗ್ ಸೀನ್ ಮಾಡುತ್ತಿದ್ದರು. ಅದೊಂದು ರೀತಿಯಲ್ಲಿ ಇತರೆ ಸವಾರರಿಗೆ ದಾರಿ ಬಿಡಿ ಎನ್ನುವ ಎಚ್ಚರಿಕೆ ಘಂಟೆಯಂತೆಯೂ ಇದ್ದಿತು ಇನ್ನೊಬ್ಬರು ನಮ್ಮ ಮನೆಯ ಬಳಿಯೇ ಇದ್ದಾರೆ. ಅವರಿಗೆ ದಿನವೂ ಹಲ ಬಾರಿ ಸೀನದಿದ್ದರೆ ಅದೂ ವಿವಿಧ ತರಂಗಗಳಲ್ಲಿ ಅದು ಶುಭ ಶುಭ್ರ ದಿನವೇ ಅಲ್ಲವೇನೋ ಎನಿಸಿ ಅದು ಸೀನ್ ಲೆಸ್ ಆಗಿರುತ್ತದೆ. ಆ ಮನೆಯ ಮಾಲೀಕ ತಮ್ಮ ಮನೆಗೊಂದು ಸುಂದರ ನಾಮಕರಣ ಮಾಡಿ ಬೆನ್ನು ತಟ್ಟಿಕೊಂಡಿದ್ದಾರೆ. ಆದರೆ, ಇವರ ಬಗೆ ಬಗೆಯ ಸೀನಾಟಗಳ ನೋಡಿದಾಗ ಅಲ್ಲ ಕೇಳಿದಾಗ ಆ ಸುಂದರ ಭವನಕ್ಕೆ 'ಸೀನ್ ವಿಲ್ಲಾ" ಎಂದು ಫಲಕವನ್ನು ಲಗತ್ತಿಸಿದರೆ ಆ ಸೀನ್ ಗೊಂದು ಲಕ್ಷಣ ಬರುತ್ತದೆ. ಈ ಸೀನುಗಳ ಸೀನ್‌ಗಳು ಪ್ರಾಣಿಗಳನ್ನೂ ಬಿಟ್ಟಿಲ್ಲ. ಅದರಲ್ಲೂ ಸಾಕು ಅಥವಾ ಬೀದಿ ಶುನಕಗಳು. ಅವೂ ಅಷ್ಟೇ ನಾವು ಯಾರಿಗೇನೂ ಕಡಿಮೆಯಿಲ್ಲ ಎನ್ನುವಂತೆ ಸೀನಿ ತಮ್ಮ ಇರವನ್ನು ಅಚ್ಚಾಗಿಸಿವೆ. ಇದು ಇತರೆ ಮೂಗಿರುವ ಪ್ರಾಣಿಗಳಿಗೂ ಬರಬಹುದೇನೋ

ನನಗೆ ತಿಳಿಯದು. ಇದು ಜಲಚರಗಳು ಅದರಲ್ಲೂ ಧಡೂತಿ ದೇಹದ ಮೊಸಳೆ ತಿಮಿಂಗಿಲ ಗಳಿಗೆ ಬಂದರೆ ಸಮುದ್ರದಲ್ಲಿ ಅದೇನು ಪಲ್ಲಟವಾಗುತ್ತದೆಯೋ ಆ ಸೀನಪ್ಪನೇ ಹೇಳ ಬೇಕು. ಏಕೆಂದರೆ, ಅವನೇ ತಾನೇ ದೇವ ದಾನವರಿಂದ ಸಮುದ್ರ ಮಥನ ಮಾಡಿಸಿದ್ದು ಆಗ ಸಮುದ್ರದ ಉಬ್ಬರವಿಳಿತ ಭೋರ್ಗರೆತ ಈ ಮತ್ಸ್ಯ ಕೂರ್ಮಗಳ ಸೀನಾಟ ಹೇಗಿದ್ದಿತೋ ಯಾರಿಗೆ ಗೊತ್ತು. ಅದರಲ್ಲಿ ಸಿಕ್ಕಿದ ಅಮೃತ ಮಾತ್ರ ಆ ಶ್ರೀನಿವಾಸ ಮೋಹಿನಿ ಯಾಗಿ ಮೋಹಿನಿ ಅಟ್ಟಂ ನರ್ತನ ಮಾಡುತ್ತ ಆ ಗಡಿಗೆಯನ್ನು ಹೊತ್ತೊಯ್ದು ಎನ್ನುತ್ತದೆ ಪುರಾಣಗಳು.

■

## ಗಳಸ್ಯ ಕಂಠಸ್ಯ ಸ್ನೇಹಿತರು

–ವಿವಿ. ವಿಜಯೇಂದ್ರ ರಾವ್

ಬಾಲ್ಯದಿಂದಲೂ ಗಳಸ್ಯ ಕಂಠಸ್ಯರಾಗಿದ್ದ ಕಿಟ್ಟು, ಪುಟ್ಟು, ಸೋಮು ನಿವೃತ್ತಿಯ ನಂತರ ಮತ್ತೆ ಬೆಂಗಳೂರಿನಲ್ಲಿ ಸೇರಿದ್ದಾರೆ. ಈಗಂತೂ ಮೂವರಿಗೂ ಎಂಭತ್ತು ದಾಟಿರುವುದರಿಂದ, ವಯೋಸಹಜ ಮರೆವಿನ ಕಾಯಿಲೆ ಅವರನ್ನು ತುಂಬಾನೆ ಭಾದಿಸುತ್ತಿದೆ.

ಇತ್ತೀಚಿಗೆ ಒಮ್ಮೆ ಸೋಮು ಹೆಂಡತಿ ಊರಲ್ಲಿ ಇಲ್ಲದಿದ್ದಾಗ, ಅವನು ತನ್ನ ಗೆಳೆಯರಿಗೆ ಫೋನ್ ಮಾಡಿ – ಲೋ ಕಿಟ್ಟು, ಪುಟ್ಟು ನಮ್ಮನೆಗೆ ಬನ್ರೋ, ನಂಗೂ ಒಬ್ಬನೇ ಇದ್ದು ಬೇಜಾರಾಗಿದೆ ಎಂದಿದ್ದಕ್ಕೆ, ಅವರಿಬ್ಬರೂ ಸೋಮು ಮನೆಗೆ ಹೋದರು.

ಅದು ಇದು ಹರಟೆ ಹೊಡೆದ ಮೇಲೆ, ಸೋಮು – ಸ್ವಲ್ಪ ಕೂತಿರಿ, ಚಹಾ ಮಾಡಿಕೊಂಡು ಬರ್ತೀನಿ ಅಂತ ಹೇಳಿ ಮೂರು ಕಪ್ಪು ಗಳಲ್ಲಿ ಚಹಾ ತಂದು ಕೊಟ್ಟ. ಆಮೇಲೆ ಸ್ನೇಕ್ ಅಂಡ್ ಲ್ಯಾಡರ್ ಆಟ ಆಡುತ್ತಾ ಇದ್ದಾಗ, ಸೋಮು ನೀವು ಬಂದು ಎಷ್ಟೊಂದು ಹೊತ್ತಾಯಿತು ಎಂದು ಮತ್ತೆ ಹೋಗಿ, ಚಹಾ ಮಾಡಿಕೊಂಡು ಬಂದು ಕೊಟ್ಟ. ಆ ಆಟ ಬೇಜಾರಾಗಿ, ನಂತರ ಸ್ವಲ್ಪ ಹೊತ್ತು ಚೆಸ್ ಆಟ ಆಡಿದ ನಂತರ, ಕಿಟ್ಟು – ಲೋ ಸೋಮು ಆಗ್ಲಿಂದ ಆಟ ಆಡ್ಕೊಂಡೇ ಇದ್ದೀವಿ. ನಮಗೂ ಬಾಯಾರಿಕೆ, ಆಗಲ್ವಾ ? ಎಂದಾಗ, ಸೋಮು – ಸಾರಿ ಕಣ್ರೋ ಅಂತ ಅವಸರದಿಂದ ಅಡಿಗೆ ಮನೆಗೆ ಹೋಗಿ ಚಹಾ ಮಾಡಿಕೊಂಡು ಬಂದ. ಚಹಾ ಆರಾಮವಾಗಿ ಕುಡಿದ ನಂತರ ಸೋಮು, ನಾವಿನ್ನು ಬರ್ತೀವಿ ಅಂತ ಹೇಳಿ ಅಲ್ಲಿಂದ ನಿರ್ಗಮಿಸಿದರು ಕಿಟ್ಟು,ಪುಟ್ಟು.

ಮೆಟ್ಟಿಲು ಇಳಿದು ಹೋಗುವಾಗ, ಕಿಟ್ಟು ಪುಟ್ಟುವಿನ ಹತ್ತಿರ–ಅಲ್ಲಾ ಪುಟ್ಟು, ನಾವು ಅಷ್ಟು ಹೊತ್ತು ಅವರ ಮನೇಲಿ ಇದ್ರೂ, ಒಂದು ಸರ್ತೀನೂ, ಕಾಟಾಚಾರಕ್ಕಾದರೂ ನಮ್ಮನ್ನು ಚಹಾ ಕುಡೀತೀರಾ ಅಂತ ಕೇಳಲಿಲ್ಲ ಅಂತ ಅವರಿಬ್ಬರೂ ಅಲವತ್ತುಕೊಂಡರು.

ಇವರಿಬ್ಬರೂ ಗೇಟು ದಾಟಿ ಆಚೆ ರಸ್ತೆಯಲ್ಲಿ ಹೋಗುತ್ತಿದ್ದಾಗ, ಸೋಮು ಅವರಿಬ್ಬರನ್ನು ನೋಡಿ– ಕಿಟ್ಟು, ಪುಟ್ಟು ನಮ್ಮನೆ ಮುಂದೇನೆ ಹೋಗ್ತಾ ಇದ್ದಾರೆ, ನನ್ನನ್ನು ಮಾತಾಡಿಸಿ ಹೋಗ್ಬೇಕೂ ಅಂತ ಅವರಿಗೆ ಅನ್ನಿಸ್ತಾನೆ ಇಲ್ಲವಲ್ಲ ಅಂತ ಜೋರಾಗಿ – ಲೋ ಕಿಟ್ಟು ಪುಟ್ಟು, ಏನ್ರೋ ಹಾಗೆ ಹೋಗ್ತಾ ಇದ್ದೀರಾ ಅಂತ ಹೇಳಿದಾಗ, ಅವರಿಬ್ಬರೂ ಹಿಂತಿರುಗಿ ನೋಡಿ – ಓಹ್, ನಮ್ಮ ಸೋಮು ಮನೆ, ಸಾರಿ ಕಣೋ, ಗೊತ್ತಾಗಲಿಲ್ಲ ಅಂತ ಹೇಳಿ, ಮತ್ತೆ ಮೆಟ್ಟಿಲೇರುತ್ತಾ ಅವನ ಮನೆಯೊಳಗೆ ನುಸುಳಿದರು...!